
ಸಾಹಿತ್ಯ ದಾಸೋಹ – ೧೯೩



೧೯೩ನೇ ಸಾಹಿತ್ಯ ದಾಸೋಹದಲ್ಲಿ ವಾಚಿಸಿದ ಕತೆ, ಕವನ, ಲೇಖನ, ವರದಿಗಳು



ಸಮನ್ವಯ ಸಮಿತಿ ★ ನೋಡಿಯೋ ಸಾಹಿತ್ಯ ವೇದಿಕೆ ★ ಕನ್ನಡವೇ ಸತ್ಯ

ಸಾಹಿತ್ಯ ದಾಸೋಹ ೧೯೩

೨೮ನೇ ಆಗಸ್ಟ್ ೨೦೨೦ರಂದು ನಡೆದ 'ಸಾಹಿತ್ಯ ದಾಸೋಹ ೧೯೩' ರಲ್ಲಿ ವಿವಿಧ ಪ್ರತಿಭಾನ್ವಿತರು ವಾಚಿಸಿದ ಪ್ರಸ್ತುತಿಗಳನ್ನು ಪಿಡಿಎಫ್ ರೂಪದಲ್ಲಿ ಓದುಗರ ಕೈಗಿರಿಸಲು ಸಂತಸವೆನಿಸುತ್ತದೆ.

ನೋಇಡಿಯೋ ಸಾಹಿತ್ಯ ದಾಸೋಹವು ಅಂತರ್ಜಾಲ ವ್ಯವಸ್ಥೆಯಲ್ಲಿ ನಡೆದ ಐವತ್ತನೆಯ ಕಾರ್ಯಕ್ರಮವೆಂಬುದು ಮತ್ತೊಂದು ಅಭಿಮಾನದ ಸಂಗತಿಯಾಗಿದೆ.

ಮಾಸದಿಂದ ಮಾಸಕ್ಕೆ ದಾಸೋಹದ ಪ್ರಸ್ತುತಿಗಳು ಗುಣಮಟ್ಟದಲ್ಲಿ ಹಾಗೂ ವೈವಿಧ್ಯದಲ್ಲಿ ಹೊಸತನ ಕಂಡುಕೊಳ್ಳುತ್ತಿರುವುದು ಸ್ವಾಗತಾರ್ಹ.

ಸಾಹಿತ್ಯ ದಾಸೋಹ ೧೯೩ರ ಅಧ್ಯಕ್ಷತೆ ವಹಿಸಿ ಪ್ರಸ್ತುತಿಗಳ ಬಗ್ಗೆ ಸಮಗ್ರ ವಿಶ್ಲೇಷಣೆ ನೀಡಿದ ಶ್ರೀ ಬಿ.ಆರ್.ರವೀಂದ್ರನಾಥ್ ಅವರಿಗೆ ವಂದನೆಗಳು. ಲೇಖನಗಳನ್ನು ಪ್ರಸ್ತುತಿ ಪಡಿಸಿದ ಎಲ್ಲ ದಾಸೋಹಿ ಸಾಹಿತ್ಯಾಸಕ್ತರಿಗೂ ಕೃತಜ್ಞತೆಗಳು.

ಎಂದಿನಂತೆ ಈ ಬಾರಿಯೂ ಎಲ್ಲ ಬರಹಗಳ ಪಿಡಿಎಫ್ ರೂಪವನ್ನು ಅಚ್ಚುಕಟ್ಟಾಗಿ ಹಾಗೂ ಆಕರ್ಷಕವಾಗಿ ಸಿದ್ಧಪಡಿಸಿದ ಶ್ರೀ ಶೃಂಗೇಶ್ವರ ಶರ್ಮ ಅವರಿಗೆ ನಮ್ಮ ನಮನಗಳು.

ಕೃತಿಗಳನ್ನು ಓದಿ ಸಸಕಸ ವೇದಿಕೆಗಳಲ್ಲಿ ನಿಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಕೋರಿಕೆ.

ಧನ್ಯವಾದಗಳೊಂದಿಗೆ,

ಸಂಚಾಲಕ ಸಮಿತಿ

೨೫ ಸೆಪ್ಟೆಂಬರ್ ೨೦೨೦

ನೋಇಡಿಯೋ ಸಾಹಿತ್ಯ ದಾಸೋಹ ವೇದಿಕೆ

ದಾಸೋಹದ ಪುಟಗಳಲ್ಲಿ......

ಸಾಹಿತ್ಯ ದಾಸೋಹ ೧೯೩ – ಕಾರ್ಯಕ್ರಮ ವರದಿ

ದಿನಾಂಕ .೨೮.೦೮.೨೦೨೧ರ ಶನಿವಾರ ೩.೩೦ಕ್ಕೆ ಕಾರ್ಯಕ್ರಮ ಆರಂಭವಾಯ್ತು. ಶ್ರೀ ಕೆ.ಎನ್.ಮಹಾಬಲ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿ ಕಾರ್ಯಕ್ರಮ ನಿರೂಪಿಸಿದರು.



ಶ್ರೀಮತಿ ಸರಸ್ವತಿ ನಟರಾಜ್‌ರವರು ದಾಸೋಹದ ಎಲ್ಲ ಪ್ರಸ್ತುತಿಕಾರರನ್ನೂ, ವೀಕ್ಷಕರನ್ನೂ ಸ್ವಾಗತಿಸಿ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಬಿ.ಆರ್. ರವೀಂದ್ರನಾಥ್ ಅವರನ್ನು ಪರಿಚಯಿಸಿದರು. ಶ್ರೀ ರವೀಂದ್ರನಾಥ್ ಅವರು ಬಿಎಸ್ಸಿ, ಎಲ್.ಎಲ್.ಬಿ. ಪದವೀಧರರು. ಯುಕೋ ಬ್ಯಾಂಕ್, ಪಂಜಾಬ್ ನ್ಯಾಶನಲ್ ಬ್ಯಾಂಕ್, ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಸೇವೆ ಸಲ್ಲಿಸಿರುವ ಇವರು ಹಲವು ಸಾಮಾಜಿಕ ಸಂಸ್ಥೆಗಳಲ್ಲಿ ಅನೇಕ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಬಿಎಂಶ್ರೀ ಪ್ರತಿಷ್ಠಾನದ ಗೌರವ ಕಾರ್ಯದರ್ಶಿಯಾಗಿ, ಅಖಿಲ ಭಾರತ ಅನುವಾದಕರ ಸಂಘದ ಉಪಾಧ್ಯಕ್ಷರಾಗಿ, ಹಲವಾರು ಸಹಕಾರಿ ಬ್ಯಾಂಕುಗಳ ಆಡಳತಾಧಿಕಾರಿಯಾಗಿ, ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ. ಪುರಾಣಗಳಲ್ಲಿ ಮೆನೇಜ್ಮೆಂಟ್, ಹಣಕಾಸು ನಿರ್ವಹಣೆ ಹೇಗೆ?, ಹಣಕಾಸು ಹೂಡಿಕೆ ಮತ್ತು ವೃದ್ಧಿ ಹೇಗೆ?, ಗೃಹಸಾಲ ಸಮಗ್ರ ಕೈಪಿಡಿ, ಆಸ್ತಿ ಇದ್ದರೂ ನಾಸ್ತಿ(ನಾಟಕ) ಇತ್ಯಾದಿ ಆರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಸಹದೇವನ ಹತಾಶೆ ಎಂಬ ಕಥಾ ಸಂಕಲನ ಅಚ್ಚಿನಲ್ಲಿದೆ. ವಿತ್ತೀಯ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಉಪನ್ಯಾಸಗಳನ್ನು ನೀಡಿರುವರಲ್ಲದೆ ಹಲವು ಪತ್ರಿಕೆಗಳಿಗೆ ಲೇಖನ ಗಳನ್ನು ಬರೆದಿದ್ದಾರೆ. ಟೈಮ್ಸ್ ಆಫ್ ಇಂಡಿಯಾ, ಹೊಸದಿಗಂತ, ವಿಜಯ ಕರ್ನಾಟಕ ಮೊದಲಾದ ಪತ್ರಿಕೆಗಳ ಅಂಕಣಗಾರಾದ ಇವರು ಖ್ಯಾತ ಲೇಖಕಿ ಶ್ರೀಮತಿ ನಿರುಪಮಾರವರ ಪುತ್ರರು ಎಂದು ಪರಿಚಯಿಸಿ ಸ್ವಾಗತಿಸಿದರು.

ನಂತರ ವೇದಿಕೆಯ ಸದಸ್ಯರು ತಮ್ಮ ಪ್ರಸ್ತುತಿಗಳನ್ನು ಮಂಡಿಸಿದರು.

ಕಾರ್ಯಕ್ರಮದ ನಡುವೆ, ಶ್ರೀ ಎಸ್. ಶೃಂಗೇಶ್ವರ ಶರ್ಮರವರು ಸಾಹಿತ್ಯ ದಾಸೋಹ ೧೯೨ರ ಪಿಡಿಎಫ್ ಸಂಚಿಕೆಯನ್ನು ಬಿಡುಗಡೆ ಮಾಡಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಬಿ.ಆರ್.ರವೀಂದ್ರನಾಥ್‌ರವರು ನಾಗರೀಕ ಸೇವಾ ಪರೀಕ್ಷೆಗಳಲ್ಲಿ ಮಾಧ್ಯಮ ಭಾಷೆಯಾಗಿ ಕನ್ನಡ ಎಂಬ ತಮ್ಮ ಲೇಖನವನ್ನು ಪ್ರಸ್ತುತಪಡಿಸಿದರಲ್ಲದೆ, ಇಂದಿನ ದಾಸೋಹದ ಎಲ್ಲ ಪ್ರಸ್ತುತಿಗಳ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ ಎಲ್ಲರನ್ನೂ ಅಭಿನಂದಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ಶ್ರೀಮತಿ ರಾಧಿಕಾ ಗುಜ್ಜರ್‌ರವರು, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಬಿ. ಆರ್.ರವೀಂದ್ರನಾಥ್‌ರವರಿಗೆ, ಸ್ವಾಗತ ಕೋರಿದ ಶ್ರೀಮತಿ ಸರಸ್ವತಿ ನಟರಾಜ್‌ರವರಿಗೆ, ದಾಸೋಹದ ಸಂಚಾಲಕರಾದ ಶ್ರೀ ಕೆ ಎನ್ ಮಹಾಬಲ ರವರಿಗೆ, ಪಿಡಿಎಫ್ ಪ್ರತಿ ಸಿದ್ಧಪಡಿಸಿದ ಶ್ರೀ ಶೃಂಗೇಶ್ವರ ಶರ್ಮರಿಗೆ, ಜಿಮೀಟ್ ಆತಿಥ್ಯ ನೀಡಿದ ಶ್ರೀ ಹು.ವಾ. ಶ್ರೀಪ್ರಕಾಶ್‌ರವರಿಗೆ, ತಾಂತ್ರಿಕ ನಿರ್ವಹಣೆ ಮಾಡಿದ ಶ್ರೀ ಗುರುರಾಜ ಹಾಲ್ಕುರಿಕೆ, ಗುರುರಾಜ ಶಾಸ್ತ್ರಿ ಹಾಗೂ ರವೀಂದ್ರ ಬಾಳಹಳ್ಳಿಯವರಿಗೆ ಮತ್ತು ಲೇಖನ ಪ್ರಸ್ತುತಪಡಿಸಿದವರಿಗೂ, ವೀಕ್ಷಕರಿಗೂ ವಂದನೆಗಳನ್ನು ಅರ್ಪಿಸಿದರು.

ವರದಿ: ಹುವಾಶ್ರೀ
ಸಂಚಾಲಕ ಸಮಿತಿ ಪರವಾಗಿ.

‘ಟಿಕ್ ಟಿಕ್’ ಗೆಳೆಯನ ಆಳ ಅಂತರಿಕ್ಷ ಪಯಣ

- ಜಿ.ವಿ. ನಿರ್ಮಲ

ಅಮೆರಿಕದ ಸಂಶೋಧನಾ ಸುದ್ದಿ ಪತ್ರಿಕೆ ‘ನೇಚರ್ನ ಜೂನ್ 30, 2021ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಸುದ್ದಿ-2019ರ ಜೂನ್ 25ರಂದು ಒಂದು ಪರಮಾಣು ಗಡಿಯಾರ ತನ್ನ ಅಂತರಿಕ್ಷ ಯಾನ ಪ್ರಾರಂಭಿಸಿ, ಆಗಸ್ಟ್ 23ರಿಂದ ಕ್ರಿಯಾಶೀಲವಾಗಿದೆ. ಇದರ ಪರೀಕ್ಷಾ ಅವಧಿಯನ್ನು ಆಗಸ್ಟ್ 2021ರ ವರೆಗೆ ವಿಸ್ತರಿಸಲಾಗಿದೆ –ಎಂದು ಓದಿದಾಗ ಆಶ್ಚರ್ಯವಾಯಿತು. ಇಂದು ಜಗತ್ತಿನಲ್ಲಿ ಉಳ್ಳವರು ಹಣ ಕೊಟ್ಟು ತಾ ಮುಂದು, ನಾ ಮುಂದು ಎಂದು ಅಂತರಿಕ್ಷಕ್ಕೆ ಜಿಗಿಯುವ ಸಾಹಸಕ್ಕೆ ಮುಂದಾಗುತ್ತಿರುವಾಗ ಒಂದು ಗಡಿಯಾರವನ್ನು ಅಂತರಿಕ್ಷಕ್ಕೆ ಕಳಿಸುವ ವಿಷಯಕ್ಕೆ ಇಷ್ಟೊಂದು ಮಹತ್ವವೇ? ಈ ಹಿಂದೆ ಅಂತರಿಕ್ಷ ಯಾನದಲ್ಲಿ ಯಾವ ಗಡಿಯಾರವೂ ಇರಲಿಲ್ಲವೇ? ಅಂತರಿಕ್ಷ ಯಾನಕ್ಕೆ ಗಡಿಯಾರ ಅಷ್ಟೊಂದು ಮುಖ್ಯವೇ? ಅದರಲ್ಲಿ ಪರೀಕ್ಷೆ ಮಾಡುವುದೇನಿದೆ? ಹೀಗೆ ಹಲವಾರು ಪ್ರಶ್ನೆಗಳು ಎದುರಾದವು.

ಮುಂದೆ ಓದಿದಾಗ ಇದು ಅಂತಿಥ ಗಡಿಯಾರವಲ್ಲ, ಇದು ಆಳ ಅಂತರಿಕ್ಷದ ಪರಮಾಣು ಗಡಿಯಾರ - Deep space atomic clock. ಇದರ ಉದ್ದ, ಅಗಲ, ಎತ್ತರ ಎಲ್ಲವೂ ಸುಮಾರು ಒಂದು ಅಡಿ. ಅಂದರೆ ಒಂದು ಕ್ಯೂಬ್ (cube) ನಂತೆ. ಈಗಿರುವ ಪರಮಾಣು ಗಡಿಯಾರಗಳಿಗಿಂತ ಚಿಕ್ಕದಾದ, ಅತಿ ಹಗುರವಾದ ಗಡಿಯಾರ. ಗಡಿಯಾರ ಹಗುರವಾದರೂ, ಇದರ ಸಾಧನೆ ಮಾತ್ರ ತೂಕವುಳ್ಳದ್ದೇ. ಅತ್ಯಂತ ನಿಖರವಾದ ಈ ಗಡಿಯಾರದಿಂದ ಅಳೆಯುವ ಸಮಯ ಹತ್ತು ವರ್ಷಗಳಲ್ಲಿ ಕೇವಲ ಒಂದು ಮೈಕ್ರೋಸೆಕೆಂಡುಗಳಷ್ಟು ಮಾತ್ರ ವ್ಯತ್ಯಾಸವಾಗುತ್ತದೆ; ಇದು ಆಳ ಅಂತರಿಕ್ಷ (deep space) ಪಯಣದ ಮತ್ತೊಂದು ಮೈಲಿಗಲ್ಲು! ಇದರ ಯಶಸ್ವೀ ಪ್ರಯೋಗದ ನಂತರ ಆಳವಾದ ಅಂತರಿಕ್ಷಕ್ಕೆ ಪಯಣಿಸುವ ಅಂತರಿಕ್ಷ ನೌಕೆಗಳ ನಿಯಂತ್ರಣದ ಸ್ವರೂಪವೇ ಬದಲಾಗುತ್ತದೆ ಎನ್ನುವ ಹಲವಾರು ವಿಚಾರಗಳು ಸ್ಪಷ್ಟವಾದವು.

ಆಳವಾದ ಅಂತರಿಕ್ಷ ಎಂದಾಗ ಅಂತರಿಕ್ಷಕ್ಕೂ ಆಳವಿದೆಯೇ ಎಂದು ಮತ್ತೊಂದು ಪ್ರಶ್ನೆ ಎದುರಾಯಿತು. ಅಂತರಿಕ್ಷ ವಿಜ್ಞಾನಿಗಳೇ ಹೇಳಿರುವಂತೆ ಭೂಮಿಯ ಸುತ್ತ ಚಂದ್ರನಿಂದ ಈಚೆ ಇರುವ ಅಂತರಿಕ್ಷದ ಭಾಗವನ್ನು ‘ ಸಿಸ್‌ಲ್ಯೂನಾರ್ ‘ (cislunar) ಅಂತರಿಕ್ಷ ಎನ್ನುತ್ತಾರೆ. ಚಂದ್ರನಿಂದ ಆಚೆಗಿರುವ ಪ್ರದೇಶವೇ ಆಳ ಅಂತರಿಕ್ಷ ಅಥವಾ deep space. ಸಾಗರದಾಳದಂತೆ ಅಂತರಿಕ್ಷದ ಆಳವನ್ನು ಕಾಣಲೂ ಮನುಜ ಕುಲಕ್ಕೆ ತುಡಿತವಿದೆ.

ಆಳ ಅಂತರಿಕ್ಷದ ಪರಮಾಣು ಗಡಿಯಾರ

ಹೀಗೆ ಆಳ ಅಂತರಿಕ್ಷದ ಪರಮಾಣು ಗಡಿಯಾರದ ಅಂತರಿಕ್ಷ ಪಯಣದ ಬಗ್ಗೆ ಆಲೋಚಿಸುತ್ತಾ ನಾನು ಕಾಲಕೋಶದಲ್ಲಿ ಹಿಂದೆ, ಬಹಳ ಹಿಂದೆ ಸಾಗಿದೆ. ಜಗತ್ತಿನಲ್ಲಿ ಪ್ರತಿ ಗಂಟೆಯ 60 ನಿಮಿಷ, ಪ್ರತಿ ನಿಮಿಷದ 60 ಸೆಕೆಂಡುಗಳನ್ನು ಅಳೆಯುವ ಪರಿಪಾಠ ಮತ್ತು ಅದರ ಅವಶ್ಯಕತೆ ಆರಂಭವಾದದ್ದು ಯಾವಾಗ? ಸೆಕೆಂಡಿಗಿಂತ ಕಡಿಮೆ ಕಾಲಾವಧಿಯನ್ನು ಅಳೆಯುವುದು ಅಗತ್ಯವೇ? ಇವತ್ತಿನ ತಂತ್ರಜ್ಞತೆಯಲ್ಲಿ ಅಳೆಯಲು ಸಾಧ್ಯವಿರುವ ಅತ್ಯಲ್ಪ ಕಾಲಾವಧಿ ಯಾವುದು? ಅದನ್ನು ಅಳೆಯುವುದು ಹೇಗೆ? ಎನ್ನುವ ಪ್ರಶ್ನೆಗಳು ಕಣ್ಮುಂದೆ ಸರಿದವು. ಒಂದಂತೂ ನಿಜ. ಮಾನವ ಜಾಗತಿಕ ಮಟ್ಟದಲ್ಲಿ ವೈಜ್ಞಾನಿಕವಾಗಿ ಮುಂದುವರಿಯುತ್ತಿರುವುದರಲ್ಲಿ ಅತ್ಯಲ್ಪ ಕಾಲಮಾನವನ್ನು ನಿಖರವಾಗಿ ಅಳೆಯುವುದು ಮಾನವರಿಗೆ ಅತ್ಯಂತ ಅವಶ್ಯಕ. ಜೊತೆಗೆ ದೊಡ್ಡ ಸವಾಲು ಕೂಡ. ಈ ನಿಟ್ಟಿನಲ್ಲಿ ಅನೇಕ ಬಗೆಯ ಗಡಿಯಾರಗಳ ಉಗಮವಾಗಿದೆ. ಹೀಗೇ ಯೋಚಿಸುತ್ತಾ ನಾನು

ಅತಿ ಪ್ರಾಚೀನ ಕಾಲ ತಲುಪಿದ್ದೂ ಆಯಿತು. ಬನ್ನಿ, ಆ ಕಾಲದಲ್ಲಿ ಸಮಯವನ್ನು ಹೇಗೆ ಅಳೆಯುತ್ತಿದ್ದರು ಎಂದು ನೋಡೋಣ. ಜೊತೆಗೆ ಇಂದಿನ ಗಡಿಯಾರದ ಗುಣಗಾನಕ್ಕೆ ಕಾರಣ ತಿಳಿಯೋಣ.

ಅಂದಿನ ದಿನಗಳಲ್ಲಿ ನೈಸರ್ಗಿಕವಾಗಿ ದಿನ, ರಾತ್ರಿಗಳಂತಹ ಕಾಲಮಾನಗಳು ಮಾನವನಿಗೆ ತಿಳಿದಿತ್ತು. ಪ್ರಾಚೀನ ಕಾಲದಲ್ಲಿ ಸಾಮಾನ್ಯ ಮನುಷ್ಯರು ಮನೆಯ ಮಾಡು, ಮರ ಇತ್ಯಾದಿಗಳ ನೆರಳನ್ನೇ ಆಧರಿಸಿ ಸಮಯವನ್ನು ಅಂದಾಜಿಸುತ್ತಿದ್ದರು. ಭಾರತದ ಮಹಾರಾಜ ಜೈಸಿಂಗ್ ತನ್ನ ರಾಜ್ಯದಲ್ಲಿ 'ಜಂತರ್-ಮಂತರ್' ಎಂದು ಹೆಸರಿಸಿದ ಐದು ಖಗೋಳ ವೀಕ್ಷಣಾಲಯ ಗಳನ್ನು 1725ರ ವೇಳೆಗೇ ಕಟ್ಟಿಸಿದ್ದನಂತೆ. ಈಗಲೂ ನಾಲ್ಕು ವೀಕ್ಷಣಾಲಯಗಳು ಸುಸ್ಥಿತಿಯಲ್ಲಿವೆ. ವಿಶ್ವ ಪಾರಂಪರಿಕ ತಾಣವೆಂದು ಘೋಷಿಸಿರುವ ಜಯಪುರದ ಜಂತರ್-ಮಂತರ್ ವೀಕ್ಷಣಾಲಯದ 'ನೋಮಾನ್' (gnomon) ಅಂದರೆ ನೆರಳು ಕೋಲಿನ ನೆರಳಿನ ಮೂಲಕ ಇಂದಿಗೂ ಸಮಯವನ್ನು ಎರಡು ಸೆಕೆಂಡುಗಳಷ್ಟು ನಿಖರವಾಗಿ ಅಂದಾಜಿಸಲು ಸಾಧ್ಯ.

ಜೈಪುರದ ಜಂತರ್ – ಮಂತರ್

ನೆರಳು ಗಡಿಯಾರ   ಮರಳು ಗಡಿಯಾರ   ನೀರಿನ ಗಡಿಯಾರ

ಬಹಳ ಹಿಂದೆ ಪ್ರಪಂಚದ ಬೇರೆ ಬೇರೆ ಕಡೆಗಳಲ್ಲಿ ವಿವಿಧ ಬಗೆಯ ಮರಳು ಗಡಿಯಾರ ಹಾಗೂ ನೀರಿನ ಗಡಿಯಾರಗಳಿದ್ದವು. ಭಾರತದ ಪ್ರಾಚೀನ ಗಣಿತಜ್ಞ ಭಾಸ್ಕರಾಚಾರ್ಯ ತನ್ನ ಮಗಳು ಲೀಲಾವತಿಗೆ ಅತ್ಯಂತ ಪ್ರಶಸ್ತ ಲಗ್ನದಲ್ಲಿ ಮದುವೆ ಮಾಡಲೆಂದೇ ನೀರಿನ ಗಡಿಯಾರವನ್ನು ನಿರ್ಮಿಸಿದ್ದರಂತೆ. ದುರಾದೃಷ್ಟಕ್ಕೆ ಅವಳ ಕೊರಳ ಮುತ್ತಿನಹಾರದ ಮಣಿಯೊಂದು ನೀರಿನ ಪಾತ್ರೆಯಲ್ಲಿ ಬಿದ್ದು, ಅದರೊಳಗಿದ್ದ ತೂತು ಮುಚ್ಚಿಹೋಗಿದ್ದರಿಂದ ನೀರು ಹರಿಯದೆ ಲಗ್ನದ ಸಮಯ ತಪ್ಪಿಹೋಯಿತು. ಈ ಕತೆ ಹಾಗೂ ಆ ಕಾಲದ ನೀರಿನ ಗಡಿಯಾರ ಚಿರಪರಿಚಿತ.

ಮೊತ್ತಮೊದಲಿಗೆ ಲೋಲಕ ಗಡಿಯಾರ (pendulum clock). ಲೋಲಕ ಗಡಿಯಾರದ ಪರಿಕಲ್ಪನೆ ಬಂದದ್ದು ಇಟಲಿಯ ಶ್ರೇಷ್ಠ ವಿಜ್ಞಾನಿ ಗೆಲಿಲಿಯೋ ಗೆಲಲಿಗೆ (Galileo Galilei). ಆತ ಚರ್ಚಿನ ಒಂದು ತೂಗುದೀಪ ತೂಗಾಡುವುದನ್ನು ಗಮನಿಸಿದನಂತೆ. ಅದು ಒಂದೇ ಕಾಲಾವಧಿಯಲ್ಲಿ ಅತ್ತಿಂದಿತ್ತ ಇತ್ತಿಂದತ್ತ ತೂಗಾಡಿದ್ದನ್ನು ಕಂಡಾಗ ಕಾಲವನ್ನು ಅಳೆಯಲು ಲೋಲಕ ಬಳಸುವ ಪರಿಕಲ್ಪನೆ ಥಟ್ಟನೆ ಅವನಿಗೆ ಹೊಳೆಯಿತು. ಆದರೆ ಸಮರ್ಪಕವಾದ ಗಡಿಯಾರ ತಯಾರಿಸಿ, ಅದಕ್ಕಾಗಿ 1657ರಲ್ಲಿ ಸ್ವಾಮ್ಯ ಪಡೆದದ್ದು ಡಚ್ ಗಣತಂತ್ರದ ನೆದರ್‌ಲ್ಯಾಂಡ್ ದೇಶದ ಗಣಿತಜ್ಞ, ಭೌತವಿಜ್ಞಾನಿ, ಖಗೋಳ ವಿಜ್ಞಾನಿ ಕ್ರಿಶ್ಚಿಯಾನ್ ಹ್ಯಾಗಾನ್ಸ್ (Christiaan Huygens).

ಕ್ರಿಶ್ಚಿಯಾನ್ ಹ್ಯಾಗಾನ್ಸ್ ರೂಪಿಸಿದ ಮೊದಲ ಲೋಲಕದ ಗಡಿಯಾರ

ಕ್ರಿಶ್ಚಿಯಾನ್ ಹ್ಯಾಗಾನ್ಸ್ (1629 – 1695)

ಅನಂತರ ಹಲವಾರು ಸುಧಾರಣೆಗಳನ್ನು ಅಳವಡಿಸಿಕೊಂಡ ಈ ಗಡಿಯಾರಗಳು ವಾರಕ್ಕೆ ಕೇವಲ ಕೆಲವು ಸೆಕೆಂಡುಗಳನ್ನು ಮಾತ್ರ ಕಳೆದುಕೊಳ್ಳುವಷ್ಟು ನಿಖರತೆ ತಲುಪಿದವು. 1927ರಲ್ಲಿ ಕ್ವಾರ್ಟ್ಸ್ ಗಡಿಯಾರಗಳ ಆವಿಷ್ಕಾರವಾಗುವ ತನಕ ಸುಮಾರು 270 ವರ್ಷಗಳಷ್ಟು ಸುದೀರ್ಘ ಕಾಲ, ಲೋಲಕ ಗಡಿಯಾರಗಳು ಜಗತ್ತಿನಲ್ಲಿ ಸಮಯವನ್ನು ತಿಳಿಸುವ ಕೆಲಸ ಮಾಡುತ್ತಿದ್ದವು.

ಸ್ವಾರಸ್ಯಕರವಾದ ವಿಷಯವೆಂದರೆ ಸೂರ್ಯ-ಚಂದ್ರರ ಗತಿಯನ್ನು ಅವಲಂಬಿಸದೆ ಹಗಲು-ರಾತ್ರಿಗಳಲ್ಲಿ ನಿಖರವಾದ ಸಮಯವನ್ನು ಕಂಡುಕೊಳ್ಳಬೇಕೆಂದು ಆಶಯ ವ್ಯಕ್ತಪಡಿಸಿದವರು, ವಿಜ್ಞಾನಿಗಳಾಗಲೀ, ಶಿಕ್ಷಣ ತಜ್ಞರಾಗಲೀ, ವ್ಯಾಪಾರಿಗಳಾಗಲೀ ಅಲ್ಲ. ಬದಲಾಗಿ ಚರ್ಚಿನಲ್ಲಿ ಪ್ರಾರ್ಥನಾ ವಿಧಿಗಳನ್ನು ನಿಖರವಾದ ಸಮಯದಲ್ಲಿ ಸಲ್ಲಿಸಬೇಕೆನ್ನುವ

ಧಾರ್ಮಿಕ ವರ್ಗದವರು. ಈ ಗಡಿಯಾರಗಳು 'ಢಣ್, ಢಣ್' ಎಂದು ಹೊಡೆದು ಶಬ್ದ ಮಾಡುವ ಮೂಲಕ ಇಡೀ ಸಮುದಾಯಕ್ಕೆ ಸಮಯ ಸಾರುತ್ತಿದ್ದವು. 'Clock' ಎಂದೇ ಕರೆಯಲಾಗುತ್ತಿದ್ದ ಈ ಗಡಿಯಾರಗಳು ಬಹಳ ಮಟ್ಟಿಗೆ ಚರ್ಚಿನ ಪ್ರಾಂಗಣದ ಎತ್ತರದ ಕಂಭದಲ್ಲಿರುತ್ತಿದ್ದವು. C lock ಎನ್ನುವ ಪದಕ್ಕೆ ಮಧ್ಯಕಾಲಿಕ ಲ್ಯಾಟಿನ್ ಭಾಷೆಯಲ್ಲಿ ಘಂಟೆ (bell) ಎನ್ನುವ ಅರ್ಥವಿದೆ.

ಮೊತ್ತಮೊದಲಿಗೆ ಒಂದು ಲೋಲಕ ಗಡಿಯಾರವನ್ನು ನೆದರ್‌ಲ್ಯಾಂಡಿನಿಂದ ಅಮೆರಿಕಾಕ್ಕೆ ತಂದಾಗ ಅದನ್ನು ಕಾಣಲು ಕುತೂಹಲದಿಂದ ಬಂದವರಿಗೆ ದಿಗ್ಭ್ರಮೆಯುಂಟಾಗುವ ವಿಲಕ್ಷಣ ಪ್ರಸಂಗ ಎದುರಾಯ್ತು. ಗಡಿಯಾರವನ್ನು ಸಮರ್ಪಕವಾಗಿ ಮಾಪನಾಂಕ ನಿರ್ಣಯಮಾಡಿ (callibration) ಅಮೆರಿಕಾಗೆ ತಂದಿದ್ದರು. ತನ್ನ ತವರೂರಲ್ಲಿ ದಿನಕ್ಕೆ ಎರಡು ಸೆಕೆಂಡುಗಳಷ್ಟು ನಿಧಾನವಾಗುತ್ತಿದ್ದ ಗಡಿಯಾರ, ಅಮೆರಿಕಕ್ಕೆ ಬಂದಾಕ್ಷಣ ಒಂದು ದಿನದಲ್ಲಿ ಮೂವತ್ತು ಸೆಕೆಂಡುಗಳು ಹಿಂದೆ ಸರಿಯುತ್ತಾ, ಒಂದು ವಾರ ಕಳೆಯುವುದರಲ್ಲಿ ಐದು ನಿಮಿಷ ನಿಧಾನವಾಗಿ ಸಮಯ ತೋರಿಸುವ ಮಟ್ಟ ತಲುಪಿತು. ಇದರಿಂದ ಅಪಾರ ನಿರೀಕ್ಷೆ ಇಟ್ಟುಕೊಂಡಿದ್ದ ಧಾರ್ಮಿಕ ವರ್ಗದವರಿಗೆ ನಿರಾಶೆಯುಂಟಾಯ್ತು. ಹಡಗಿನಲ್ಲಿ ಪಯಣಿಸಿದಾಗ ಗಡಿಯಾರದ ಯಾಂತ್ರಿಕ ಭಾಗಗಳಿಗೆ ಏನೋ ಹಾನಿಯಾಗಿದೆ ಎಂದು ಆಲೋಚಿಸಿದರು. ಆದರೆ ಇದಕ್ಕೆ ನಿಜವಾದ ಕಾರಣ ಯುರೋಪಿನ ಆಮ್ಸ್ಟರ್ಡಾಮ್ ಮತ್ತು ಅಮೆರಿಕಾದ ಬಾಸ್ಟನ್ ಪ್ರದೇಶಗಳ ಅಕ್ಷಾಂಶಗಳಲ್ಲಿ 10 ಡಿಗ್ರಿ ವ್ಯತ್ಯಾಸವಿದ್ದದ್ದು. ಅಕ್ಷಾಂಶಗಳಲ್ಲಿ ವ್ಯತ್ಯಾಸವಾದಾಗ ಗುರುತ್ವಾಕರ್ಷಣೆಯೂ ವ್ಯತ್ಯಯವಾಗುತ್ತದೆ ಮತ್ತು ಇದರಿಂದ ಲೋಲಕದ ಆವರ್ತನದಲ್ಲಿ ಸಾಕಷ್ಟು ವ್ಯತ್ಯಯವಾಗುತ್ತದೆ ಎನ್ನುವುದು ಅಂದು ಅಲ್ಲಿದ್ದ ವಿದ್ವಜ್ಜನರಿಗೂ ತಿಳಿದಿರಲಿಲ್ಲ. ಈ ವಿಷಯವನ್ನು ಕಾಲಾಂತರದಲ್ಲಿ ನ್ಯೂಟನ್ ಸ್ಪಷ್ಟಪಡಿಸುವವರೆಗೂ ಯಾರಿಗೂ ಈ ಬಗ್ಗೆ ಸ್ಪಷ್ಟ ತಿಳಿವಳಿಕೆ ಇರಲಿಲ್ಲ.

ಹೀಗೆ ಧಾರ್ಮಿಕ ವರ್ಗದವರ ಬೇಡಿಕೆಯಂತೆ ಸೃಷ್ಟಿಯಾದ ಲೋಲಕ ಗಡಿಯಾರದ ಲೋಲಕದಿಂದ ಸಾಕಷ್ಟು ವೈಜ್ಞಾನಿಕ ವಿಷಯಗಳು ಸ್ಪಷ್ಟವಾಗಿ, ಇಡೀ ವಿಶ್ವದ ವಿಜ್ಞಾನದ ಪಥವೇ ಬದಲಾದದ್ದು ಪವಾಡ ಮಾತ್ರವಲ್ಲ; ಇತಿಹಾಸ. ಗೊಂದಲ ನಿವಾರಣೆಯಾಯಿತು. ಆದರೆ ಲೋಲಕದ ಗಡಿಯಾರಗಳು ಬಹಳ ನಿಖರವಾಗಿರಲಿಲ್ಲ. ಮೊದಲಿಗೆ ಗಡಿಯಾರಗಳಲ್ಲಿ 'ಡಯಲ್'ಗಳೂ ಇರಲಿಲ್ಲ!. ಅವು 'ಢಣ್ ಎಂದು ಹೊಡೆಯುವುದರಿಂದ ಮಾತ್ರ ಸಮಯ ಸೂಚಿಸುತ್ತಿದ್ದವು. ಕಾಲವಾದಂತೆ ಘಂಟೆ, ನಿಮಿಷ, ಸೆಕೆಂಡುಗಳನ್ನು ತೋರಿಸುವ ಮುಖಫಲಕಗಳನ್ನು (ಡಯಲ್) ಅಳವಡಿಸಲಾಯ್ತು. ಹೀಗೆ ಅವಶ್ಯಕತೆಗೆ ತಕ್ಕಂತೆ ಗಡಿಯಾರಗಳು ಮತ್ತು ಅದರ ತಂತ್ರಜ್ಞತೆ ಬದಲಾಗುತ್ತಲೇ ಹೋದವು.

ಗಡಿಯಾರದ ಅವತಾರಗಳು ಪುರಾಣದ ದಶಾವತಾರಗಳಂತೆ. ಹೊಸ ತಂತ್ರಜ್ಞತೆಗಳು ಬಂದತೆಲ್ಲಾ ಅವಶ್ಯಕತೆಗೆ ತಕ್ಕಂತೆ ಹೊಸ ಬಗೆಯ, ಮತ್ತಷ್ಟು ನಿಖರವಾದ ಗಡಿಯಾರಗಳು ರೂಪುಗೊಳ್ಳುತ್ತಲೇ ಬಂದವು. 1815ರಲ್ಲಿ 'ಡ್ರೈ ಪೈಲ್' ವಿದ್ಯುತ್ ಕೋಶಗಳಿಂದ ಚಾಲಿತ ಗಡಿಯಾರ, ಅನಂತರ ವಿದ್ಯುತ್ ಚಾಲಿತ ಗಡಿಯಾರ, ಪರ್ಯಾಯ ವಿದ್ಯುತ್ (AC elecricity) ಚಾಲಿತ ಮತ್ತು ವಿದ್ಯುತ್ ಕೋಶದಿಂದ ಚಾಲಿತವಾಗುವ ಗಡಿಯಾರಗಳು ಆವಿಷ್ಕಾರಗೊಂಡವು. ಹತ್ತೊಂಬತ್ತನೆಯ ಶತಮಾನದ ಅಂತ್ಯದ ಹೊತ್ತಿಗೆ ಗಡಿಯಾರದ ಯಾಂತ್ರಿಕ ಭಾಗಗಳಿಗೆ ವಿದ್ಯುತ್ ಒದಗಿಸುವ ಅಥವಾ ವಿದ್ಯುತ್ ಆವರ್ತನಗಳನ್ನು ಎಣಿಕೆ ಮಾಡುವ ವಿವಿಧ ಬಗೆಯ ವಿದ್ಯುತ್ ಚಾಲಿತ ಗಡಿಯಾರಗಳು ಹೆಚ್ಚು ಹೆಚ್ಚು ತಯಾರಾದವು. ವಿದ್ಯುನ್ಮಾನ ವಿಜ್ಞಾನ ಅಭಿವೃದ್ಧಿಯಾದಂತೆ ಈ ಗಡಿಯಾರಗಳಲ್ಲಿ ಅನೇಕ ವಿದ್ಯುನ್ಮಂಡಲಗಳ ಅಳವಡಿಕೆಯಾಗಿ ಮತ್ತಷ್ಟು ಸುಧಾರಣೆಗಳಾದವು.

ಮುಂದೆ ಉಗಮವಾದ ಗಡಿಯಾರವೆಂದರೆ, 1927ರಲ್ಲಿ ವಾರೆನ್ ಮ್ಯಾರಿಸನ್ ಮತ್ತು ಜೆ. ಡಬ್ಲ್ಯೂ ಹಾರ್ಟನ್ ಕೆನಡಾದ ಬೆಲ್ ಟೆಲಿಫೋನ್ ಲ್ಯಾಬೋರೇಟರಿಯಲ್ಲಿ ರೂಪಿಸಿದ ಕ್ವಾರ್ಟ್ಸ್ (quartz) ಹರಳಿನ ಗಡಿಯಾರ ಕ್ವಾರ್ಟ್ಸ್ ಹರಳಿಗೆ ವಿದ್ಯುತ್

ಸರಬರಾಜು ಮಾಡಿದಾಗ ನಿಖರವಾಗಿ ಸೆಕೆಂಡಿಗೆ 32,768 ಬಾರಿಯಂತೆ ಕಂಪಿಸುತ್ತದೆ. ಈ ಕಂಪನಗಳನ್ನು ಲೆಕ್ಕಹಾಕುವ ವಿದ್ಯುನ್ಮಂಡಲಗಳು (ಸರ್ಕ್ಯುಟ್‌ಗಳು) ನಿಗದಿತವಾಗಿ ಸೆಕೆಂಡಿಗೆ ಒಂದು ವಿದ್ಯುತ್ ಸ್ಪಂದನವನ್ನು ಉತ್ಪಾದಿಸುತ್ತವೆ. ಮುಂದೆ ಈ ಸ್ಪಂದನಗಳಿಂದ ನಿಮಿಷ, ಗಂಟೆಗಳನ್ನು ಲೆಕ್ಕ ಮಾಡಲಾಗುತ್ತದೆ. ಸೆಕೆಂಡು, ನಿಮಿಷ, ಗಂಟೆಗಳನ್ನು ಅಂಕೀಯವಾಗಿ ಸೂಚಿಸುವುದೂ ಪ್ರಾರಂಭವಾಯಿತು. ಕ್ವಾರ್ಟ್ಸ್ ಗಡಿಯಾರಗಳು ಬಹಳ ನಿಖರವಾಗಿ ಸಮಯ ಸೂಚಿಸುವುದೆನ್ನುವ ಹೆಗ್ಗಳಿಕೆಗೆ ಪಾತ್ರವಾಯ್ತು. ಹೀಗೆ ಗಡಿಯಾರದ ತಯಾರಿಕೆ ಇಂಗ್ಲೆಂಡಿನಿಂದ ಕೆನಡಾಗೆ ಸ್ಥಳಾಂತರವಾಯ್ತು. ಆದರೆ ಇವುಗಳ ದೊಡ್ಡ ಗಾತ್ರ ಮತ್ತು ಸೂಕ್ಷ್ಮ ಭಾಗಗಳು ಇವುಗಳ ಬಳಕೆಯನ್ನು ಪ್ರಯೋಗಾಲಯಕ್ಕೆ ಸೀಮಿತಗೊಳಿಸಿತ್ತು. ಹೇಗಾದರೂ ಅವು 1960ರ ವರೆಗೆ ನಿಖರ ಸಮಯ ಸೂಚಕಗಳೆನ್ನುವ ಸ್ಥಾನವನ್ನು ಅಲಂಕರಿಸಿದ್ದವು.

ಕ್ವಾರ್ಟ್ಸ್ ಹರಳುಗಳನ್ನು ಒಂದೇ ಉಷ್ಣತೆಯಲ್ಲಿಡುವ ವ್ಯವಸ್ಥೆಯ ಗಾತ್ರ ಬಹಳ ದೊಡ್ಡದಾಗಿದ್ದುದರಿಂದ 1959ರಲ್ಲಿ ರೂಪಿಸಿದ ಗಡಿಯಾರದ ಗಾತ್ರ 1.3 ಮೀ X 2.1 ಮೀ ಇದ್ದು ತೂಕವೂ ಹೆಚ್ಚಾಗಿತ್ತು. ಇದರ ಸಲುವಾಗಿ ಬಹಳ ವಿದ್ಯುಚ್ಛಕ್ತಿಯ ಅವಶ್ಯಕತೆಯೂ ಇತ್ತು. ಅದೇ ಸಮಯದಲ್ಲಿ ವಿದ್ಯುನ್ಮಾನ ವಿಜ್ಞಾನದಲ್ಲಾದ ಪ್ರಗತಿ ಈ ತೊಡಕುಗಳನ್ನು ನಿವಾರಿಸಲು ಸಮರ್ಥವಾಯಿತು. ನಿರ್ವಾತ ಕೊಳವೆಗಳು (vacuum tubes) ಟ್ರಾನ್ಸಿಸ್ಟರ್‌ಗಳಿಗೆ ಬದಲಾದವು. ತಾಪಮಾನ ನಿಯಂತ್ರಣ ಘಟಕದ ಬದಲು ಚಿಕ್ಕ ಗಾತ್ರದ ತಾಪಮಾನ ನಿಯಂತ್ರಣ ವಿದ್ಯುನ್ಮಂಡಲಗಳು ಬಂದವು. ಮುಂದೆ 1964ರ ಟೋಕಿಯೋ ಒಲಿಂಪಿಕ್ಸ್ ಕ್ರೀಡಾಕೂಟಕ್ಕಾಗಿ ಉತ್ತಮ ಗಡಿಯಾರಗಳನ್ನು ಒದಗಿಸಲು ಎಪ್ಸನ್ ಸಂಸ್ಥೆ ಶರವೇಗದಲ್ಲಿ ಕೆಲಸ ಮಾಡಿ, ಸುಲಭವಾಗಿ ಸಾಗಿಸಲು ಸಾಧ್ಯವಾಗುವ QC-951 ಕ್ರೋನೋಮೀಟರ್ ತಯಾರಿಸಿತು. 1969ರಲ್ಲಿ ಜಪಾನಿನ ಸೀಕೋ ಸಂಸ್ಥೆ ಜೇಬಿನಲ್ಲಿ ಇಡುವಷ್ಟು ಚಿಕ್ಕ ಗಾತ್ರದ 'ಆಸ್ಟ್ರಾನ್' 35SQ ಕ್ವಾರ್ಟ್ಸ್ ಕೈಗಡಿಯಾರಗಳನ್ನು ತಯಾರಿಸುವುದರಲ್ಲಿ ಯಶಸ್ವಿಯಾಯಿತು.

ಗಡಿಯಾರದ ಸುಧಾರಣೆ ಮತ್ತೂ ಮುಂದುವರಿಯುತ್ತಲೇ ಇದ್ದು, ಕ್ವಾರ್ಟ್ಸ್ ಗಡಿಯಾರಗಳಿಗಿಂತಲೂ ಉತ್ತಮವಾದ ಪರಮಾಣು ಗಡಿಯಾರಗಳ ವಿಕಸನವಾಯ್ತು. ಕೆಲವು ಉತ್ತೇಜಕ ಸ್ಥಿತಿಯಲ್ಲಿರುವ ಪರಮಾಣುಗಳಲ್ಲಿರುವ ಎಲೆಕ್ಟ್ರಾನುಗಳು ತಮ್ಮ ಶಕ್ತಿ ಸ್ತರಗಳನ್ನು (energu levels) ಬದಲಿಸುವಾಗ ವಿದ್ಯುತ್ಕಾಂತಿಯ ವಿಕಿರಣ ಹೊರಹೊಮ್ಮಿಸುತ್ತವೆ. ಈ ಕ್ರಿಯೆಯನ್ನು ಆಧರಿಸಿ ಗಡಿಯಾರವನ್ನು ತಯಾರಿಸುವ ವಿಧಾನವನ್ನು ಮೊಟ್ಟಮೊದಲಿಗೆ 1879ರಲ್ಲಿ ಲಾರ್ಡ್ ಕೆಲ್ವಿನ್ ತಾತ್ವಿಕವಾಗಿ ವಿವರಿಸಿದರು. ಇಂತಹ ಗಡಿಯಾರದಲ್ಲಿ ಕೆಲವು ಪರಮಾಣುಗಳಿಂದ ಮೈಕ್ರೋವೇವ್, ದೃಗ್ಗೋಚರ ಅಥವಾ ಅತಿನೇರಳೆ ತರಂಗಾಂತರಗಳಲ್ಲಿ ಹೊರಸೂಸುವ ಬೆಳಕಿನ ಆವರ್ತನ ಸಂಖ್ಯೆಯ ಆಧಾರದ ಮೇಲೆ ಸಮಯವನ್ನು ಲೆಕ್ಕ ಮಾಡಲಾಗುತ್ತದೆ. ಈ ಆವರ್ತನ ಸಂಖ್ಯೆ ಜಗತ್ತಿನಾದ್ಯಂತ ಸಮಾನವಾಗಿರುತ್ತದೆ. ವಿಶೇಷವಾಗಿ ಮೈಕ್ರೋವೇವ್ ವಲಯದಲ್ಲಿ ಉಂಟಾಗುವ ಬಹುಸೂಕ್ಷ್ಮವಾದ ವಿಕಿರಣ ಹೀರಿಕೆ ಅಥವಾ ಉತ್ಸರ್ಜನೆ ಹಾಗೂ ದೃಗ್ಗೋಚರ ಅಥವಾ ಅತಿನೇರಳೆ ವಲಯದಲ್ಲಿ ಎಲೆಕ್ಟ್ರಾನ್‌ನ ಸ್ತರ ಬದಲಿಕೆಯಾಗುವಾಗ ಉಂಟಾಗುವ ರೋಹಿತವನ್ನು ಗಡಿಯಾರದ ಆವರ್ತನಕ್ಕೆ ಮಾನದಂಡವಾಗಿ ಬಳಕೆ ಮಾಡಲು ನಿರ್ಧರಿಸಲಾಯಿತು.

ಅಮೋನಿಯಾ ಮೇಸರ್ ಪರಮಾಣುವಿನ ಮೊದಲ ಮಾದರಿ ಗಡಿಯಾರವನ್ನು 1949ರಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದ 'ನ್ಯಾಷನಲ್ ಬ್ಯೂರೋ ಆಫ್ ಸ್ಟಾಂಡರ್ಡ್' ನಲ್ಲಿ ತಯಾರಿಸಲಾಯಿತು. ಈ ಗಡಿಯಾರವನ್ನು ಮತ್ತಷ್ಟು ಸುಧಾರಿಸಿದ ಹೆಗ್ಗಳಿಕೆ ಸಲ್ಲುವುದು ಯುನೈಟೆಡ್ ಕಿಂಗ್ಡಮ್‌ನ ಲೂಯಿ ಏಸನ್ ನಿಗೆ. ಅನಂತರ ರುಬಿಡಿಯಮ್, ಸೀಸಿಯಮ್ ಇತ್ಯಾದಿ ಹಲವಾರು ಪರಮಾಣು ಗಡಿಯಾರಗಳು ತಯಾರಾದವು. ರುಬಿಡಿಯಮ್ ಗಡಿಯಾರಗಳು ಸ್ಥಿರವಾಗಿದ್ದು ಒಂದೆಡೆಯಿಂದ ಮತ್ತೊಂದೆಡೆಗೆ ಕೊಂಡೊಯ್ಯ ಬಹುದಾಗಿವೆ ಮತ್ತು ಅವುಗಳ ನಿಖರತೆ ಜಿಪಿಎಸ್‌ನಲ್ಲಿ ಬಳಸಲು ಅಡ್ಡಿಯಾಗುವುದಿಲ್ಲ. ಸೀಸಿಯಮ್ ಗಡಿಯಾರಗಳ ನಿಖರತೆ ಹೆಚ್ಚು. ಹೀಗೆ ಯಾವ ಪರಮಾಣುವನ್ನು ಎಲ್ಲಿ ಬಳಸಬೇಕೆಂದು ಹೊಯ್ದಾಡುತ್ತಿರುವಾಗ ಕಣ್ಣಿಗೆ ಕಂಡದ್ದು

ಯುಟೇಬಿಯಮ್ (ytterbium) ಪರಮಾಣು. 2013ರ ಮಾಹಿತಿಯಂತೆ ಯುಟೇಬಿಯಮ್ ಗಡಿಯಾರಗಳು ಬಹಳ ನಿಖರವೆಂದೂ, ಒಂದು ಕ್ವಿಂಟಿಲಿಯನ್ (1018) ವರ್ಷಗಳಲ್ಲಿ 2 ಭಾಗದಷ್ಟು (2 ಫ 10-18) ವ್ಯತ್ಯಾಸವಾಗುವುದೆಂದು ಸಾಬೀತಾಗಿದೆ. ಒಟ್ಟಿನಲ್ಲಿ ಪರಮಾಣು ಗಡಿಯಾರಗಳಲ್ಲಿ ಸಮಯವು ಲಕ್ಷಾಂತರ ವರ್ಷಗಳಲ್ಲಿ ಕೆಲವೇ ಸೆಕೆಂಡುಗಳಷ್ಟು ವ್ಯತ್ಯಾಸ ಹೊಂದುವುದೆಂದು ಅಂದಾಜಿಸಲಾಗಿದೆ.

ಆದರೆ ಮತ್ತಷ್ಟು ಮುಂದುವರಿದಾಗ ಕೆಲವು ಪರಮಾಣುಗಳ ಆವರ್ತನ ಸಂಖ್ಯೆ ತಾಪಮಾನ ಮತ್ತು ಕಾಂತಕ್ಷೇತ್ರದಿಂದ ಅತ್ಯಲ್ಪ ಪ್ರಮಾಣದಲ್ಲಿ ಬದಲಾಗುವುದು ಕಂಡುಬಂದಿತು. ಇದು ಅತ್ಯಲ್ಪವೇ ಆದರೂ ಅಂತರಿಕ್ಷ ನೌಕೆಗಳು ಬಹಳ ದೂರ ಪಯಣಿಸುವಾಗ ಗಮನಾರ್ಹವಾಗಿ ಪರಿಣಾಮ ಬೀರಬಲ್ಲದು. ಆದ್ದರಿಂದ ಮತ್ತಷ್ಟು ನಿಖರವಾಗಿ ಸಮಯವನ್ನು ಗಣಿಸಲು ಈಗಿನ ಪರಮಾಣು ಗಡಿಯಾರಗಳಲ್ಲಿ ಪಾದರಸದ ಅಯಾನುಗಳು ಬಳಕೆಯಾಗಿವೆ. ಹೊರಗಿನ ಶಕ್ತಿಗಳಿಂದ ಪ್ರಭಾವಿತವಾಗದಂತೆ ಇವುಗಳನ್ನು ವಿದ್ಯುತ್ಕಾಂತೀಯ ಪಂಜರಗಳಲ್ಲಿ ಭದ್ರಪಡಿಸಲಾಗುತ್ತದೆ.

ಸಮಯವನ್ನು ಸೂಚಿಸುವ ಗಡಿಯಾರಗಳ ನಿಖರತೆ ಅಷ್ಟೇಕೆ ಪ್ರಾಮುಖ್ಯ ಪಡೆದಿವೆ? ಅವು ಎಲ್ಲೆಲ್ಲಿ ಬಳಕೆಯಾಗುತ್ತಿವೆ? ಇತ್ಯಾದಿ ಹಲವು ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡಾಗ ಆಶ್ಚರ್ಯವಾಗುತ್ತದೆ.

ಮೊಟ್ಟಮೊದಲಿಗೆ ,ಸರ್ವಾಂತರ್ಯಾಮಿಯಾಗಿರುವ 'ಸ್ಮಾರ್ಟ್ ಫೋನ್' ಗಡಿಯಾರವನ್ನೇ ತೆಗೆದುಕೊಳ್ಳೋಣ. ಇದರಲ್ಲಿರುವ ಚಿಕ್ಕ ವಿದ್ಯುತ್‌ಕೋಶದ ಶಕ್ತಿಯಿಂದ ಚಾಲಿತವಾಗುವ ಕ್ವಾರ್ಟ್ಸ್ ಹರಳಿನ ಗಡಿಯಾರ ನಿಖರವಾಗಿ ಸಮಯ ಸೂಚಿಸುತ್ತದೆ. ನಿಮ್ಮ ಸ್ಮಾರ್ಟ್‌ಫೋನನ್ನು ನೀವು ಯಾವುದೇ ದೇಶಕ್ಕೆ ಕೊಂಡೊಯ್ದರೂ ನಿಮಗಿಂತ ಚೂಟಿಯಾಗಿ ನಿಮ್ಮ ಚಲನವಲನದ ಮೇಲೆ ಕಣ್ಣಿಟ್ಟು, ಆ ಸಮಯ ವಲಯದ (Time zone) ಕಾಲವನ್ನೇ ಸೂಚಿಸುತ್ತದೆ. ಇದು ಹೇಗೆ ಸಾಧ್ಯ? ನೀವು ಪಯಣಿಸಿದಾಗ ನಿಮ್ಮ ಸ್ಮಾರ್ಟ್‌ಫೋನ್ ಅಲ್ಲಿನ ಮೊಬೈಲ್ ಫೋನ್ ನಿಯಂತ್ರಣ ಗೋಪುರಕ್ಕೆ ಸಂಪರ್ಕ ಸಾಧಿಸಿ, ಕೂಡಲೇ ಅಲ್ಲಿನ ಸಮಯವನ್ನು ತೋರಲು ಪ್ರಾರಂಭಿಸುತ್ತದೆ. ಇದೇ ಇಲ್ಲಿರುವ ಗುಟ್ಟು.

ಗಡಿಯಾರಗಳು ಸಮಯ ತೋರುವುದಕ್ಕೆ ಮಾತ್ರವೇ? ಇದಕ್ಕೆ ಉತ್ತರ 'ಹೌದು' ಮತ್ತು 'ಇಲ್ಲ'. ಏಕೆಂದರೆ ಅಂತರಿಕ್ಷದಲ್ಲಿ ನಿರ್ದಿಷ್ಟ ಸ್ಥಾನಗಳಲ್ಲಿರುವ ಎರಡು ಕೃತಕ ಉಪಗ್ರಹಗಳಿಂದ ಬರುವ ಸಂಜ್ಞೆಗಳು ಭೂಮಿಗೆ ಪಯಣಿಸಲು ತೆಗೆದುಕೊಂಡ ಸಮಯದ ಆಧಾರದ ಮೇಲೆ ಭೂಮಿಯ ಮೇಲೆ ಒಂದು ನಿರ್ದಿಷ್ಟ ಸ್ಥಳದ ಗುರುತನ್ನು ಸಾಕಷ್ಟು ಕ್ಲಿಷ್ಟಕರ ಕಂಪ್ಯೂಟರ್ ಲೆಕ್ಕಾಚಾರದಿಂದ ಕಂಡು ಹಿಡಿಯಬಹುದು. ಹೀಗೆ ಪರಮಾಣು ಗಡಿಯಾರಗಳು ಉಗಮವಾಗುತ್ತಿದ್ದಂತೆ ಜಾಗತಿಕ ಸ್ಥಾನ ನಿರ್ದೇಶಕ (ಜಿಪಿಎಸ್) ವ್ಯವಸ್ಥೆಗೆ ಬುನಾದಿ ಹಾಕಿದವು. ಮೊದಲಿಗೆ ಮಿಲಿಟರಿ ಕಾರ್ಯಾಚರಣೆಗಳಲ್ಲಿ, ವಿಮಾನಗಳ ಯಶಸ್ವೀ ಹಾಗೂ ಸುಭದ್ರ ಹಾರಾಟದಲ್ಲಿ ಬಳಸುತ್ತಿದ್ದ ಜಿಪಿಎಸ್ ವ್ಯವಸ್ಥೆ ಈಗ ದಿನನಿತ್ಯದ ಜನಜೀವನದಲ್ಲಿ ಹಾಸುಹೊಕ್ಕಾಗಿದೆ. ಆಟೋ ರಿಕ್ಷಾ, ಕಾರು, ಯಾವುದೇ ವಾಹನದಲ್ಲಿ ಪಯಣಿಸಬೇಕಾದರೂ ನೀವು ಯಾವ ಸ್ಥಾನದಲ್ಲಿದ್ದೀರೆಂದು ಸ್ಮಾರ್ಟ್‌ಫೋನ್ ಪರದೆ ಅಥವಾ ವಾಹನದಲ್ಲಿರುವ ಅಂತಹದ್ದೇ ಪರದೆಯ ಮೇಲೆ ತೋರಿಸುತ್ತಾ, ನಿಮ್ಮ ಗಮ್ಯ ಸ್ಥಾನವನ್ನು ತಲುಪಿಸುವ ಜಿಪಿಎಸ್ 'ದಾರಿ ತೋರುವ ಸಂಗಾತಿ'ಯೇ ಆಗಿದೆ. ಇಷ್ಟೇ ಅಲ್ಲ, ಯಾವ ಬಗೆಯ ದಿಕ್ಸೂಚಿ ಫಲಕಗಳಿಲ್ಲದ ಪರ್ವತಶ್ರೇಣಿಗಳಲ್ಲಿ, ಬೆಟ್ಟಗಾಡು ಪ್ರದೇಶಗಳಲ್ಲಿ, ವಿಮಾನ ಮತ್ತು ಸಮುದ್ರ ಯಾನಗಳಲ್ಲಿಯೂ ದಾರಿ ತೋರಿಸುವ ಉಪಯುಕ್ತ ಸಾಧನ ಜಿಪಿಎಸ್.

ಭೂಮಿಯ ಮೇಲೆ ಪಯಣಿಸಲು ಜಿಪಿಎಸ್ ದಾರಿ ತೋರಬಲ್ಲವಾದರೆ ಅಂತರಿಕ್ಷ ಪಯಣಕ್ಕೂ ಸಾಥ್ ನೀಡಬಲ್ಲವೇ? ಹೌದು, ಉಪಗ್ರಹವನ್ನು ಅಂತರಿಕ್ಷದಲ್ಲಿ ನಿಯಂತ್ರಣ ಮಾಡುವುದಕ್ಕೂ ಸೈ ಎನ್ನುತ್ತವೆ. ಒಂದು ಅಂತರಿಕ್ಷ ನೌಕೆಯನ್ನು ಬಹುದೂರ

ಉಡಾವಣೆ ಮಾಡುವಾಗ ಅದು ಪಯಣಿಸಬೇಕಾದ ಮಾರ್ಗದ ನಕ್ಷೆಯನ್ನು ಮುಂಚಿತವಾಗಿ ಬಹಳ ಜಾಗರೂಕತೆಯಿಂದ ಸಿದ್ಧಮಾಡಲಾಗುತ್ತದೆ. ಅದರ ಮಾರ್ಗದಲ್ಲಿರಬಹುದಾದ ಗ್ರಹಗಳ, ಉಪಗ್ರಹಗಳ ಸ್ಥಾನ, ಅವುಗಳ ಗುರುತ್ವಾಕರ್ಷಣ ಶಕ್ತಿ ಮುಂತಾದವುಗಳನ್ನೂ ಪರಿಗಣಿಸಿ ನೌಕೆಯ ವೇಗ, ದಿಕ್ಕುಗಳನ್ನು ನಿಗದಿಸಲಾಗುತ್ತದೆ. ಇಷ್ಟೆಲ್ಲಾ ಪೂರ್ವಭಾವಿ ಸಿದ್ಧತೆಗಳಾದ ನಂತರ ಭೂಕೇಂದ್ರದಿಂದ ರವಾನಿಸಿದ, ಬೆಳಕಿನ ವೇಗದಲ್ಲಿ ಚಲಿಸುವ ರೇಡಿಯೋ ಸಂಜ್ಞೆಗಳು ಅಂತರಿಕ್ಷ ವಾಹನ ತಲುಪಿ, ವಾಪಸ್ಸಾಗುವುದನ್ನು ಬೃಹತ್ ಗಾತ್ರದ ಆ್ಯಂಟೆನಾಗಳು ಸ್ವೀಕರಿಸುತ್ತವೆ. ಈ ಸಂಜ್ಞೆಗಳು ಹೋಗಿಬರಲು ತೆಗೆದುಕೊಂಡ ಸಮಯವನ್ನು ಪರಮಾಣು ಗಡಿಯಾರಗಳು ಮತ್ತು ಕಂಪ್ಯೂಟರ್‌ಗಳ ಸಹಾಯದಿಂದ ನಕ್ಷೆಯಲ್ಲಿ ಅಂತರಿಕ್ಷ ನೌಕೆಯ ನಿಖರವಾದ ಸ್ಥಾನವನ್ನು ಗುರುತಿಸಿದ ನಂತರ ವಾಹನವನ್ನು ಸೂಕ್ತವಾಗಿ ನಿಯಂತ್ರಿಸಲಾಗುತ್ತದೆ. ಮಂಗಳ ಗ್ರಹದಲ್ಲಿ ಅಂತರಿಕ್ಷ ನೌಕೆಯನ್ನು ಇಳಿಸುವುದಕ್ಕಾಗಲೀ, ಅಥವಾ ಮತ್ಯಾವುದೋ ದೂರಗ್ರಹದ ಸುತ್ತ ಸುತ್ತುವಂತೆ ಮಾಡುವುದಕ್ಕಾಗಲೀ ಈ ಎಲ್ಲಾ ತಂತ್ರಜ್ಞತೆಗಳು ಅಗತ್ಯ. ಅಂತರಿಕ್ಷ ನೌಕೆಯ ನಿಯಂತ್ರಣದಲ್ಲಿ ನಿಖರವಾದ ಪರಮಾಣು ಗಡಿಯಾರಗಳ ಪಾತ್ರವೇ ಬಹುಮುಖ್ಯ.

ವಿಜ್ಞಾನ ಪ್ರಗತಿಯತ್ತ ಮತ್ತೊಂದು ಹೆಜ್ಜೆ ಹಾಕಿದಾಗ ಇಂತಹ ಪರಮಾಣು ಗಡಿಯಾರಗಳ ನಿಖರತೆಯೂ ಸಾಲದೆನಿಸಿತು. ಯಾಕೆಂದರೆ ಈ ಗಡಿಯಾರಗಳು ಮತ್ತಷ್ಟು ಸ್ಥಿರವಾಗಿ ಸಮಯ ತೋರಿಸಲು ದಿನನಿತ್ಯ ತಿದ್ದುಪಡಿ ಮಾಡುವುದು ಅಗತ್ಯ. ಬಹುದೂರದ ಆಳ ಅಂತರಿಕ್ಷಕ್ಕೆ ಪಯಣಿಸುವ ವಾಹನಗಳಿಗೆ ಭೂಮಿಯಿಂದ ಕಳಿಸುವ ರೇಡಿಯೋ ಸಂಜ್ಞೆಗಳ ವಿನಿಮಯವಾಗಿ, ಅನಂತರ ಸೂಕ್ತ ನಿಯಂತ್ರಣ ಸೂಚನೆಗಳು ತಲುಪಲು ಬಹಳ ಸಮಯವಾಗುತ್ತದೆ. ಹಾಗಾಗಿ ಆಳ ಅಂತರಿಕ್ಷಕ್ಕೆ ಪಯಣಿಸುವ ವಾಹನಗಳಿಗೆ ಇದರಿಂದ ತೊಂದರೆಯಾಗುವುದು ನಿಶ್ಚಿತ. ಇದಕ್ಕೆ ಬದಲಾಗಿ ಅಂತರಿಕ್ಷ ನೌಕೆಗಳಲ್ಲಿಯೇ ಪರಮಾಣು ಗಡಿಯಾರಗಳನ್ನು ಇರಿಸಿದರೆ ಹೇಗೆ? ಆದರೆ ಈಗ ಭೂಮಿಯ ಮೇಲಿರುವ ರೆಫ್ರಿಂಜರೇಟರ್ ಗಾತ್ರದ ಪರಮಾಣು ಗಡಿಯಾರಗಳನ್ನು ಅಂತರಿಕ್ಷ ನೌಕೆಯಲ್ಲಿಟ್ಟರೆ ಅದು ಅಂತರಿಕ್ಷಕ್ಕೆ ಜಿಗಿಯುವುದು ಸಾಧ್ಯವೇ? ಸುಲಭವೇ? ಹಾಗಾಗಿ ಕ್ಯಾಲಿಫೋರ್ನಿಯಾದಲ್ಲಿರುವ ನಾಸಾ ಸಂಸ್ಥೆಯ ಜೆಟ್ ಪ್ರೊಪಲ್ಷನ್ ಲ್ಯಾಬೊರೇಟರಿ (JPL) ಸತತ ಹತ್ತು ವರ್ಷಗಳ ಸಂಶೋಧನೆಯಿಂದ ಅತ್ಯಂತ ನಿಖರವಾದ, ಬಹಳ ಚಿಕ್ಕ ಗಾತ್ರದ, ಕಡಿಮೆ ತೂಕದ ಆಳ ಅಂತರಿಕ್ಷ ಪರಮಾಣು ಗಡಿಯಾರವನ್ನು (Deep space Atomic clock-DSAC) ತಯಾರಿಸುವುದರಲ್ಲಿ ಯಶಸ್ವಿಯಾಗಿದೆ. ಇದರ ಗಾತ್ರ 29 X 26 X 23 cm ಅಂದರೆ ಉದ್ದ, ಅಗಲ, ಎತ್ತರ (cube) ಎಲ್ಲವೂ ಸುಮಾರು ಒಂದು ಅಡಿ. ತೂಕ 17.5 ಕೆಜಿ ಮತ್ತು ಇದಕ್ಕೆ 44 ವ್ಯಾಟ್ ವಿದ್ಯುಚ್ಛಕ್ತಿಯ ಅಗತ್ಯವಿರುತ್ತದೆ. ಈಗಿನ ಎಲ್ಲಾ ಗಡಿಯಾರಗಳಿಗಿಂತ ಸ್ಥಿರವಾಗಿರುತ್ತದೆ. ಹತ್ತು ದಿನಗಳಲ್ಲಿ ಕೇವಲ 1 ನ್ಯಾನೋಸೆಕೆಂಡು (10-9 ಸೆಕೆಂಡ್) ವ್ಯತ್ಯಯವಾಗುತ್ತದೆ. ಹತ್ತು ವರ್ಷಗಳಲ್ಲಿ ಕೇವಲ ಒಂದು ಮೈಕ್ರೋಸೆಕೆಂಡು (10-6 ಸೆಕೆಂಡ್) ಗಳಷ್ಟು ವ್ಯತ್ಯಾಸ ಕಂಡುಬರಬಹುದು.

ಇಂತಹ ಆಳ ಅಂತರಿಕ್ಷ ಪರಮಾಣು ಗಡಿಯಾರವೇ 2019ರ ಜೂನ್ 25ರಂದು ತನ್ನ ಅಂತರಿಕ್ಷ ಯಾನ ಪ್ರಾರಂಭಿಸಿ, ಆಗಸ್ಟ್ 23ರಿಂದ ಕ್ರಿಯಾಶೀಲವಾಗಿದೆ. ಇದರ ಪರೀಕ್ಷಾ ಅವಧಿಯನ್ನು ಆಗಸ್ಟ್ 2021ರ ವರೆಗೆ ವಿಸ್ತರಿಸಲಾಗಿದೆ. 2021ರ ಜೂನ್ 30ರ 'ನೇಚರ್' ಸಂಶೋಧನಾ ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಿರುವಂತೆ ಈ ಗಡಿಯಾರದ ಮೊದಲ ಯಶಸ್ವೀ ಪ್ರಯೋಗದ ನಂತರ ಆಳವಾದ ಅಂತರಿಕ್ಷಕ್ಕೆ ಪಯಣಿಸುವ ಅಂತರಿಕ್ಷ ನೌಕೆಗಳ ನಿಯಂತ್ರಣದ ಸ್ವರೂಪವೇ ಬದಲಾಗುತ್ತದೆ.

ಒಂದು ಕಾಲದಲ್ಲಿ ಭೂಮಿಯು ಒಂದು ಸುತ್ತು ಸುತ್ತುವುದನ್ನು ಆಧಾರವಾಗಿಟ್ಟುಕೊಂಡು ಸಮಯವನ್ನು ಭಾಗಿಸಿ ಲೆಕ್ಕ ಹಾಕುವ ರೂಢಿಯಿತ್ತು. ಇಂದು ಒಂದು ಪರಮಾಣುವಿನಲ್ಲಿರುವ ಎಲೆಕ್ಟ್ರಾನ್ ಜಿಗಿತದಿಂದ ಹೊರಹೊಮ್ಮುವ ಬೆಳಕನ್ನು ಆಧರಿಸಿ, ಸಮಯವನ್ನು ಗುಣಿಸಿ ಲೆಕ್ಕ ಮಾಡಲಾಗುತ್ತಿದೆ. ಒಂದು ಕೋಲನ್ನು ಭೂಮಿಯಲ್ಲಿ ನೆಟ್ಟು, ಸೂರ್ಯನ ಬೆಳಕಿನಿಂದ ಅದರ

ನೆರಳನ್ನು ನೋಡಿ ಸಮಯ ಕಂಡುಕೊಳ್ಳುತ್ತಿದ್ದರೇ ಎಂದು ಊಹಿಸಲೂ ಆಗದೆ ಆಶ್ಚರ್ಯಪಡುವ ಸಮಯ ಈಗ ಬಂದಿದೆ. 'ಕಾಲಾಯ ತಸ್ಮೈ ನಮಃ' ಎಂದು ನಮಿಸಿ ಸಾಹಸಿಗರು ಅಂತರಿಕ್ಷಕ್ಕೆ ಜಿಗಿಯಲು ತಯಾರಿ ಮಾಡಿಕೊಳ್ಳಿ.

ಕೊನೆಯ ಮಾತು: ಪ್ರಪಂಚದಲ್ಲಿ ಈಗಲೂ ಸಮಯ ತೋರಿಸುತ್ತಿರುವ ಅತ್ಯಂತ ಹಳೆಯ ಯಾಂತ್ರಿಕ ಗಡಿಯಾರವೆಂದರೆ ಸುಮಾರು 1386ರಲ್ಲಿ ತಯಾರಾದ ಯುನೈಟೆಡ್ ಕಿಂಗ್‌ಡಮ್, ವಿಲ್ಟ್‌ಶೈರ್‌ನ ಸಾಲಿಸ್ಬರಿ ಚರ್ಚಿನಲ್ಲಿರುವ ಗಡಿಯಾರ. ಮುಖಫಲಕವೂ ಇಲ್ಲದ ಈ ಗಡಿಯಾರಕ್ಕೆ 1956ರಲ್ಲಿ ಮರುಜೀವ ನೀಡಲಾಗಿದೆ. ಇದು ತನ್ನ 498 ವರ್ಷಗಳ ಸೇವೆಯಲ್ಲಿ 500 ಮಿಲಿಯನ್ ಬಾರಿಗೂ ಹೆಚ್ಚು ಸಲ 'ಟಿಕ್, ಟಿಕ್' ಎಂದು ಸದ್ದು ಮಾಡಿದೆ.

(ಮಾಹಿತಿ ಮತ್ತು ಚಿತ್ರ ಕೃಪೆ ಅಂತರಜಾಲ)

ನಿತ್ಯ ನಿಜ

ಮಿಂದರೆ ಮೀನಾ ನದಿಯಲ್ಲಿ.....
ತಾಪವೇರುವುದೇ ಆಕೆಯ ತನುವಲ್ಲಿ??

ತೂಗಲು ಮಾವು ರೆಂಬೆಯಲಿ....
ಉಳುಕುವುದೇ ಸೊಂಟ ಒಳಓಟೆಯಲಿ....

ಪ್ರತಿ ಗಳಿಗೆ ಒಡ್ಡಲು ಮೈಯ್ಯ ರವಿಗೆ???
ಕೆಂಪೇರುವುದೇ ಬಣ್ಣ ಬಿಳಿ ಹೂವಿಗೆ???

ಬಿರುಸಾಗಿ ಆಗಸದಿಂದುದುರುವ ವರುಣ...
ಆಸರೆಯಿರದ ತಾರೆಯ ಕಿತ್ತೆಸೆದು ತಾರಬಲ್ಲನೇ ಮರಣ???

ಬೆತ್ತಲಾಗಿ ಆದಿತ್ಯನೆಡೆಗೆ ಹಾರಲು ಮೃದುಪಕ್ಷಿ....
ತಂಪಾಗುವನೆ ರವಿ ಹಕ್ಕಿಗಾಗಿ ಅನುಕಂಪದಿಂ ಕಿರಿದಾಗಿಸಿ ತನ್ನಕ್ಷಿ????

ಎಲ್ಲಕ್ಕೂ ಹೆದರಿದರೂ, ಸಕಲವೂ ಬೇಕೆನ್ನುವ ಓ ಮನುಜ....
ನಿನ್ನ ಬಿಟ್ಟು ಬೇರ್ಯಾವುದಕ್ಕೂ ಭುವಿಯಲ್ಲಿ ಹಂಗಿಲ್ಲವೆಂಬುದೇ "ನಿತ್ಯನಿಜ"

- ಶಾಂತಿವಾಸು

ಲೇಖನ

ನಗುವೊಂದು ರಸಪಾಕ

- ಎಂ.ಎಸ್.ನರಸಿಂಹಮೂರ್ತಿ

ಒಂದೇ ರೈಲಿನಲ್ಲಿ ಹೊರಟವರು ಒಂದೇ ಸಮಯಕ್ಕೆ ಗುರಿ ತಲುಪುತ್ತಾರೆ. ಆದರೆ ಒಂದೇ ಸಂಸ್ಥೆಯಲ್ಲಿ ಓದಿದವರು ಒಂದೇ ರೀತಿ ಗುರಿಯನ್ನು ಮುಟ್ಟಲು ಸಾಧ್ಯವಿಲ್ಲ. ಕಾರಣ, ವ್ಯಕ್ತಿಯಿಂದ ವ್ಯಕ್ತಿಗೆ ಸ್ವಭಾವದಲ್ಲಿ ಬದಲಾವಣೆ ಇರುತ್ತದೆ. ಮಾತು, ನಡತೆ, ಧೈರ್ಯದ ಜೊತೆಗೆ ನಗೆಯೂ ಇಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ.

ಕೆಲವರನ್ನು ನೋಡಿದಾಗ ಮಾತಾಡಿಸಬೇಕು ಅಂತ ಮನಸ್ಸು ಹಾತೊರೆಯುತ್ತೆ. ಇನ್ನು ಕೆಲವರು ಎದುರಾದಾಗ ಯಾಕಾಗಿ ನಾನು ಇಲ್ಲಿಗೆ ಬಂದೆನೋ ಅಂತ ದುಃಖ ಆಗುತ್ತೆ. ವಾಸ್ತವದಲ್ಲಿ ಅವರು ನಮಗೆ ಯಾವುದೇ ಬಗೆಯಲ್ಲಿ ತೊಂದ್ರೆ ಕೊಟ್ಟಿರೋಲ್ಲ. ಆದ್ರೂ ವ್ಯಕ್ತಿಯ ಮುಖ ನೋಡಿದಾಗ ಅಸಹನೆ. ಇದಕ್ಕೆ ಕಾರಣ ಭಿನ್ನ ವ್ಯಕ್ತಿತ್ವ, ಮಾತಿನ ವರಸೆ ಮತ್ತು ಸಹಿಸಲಾಗದ ಸ್ವಭಾವ. ಎಲ್ಲಿ ನಗೆ ಇರುತ್ತೋ ಅಲ್ಲಿ ಜನ ಸೇರ್ತಾರೆ. ನಗೆ ಇಲ್ಲದವನ ಮೋರೆ ಭುಸುಗುಡುವ ಯಂತ್ರ !

ನಗೆ ಎಂಬುದು ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕೆಲಸ ಅರಸಿ ಇಂಟರ್ವ್ಯೂಗೆ ಹೋದಾಗ ಅಲ್ಲಿ ಯಾವ ರೀತಿ ನಗುತ್ತೀರ ಎಂಬುದನ್ನು ಸಹ ಗಮನಿಸುತ್ತಾರೆ, ಸ್ವಂತ ಉದ್ಯೋಗ ಮಾಡುವವರಿಗೆ ಜನವನ್ನಾಕರ್ಷಿಸಲು ನಗೆ ಇರಲೇಬೇಕು.

ನಿನ್ನ ಮುಖದ ಮೇಲೆ ನಗೆ ಇಲ್ಲವಾದರೆ ನೀನು ಅಂಗಡಿಯನ್ನು ತೆರೆಯಬೇಡ ಎನ್ನುತ್ತದೆ ಜಪಾನಿನ ಗಾದೆ. ಹೊರಗಡೆ ಪ್ರಪಂಚ ನಗುನಗ್ತಾ ಇದೆ. ನೀನು ಜೋಲು ಮುಖ ಹೊತ್ಕೊಂಡು ರಸ್ತೆಗೆ ಬರಬೇಡ ಅಂತ ಸ್ವಾಮಿ ವಿವೇಕಾನಂದರು ಹೇಳಿದ್ದಾರೆ.

`ನನ್ನ ಜೀವನದಲ್ಲಿ ನಗೆ ಇಲ್ಲದೆ ಹೋಗಿದ್ರೆ ನಾನು ಯಾವತ್ತೋ ಆತ್ಮಹತ್ಯೆ ಮಾಡ್ಕೊಳ್ತಿದ್ದೆ!' ಮಹಾತ್ಮ ಗಾಂಧೀಜಿಯವರ ಈ ಮಾತು ಅರ್ಥಪೂರ್ಣ.

ನಗುವುದನ್ನು ಯಾರಿಗೆ ಯಾರೂ ಕಲಿಸುವ ಅಗತ್ಯವಿಲ್ಲ. ಅದು ಮೂಲ ಮಾನವನಿಂದ ಪ್ರಾರಂಭವಾಗಿ ಇವತ್ತಿನವರೆಗೆ ಹರಿದು ಬಂದಿರುವ ಶಾರೀರಿಕ ತಂತ್ರ. ಎಳೆಯ ಮಗು ತೊಟ್ಟಿಲಲ್ಲಿ ನಗುತ್ತೆ. ನಿದ್ದೆಯಲ್ಲೇ ನಗಲು ಮಗುವಿಗೆ ಹೇಳಿದವರು ಯಾರು ? ಅದು ಯಾರಿಂದ ಕಲಿಯಿತು? ನಗೆ ಎಂಬುದು ದೈವದತ್ತ ವರ.

ಆದರೆ ಮನುಷ್ಯ ಬೆಳೆದಂತೆಲ್ಲ ನಗೆಯನ್ನ ಕಡಿಮೆ ಮಾಡ್ತಾನೆ. ಎಲ್ಲ ಮಕ್ಕಳೂ ಹುಟ್ತಾ ವಿಶ್ವಮಾನವರೇ. ಆದರೆ ಬೆಳೆದ ಮೇಲೆ ಕೆಲವರು ಅಲ್ಪ ಮಾನವರಾಗುತ್ತಾರೆ. ಅದಕ್ಕೆ ಕಾರಣಗಳು ಹಲವಾರು. ನಗುವುದರಿಂದ ತನಗೇನು ಲಾಭ ಇದೆ ಎಂದು ಯೋಚಿಸುವ ಹಂತಕ್ಕೆ ಮನುಷ್ಯ ತಲುಪಿದರೆ ಅವನ ಮುಸುಡಿ ಹರಳೆಣ್ಣೆಯ ಗಡಿಗೆಯಾಗುತ್ತದೆ.

ನನ್ನ ಗೆಳೆಯನೊಬ್ಬ ಸರ್ಕಾರಿ ಕೆಲಸಕ್ಕೆ ಸೇರಿದ ಮೇಲೆ ನಗುವುದನ್ನೇ ಮರೆತುಬಿಟ್ಟ.

`ಯಾವಾಗ ನಗ್ತೀಯಾ ಗೆಳೆಯಾ?' ಎಂದು ಕೇಳಿದೆ.

`ಭಾನುವಾರ ಮಾತ್ರ ನಗ್ತೀನಿ' ಅಂದ.

`ಯಾಕೆ ಹೀಗೆ?'

`ಆಫೀಸಲ್ಲಿ ನಕ್ಕರೆ ರೇಟ್ ಕಡಿಮೆ ಆಗುತ್ತೆ' ಎಂದ !

ಅಲ್ಲಿಗೆ ನಗೆಗೂ, ರೇಟಿಗೂ ಸಂಬಂಧ ಇದೆ ಅಂತ ಆಯ್ತು. ನಗುವು ಸ್ನೇಹಕ್ಕೆ ಪೂರಕ, ಲಾಭಕ್ಕೆ ಮಾರಕ.

ಅನೇಕ ಉದ್ಯೋಗಗಳಲ್ಲಿ ನಗೆಗೆ ಮಹತ್ವ ನೀಡುತ್ತಾರೆ. ರಿಸೆಪ್ಷನಿಸ್ಟು, ಏರ್ ಹೋಸ್ಟೆಸ್ಸು, ವೈದ್ಯರು ಮುಂತಾದ ಕೆಲಸಗಳಿಗೆ ನಾವು ಅಪ್ಲೈ ಮಾಡಿದಾಗ ನಗು ಮುಖ ಗ್ರೇಸ್ ಅಂಕ ತಂದು ಕೊಡುತ್ತದೆ.

ನವರಸಗಳಲ್ಲಿ ಹಾಸ್ಯ ಎರಡನೇ ಸ್ಥಾನದಲ್ಲಿ ಕುಳಿತಿದೆ. ಶೃಂಗಾರದ ಜೊತೆ ಅದು ಹದವಾಗಿ ಬೆರೆಯುತ್ತದೆ. ತಾನೇ ನಗುವುದು ಆತ್ಮಸ್ಥ. ಇನ್ನೊಬ್ಬರನ್ನು ನಗಿಸುವುದು ಪರಸ್ಥ.

ನಗು ಇದ್ದ ಕಡೆ ದ್ವೇಷ ಅಡಗುತ್ತೆ. ಕೋಪ ಇಳಿಯುತ್ತೆ. ಯಾರಾದರೂ ನಮ್ಮ ಜೊತೆ ಜಗಳಕ್ಕೆ ಇಳಿದರು ಅಂತ ಇಟ್ಕೊಳ್ಳೋಣ. ಆಗ ನಾವು ನಗ್ತಾ ಅವರ ಮುಖ ನೋಡ್ತಿದ್ರೆ ಸಾಕು, ಅರ್ಧ ಜಗಳ ಕಡಿಮೆ ಆದ್ಹಾಗೆ.

`ಏನ್ರೀ ಹಾಗೆ ನಗ್ತೀರ?' ಎಂದು ಅವರು ಸಿಟ್ಟಾದಾಗ ಮತ್ತೆ ನಗಬೇಕು. ನಮ್ಮ ನಗು ನೋಡಿ ಆತ ತಣ್ಣಗಾಗುವ ಸಾಧ್ಯತೆಗಳಿವೆ. ಬೆಂಗಳೂರಿನಂಥ ಷಹರುಗಳಲ್ಲಿ ವಾಹನಗಳನ್ನು ಓಡಿಸುವಾಗ ಒಂದಕ್ಕೊಂದು ತಾಕುವುದು ಸಹಜ. ಸಣ್ಣ ವಿಷಯಕ್ಕೆ ಅನಗತ್ಯವಾಗಿ ಮುಖ ಸಿಂಡರಿಸಿಕೊಳ್ಳದೆ ಮುಗುಳ್ನಕ್ಕು ಸ್ಸಾರಿ ಹೇಳಿದರೆ ಅದರಿಂದ ಸಮಸ್ಯೆ ನಿವಾರಣೆಯಾಗುತ್ತೆ. ಬಿ.ಪಿ. ಏರುವುದಿಲ್ಲ, ಜನ ಸೇರುವುದಿಲ್ಲ. ಆದರೆ ಇದು ಸಾಮಾನ್ಯ ನಿಯಮವಿಲ್ಲ. ವಿವಿಧ ಜನರ ಸ್ವಭಾವ ಒಂದೇ ರೀತಿ ಇರುವುದಿಲ್ಲ. ಹಿರಿಯ ಸಾಹಿತಿಗಳು ಈ ಬಗ್ಗೆ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್ 1978ರಲ್ಲಿ ಅಮೆರಿಕಕ್ಕೆ ಭೇಟಿ ಕೊಟ್ಟಿದ್ದರು. ಸರ್ಕಸ್ ನೋಡಲು ಹೋದಾಗ ರೆಸ್ಟ್ ರೂಂನಿಂದ ಹೊರಗಡೆ ಬರಲು ಗೊತ್ತಾಗದೆ ಯಾವುದೋ ಗುಂಡಿಯನ್ನು ಒತ್ತಿದರು. Fire Alarm ಹೊಡೆದುಕೊಳ್ತು. ಫೈರ್ ಇಂಜಿನ್ಸ್ ಧಾವಿಸಿ ಬಂದವು. ಅಕಾರಣವಾಗಿ ಗುಂಡಿ ಒತ್ತಿದರೆ ಶಿಕ್ಷೆ ಆಗಬೇಕು. ಆದರೆ ಗೊರೂರು ರಾಮಸ್ವಾಮಿಯವರು ತಮ್ಮ ಅಸಹಾಯಕ ಸ್ಥಿತಿಯನ್ನು ವರ್ಣಿಸಿದರು.

`ಎಲ್ಲರೂ ಹೊರಟುಬಿಟ್ಟರು. ನಾನೊಬ್ಬನೇ ರೆಸ್ಟ್ ರೂಮಲ್ಲಿ ಸಿಕ್ಕಿ ಬಿದ್ದೆ. ಹಲವಾರು ಗುಂಡಿಗಳು ಇದ್ದವು. ಬಾಗಿಲು ತೆಗೆಯಲು ಯಾವುದೋ ಗುಂಡಿ ಒತ್ತಿದೆ. ಕ್ಷಮಿಸಿ, `ಅಟ್ಟದಿಂದ ಬಿದ್ದವನ್ನ ಭಡಿಯಿಂದ ಚಚ್ಚಿದ್ರು' ಅಂತ ಕನ್ನಡದಲ್ಲಿ ಪ್ರಾವರ್ಬ್ ಇದೆ ಅಂತ ವಿವರಿಸಿದರು. ಅದರ ಅರ್ಥ ಏನು ಎಂದಾಗ, ಇಂಗ್ಲಿಷ್ನಲ್ಲಿ ವರ್ಣಿಸಿದರು. ಇದನ್ನು ಕೇಳಿದವರಿಗೆಲ್ಲ ನಗು ಬಂತು. ಅದೇ ರೀತಿಯ ಎರಡು ಗಾದೆಗಳನ್ನ ಹೇಳಿ ರಂಜಿಸಿದರು. ಇದರಿಂದ ಸುಪ್ರೀತರಾದ ಅಗ್ನಿಶಾಮಕದಳದವರು ಗೊರೂರು ಅವರನ್ನು ಕಳಿಸಿಕೊಟ್ಟರು.

ಖ್ಯಾತ ನಗೆ ಬರಹಗಾರ ಹಾಗೂ ಪತ್ರಿಕೋದ್ಯಮಿ ಆಗಿದ್ದ ನಾಡಿಗೇರ ಕೃಷ್ಣರಾಯರು ಬಡತನದಲ್ಲಿ ಬೆಂದವರು, ಆದರೆ ನೊಂದವರಲ್ಲ. ಎಂಥ ಕಷ್ಟ ಬಂದಾಗಲೂ ನಗುತ್ತಲೇ ಇದ್ದವರು.

ನಾಡಿಗೇರರಿಗೆ ಹೆಣ್ಣು ಮಕ್ಕಳಿಲ್ಲ. ನಾಡಿಗೇರರ ಮಗಳಿಗೆ ಮದುವೆ, ಧನ ಸಹಾಯ ಮಾಡಿ ಎಂದು ಯಾವೋನೋ ಕಿಲಾಡಿ ಫ್ರಾಡ್ ಹುಡುಗ ಸಾಕಷ್ಟು ಹಣವನ್ನು ವಸೂಲಿ ಮಾಡಿದ್ದ. ಸಚಿವರ ಬಳಿಯೆಲ್ಲಾ ಹಣ ಕಮಾಯಿಸಿ ಕಡೆಗೂ ಸಿಕ್ಕಿ ಬಿದ್ದ. ಆ ಕಾಲಕ್ಕೆ ಅದು ದೊಡ್ಡ ಮೊತ್ತ, ಅವನು ಸುಮಾರು ಹತ್ತು ಸಾವಿರದಷ್ಟು ಸಂಗ್ರಹಿಸಿದ್ದ. ಇದನ್ನು ನನಗೆ ತಿಳಿಸಿದ ನಾಡಿಗೇರರು ಬಡತನದಲ್ಲೂ ಜೋಕನ್ನು ಮಾಡಿದರು.

`ಆ ಹುಡುಗನಿಗೂ ಕಷ್ಟ ಇದೆ, ನನಗೂ ಕಷ್ಟ ಇದೆ. ಅವನು ಮೊದಲೇ ನನ್ನ ಹತ್ರ ಬಂದು ಈ ವಿಷಯ ಹೇಳಿದ್ದಿದ್ರೆ ನಾವಿಬ್ರೂ ಪಾರ್ಟನರ್ ಶಿಪ್ ತಗೊಂಡು ಇಲ್ಲದೇ ಇರೋ ನನ್ನ ಮಗಳಿಗೆ ಮದ್ವೆ ಮಾಡೋಕೆ ಅಂತ ಇನ್ನೂ ಜಾಸ್ತಿ ಹಣ ವಸೂಲಿ ಮಾಡಬಹುದಿತ್ತು' ಎಂದರು.

.ಸಂಸಾರದಲ್ಲಿ ನಗೆಗೆ ಮಹತ್ವದ ಸ್ಥಾನವಿದೆ. ನಾವು ಕೆಲಸ ಮಾಡುವ ಕಛೇರಿಗಳಲ್ಲೂ ನಗೆಯ ಲಾಭ ಪಡೆದರೆ ಕೆಲಸಗಳು ಸುಗಮವಾಗುತ್ತವೆ. ಆದರೆ ನಕ್ಕರೆ ತನ್ನ ಅಂತಸ್ತು ಎಲ್ಲಿ ಕಡಿಮೆ ಆಗುವುದೋ ಎಂದು ಹಲವರು ಗಂಭೀರವಾಗಿರುವುದುಂಟು. ಬದುಕಿನ ಅವಶ್ಯಕತೆಯ ಬಹುಭಾಗವನ್ನ ಈಗ ಹಣ ಆಕ್ರಮಿಸಿದೆ. ಹಣದ ಮುಂದೆ ಬಂಧುತ್ವ, ಸ್ನೇಹ ಏನೂ ಇಲ್ಲ. ಕರೋನಾದಿಂದ ಸತ್ತ ಅಪ್ಪನ ಹೆಣವನ್ನ ಆಸ್ಪತ್ರೆಯಿಂದ ಬಿಡಿಸಿಕೊಂಡು ಬರಲು ಮಗ ಒಪ್ಪಲಿಲ್ಲ. `ಅಪ್ಪನ ಮೊಬೈಲು ಮತ್ತು ಹಣವನ್ನು ಮಾತ್ರ ನನಗೆ ಕೊಡಿ, ಬಾಡಿ ನೀವೇ ಡಿಸ್ಪೋಸ್ ಮಾಡಿ' ಎಂದು ಮಗರಾಯ ಹೇಳಿದ್ದು ಸುದ್ದಿಯಾಗಿತ್ತು. ಮನುಷ್ಯ ಇಷ್ಟು ಸ್ವಾರ್ಥಿಯಾಗಬಾರದು.

ನಗೆಯನ್ನು ರೂಢಿಸಿಕೊಂಡರೆ ಎಷ್ಟೋ ಕಾಯಿಲೆಗಳು ವಾಸಿಯಾಗುತ್ತವೆ ಎನ್ನುತ್ತಾರೆ ಮನೋ ವಿಜ್ಞಾನಿಗಳು. ನಗೆಯಿಂದಾಗುವ ಪ್ರಯೋಜನಗಳು ಅನೇಕ.

ನಗೆ ಎಂಬ ದಿವ್ಯೌಷಧಿ ಒತ್ತಡ ಮತ್ತು ನೋವನ್ನು ಕಡಿಮೆ ಮಾಡುತ್ತದೆ. ರೋಗ ನಿರೋಧಕ ಶಕ್ತಿ ಹೆಚ್ಚಿಸುತ್ತದೆ. ಹೃದಯ ರೋಗಕ್ಕೆ ಸ್ವಲ್ಪ ರಕ್ಷಣೆ ಕೊಡುತ್ತದೆ. ಸಂಬಂಧಗಳನ್ನು ಗಟ್ಟಿಗೊಳಿಸುತ್ತದೆ. ಸುತ್ತಲಿನ ಸಮಾಜವನ್ನು ನಮ್ಮತ್ತ ಆಕರ್ಷಿಸುತ್ತದೆ. ವಿರಸವನ್ನು ತಿಳಿಗೊಳಿಸುತ್ತದೆ. ಇನ್ನೂ ಅನೇಕ ರೀತಿಯಲ್ಲಿ ನಗೆ ಸಹಾಯ ಮಾಡುತ್ತದೆ. ಎಲ್ಲಿ, ಯಾವಾಗ, ಎಷ್ಟು ನಗಬೇಕೆಂಬುದನ್ನ ಯೋಚಿಸಬೇಕು. ನೆಮ್ಮದಿಯ ಬದುಕಿಗೆ, ಸ್ವಸ್ಥ ಸಮಾಜಕ್ಕೆ ನಗು ಮುಖ್ಯ ಎಂಬುದು ನಿರ್ವಿವಾದ. ನಗೆಯ ರಕ್ಷಾ ಕವಚ ಧರಿಸಿದವನಿಗೆ ಬೇರೆ ತಾಯತ ಬೇಕಾಗುವುದಿಲ್ಲ.

ನಾಲ್ಕು ದಶಕಗಳ ಹಿಂದೆ ನಾನು ನಾಡಿಗೇರ ಕೃಷ್ಣರಾಯರನ್ನು ಸಂದರ್ಶನ ಮಾಡಿ ಬಸವನಗುಡಿಯಲ್ಲಿ ನಡೆದು ಬರುತ್ತಿದ್ದಾಗ ಅವರು ಹೇಳಿದ ಜೋಕು ನೆನಪಾಗಿ ಜೋರಾಗಿ ಒಬ್ಬನೇ ನಕ್ಕೆ. ನನ್ನ ಕಂಡ ರಸ್ತೆ ಜನ ಹೀಗೆ ಮರುಕಪಟ್ಟರು.

`ಪಾಪ, ಚಿಕ್ಕ ವಯಸ್ಸಿಗೇ ಈ ಹುಡುಗನಿಗೆ ಹೀಗಾಗಬಾರದಿತ್ತು'

ಕಾಡುವ ಕನಸುಗಳು

- ಗೌರಿ ಭಟ್ಟ

ಮನುಷ್ಯನಿಗೆ ಕನಸುಗಳು ಬೀಳುವುದು ಸಹಜ. ಕೆಲವು ಕನಸುಗಳು ನೆನಪಿನಲ್ಲಿ ಇರುತ್ತವೆ. ಕೆಲವು ಮರೆತು ಹೋಗುತ್ತವೆ. ಕೆಲವು ನಮ್ಮನ್ನು ಕಾಡುತ್ತವೆ. ನನಗೆ ಪದೇಪದೇ ಬೀಳುವ ಕನಸುಗಳು ಬಹಳ ಇವೆ. ಅವುಗಳಲ್ಲಿ ನನ್ನನ್ನು ಕಾಡುವ ಕೆಲವು ಕನಸುಗಳನ್ನು ಇಲ್ಲಿ ಹಂಚಿಕೊಳ್ಳ ಬಯಸುತ್ತೇನೆ.

೧. ಕನಸು ಒಂದು

ಕೆನ್ನೆಗೆ ಅರಿಷಿಣ, ಹಣೆಗೆ ಕಾಸಿನಗಲ ಕುಂಕುಮ., ಅದೇ ನನಗಿಷ್ಟವಾದ ಆನಂದ ನೀಲಿ ಸೀರೆ, ಕೈಯಲ್ಲಿ ಅದೇ ಬಣ್ಣದ ಬಳೆಗಳು, ಮೈತುಂಬಾ ಸೆರಗು, ಕತ್ತಿನಲ್ಲಿ ಇಣುಕುತ್ತಿರುವ ಮಾಂಗಲ್ಯ, ಗಂಭೀರ ವಾಗಿ ಕುಳಿತಿರುವ ಅಪ್ಪನ ಪಕ್ಕದಲ್ಲಿ ಮಂದಸ್ಮಿತೆ ನನ್ನಮ್ಮ. ಹವನ ನಡೆಯುತ್ತಿದೆ. ಅಣ್ಣಂದಿರು ಅಣಿಗೊಳಿಸ್ತಾ ಇದ್ದಾರೆ. ಅಕ್ಕ ತಂಗಿಯರೆಲ್ಲಾ ಅಂಗಳದ ಬೆಂಚಿನಲ್ಲಿ ಕುಳಿತಿದ್ದಾರೆ. ಬಣ್ಣ ಬಣ್ಣದ ಸೀರೆ, ಅದೇ ಬಣ್ಣದ ಬಳೆ ಧರಿಸಿದ್ದಾರೆ. ಪಕ್ಕದಲ್ಲೇ ಸೀರೆಗಳ, ಬಳೆಗಳ ರಾಶಿ, ಎಲ್ಲರೂ ಅವರವರ ಆಯ್ಕೆಯ ನಂತರ ಖುಷಿಯಲ್ಲಿದ್ದಾರೆ. ನನ್ನ ವಿಳಂಬ, ನನಗೆ ಆಯ್ಕೆಯಿಲ್ಲ. ಒಂದು ತರಹ ನಿರಾಶೆ.

ಅಮ್ಮ ಏನೋ ಕಣ್ಸನ್ನೆ ಮಾಡುತ್ತಿದ್ದಾಳೆ. ಪೂಜೆಯ ಮಧ್ಯದಲ್ಲೇ ಎದ್ದು ಬಂದಿದ್ದಾಳೆ. ಅಪ್ಪ ಅಲ್ಲೇ ಅಸಹನೆಯಿಂದ ಅಮ್ಮ ನನ್ನು ನೋಡುತ್ತಿದ್ದಾರೆ. ಬೇರೊಂದು ಕೋಣೆಗೆ ಕರೆದುಕೊಂಡು ಹೋದ ನನ್ನ ಮ್ಮ ತೋರಿಸಿದಳು, ಕೋಣೆಯ ತುಂಬೆಲ್ಲಾ ನಗಿಷ್ಟವಾದ ನೀಲಿ ಬಣ್ಣದ ಬಳೆಗಳು, ಸೀರೆಗಳು, ಕನಕಾಂಬರ, ದುಂಡುಮಲ್ಲಿಗೆ ದಂಡೆ.

ಒಂದೇ ಒಂದು ಸಿಹಿಮುತ್ತು ಕೊಡಬೇಕೆಂದು ತಿರುಗಿದೆ.ಅಮ್ಮ ಇರಲಿಲ್ಲ.ಕನಸಿನಲ್ಲೂ ನನ್ನ ಆಸೆ ಪೂರೈಸಿದ್ದಳು ನನ್ನಮ್ಮ.

೨.ಇನ್ನೊಂದು ಕನಸು:

ಎದುರಿಗೆ ದೊಡ್ಡ ಗುಡ್ಡ. ಕಡಿದಾದ ದಾರಿ. ಆಳವಾದ ಕಣಿವೆ. ಜೊತೆಯಲ್ಲಿ ಯಾರೂ ಇರುವುದಿಲ್ಲ. ಗುಡ್ಡ ಹತ್ತಿಹತ್ತಿ ಬಹುದೂರ ಸಾಗುತ್ತೇನೆ. ದಾರಿಯೇ ಸಾಗುವುದಿಲ್ಲ. ಅವ್ಯಕ್ತ ಭಯವೂ ಆಗುತ್ತದೆ. ಆಗ ಆಕಾಶವೆಲ್ಲಾ ರಂಗುರಂಗು. ಅಲ್ಲಿ ಗಣೇಶ, ಸುಬ್ರಹ್ಮಣ್ಯರೊಡಗೂಡಿ ಶಿವಪಾರ್ವತಿಯರ ಚಿತ್ರಗಳು ಮೋಡಗಳ ಮೇಲೆ ಕೆತ್ತಿಟ್ಟಂತೆಯೇ ಕಾಣಿಸುತ್ತವೆ. ಗುಡ್ಡದ ಕೆಳಗಿನ ದೃಶ್ಯವಂತೂ ನಯನಮನೋಹರವಾಗಿರುತ್ತದೆ. ಬಗೆಬಗೆಯ ಗಿಡಗಳು, ಮರಗಳು, ಬಣ್ಣ ಬಣ್ಣದ ಹೂವುಗಳು ಕಣ್ತುಂಬಿ ಕೊಳ್ಳುವಷ್ಟರಲ್ಲೇ ಎಚ್ಚರಾಗುತ್ತದೆ.

೩. ಮತ್ತೊಂದು ಕನಸು

ಪರೀಕ್ಷೆ ಬರೆಯಲು ಹೋಗುತ್ತಿರುತ್ತೇನೆ. ಬಸ್ ನಿಲ್ದಾಣದಲ್ಲಿ ಬಸ್ಸಿಗೆ ಕಾಯುತ್ತಿರುತ್ತೇನೆ. ಒಂದು ಬಸ್ಸೂ ಬರುತ್ತಿಲ್ಲ!. ಕಾದೂಕಾದೂ ಅಂತೂ ಒಂದು ಬಸ್ ಬರುತ್ತದೆ. ಏರಿ ಕುಳಿತರೆ ಅದು ಎಲ್ಲೆಲ್ಲೋ ಸುತ್ತಾಡಿಕೊಂಡು ಗಮ್ಯಸ್ಥಾನ ಸೇರುತ್ತದೆ. ಪರೀಕ್ಷೆಯ ಹಾಲಿಗೆ ಬಂದರೆ ಎಲ್ಲರೂ ಗಂಭೀರವಾಗಿ ಬರೆಯುತ್ತಿರುತ್ತಾರೆ. ಪ್ರಶ್ನೆಪತ್ರಿಕೆ ನೋಡಿದರೆ ಒಂದೇ ಒಂದು ಉತ್ತರವೂಬಾರದು. ಗಲಿಬಿಲಿಯಿಂದ ಕಂಗಾಲಾಗಿರುವಾಗಲೇ ಎಚ್ಚರವಾಗುತ್ತದೆ. ನಂತರವೂ ಎದೆ ಲುಬ್ ಡುಬ್ಎಂದು ಹೊಡೆದುಕೊಳ್ಳುತ್ತಿರುತ್ತದೆ.

ಕಥಾ ಪ್ರಪಂಚ....8

ಬುದ್ಧನ ಜಾತಕ ಕಥೆಗಳು

- ವಿಠ್ಠಲ್ ಇಜೇರಿ

ಈ ಮುಂಚೆ ಪ್ರಾಚೀನ ಕಥಾ ಸಂಕಲನದಲ್ಲಿ 'ವಡ್ಡರಾಧನೆ' ಮತ್ತು 'ಕಥಾ ಸರಿತ್ಸಾಗರ' ಕಥೆಗಳ ಬಗ್ಗೆ ಹಿಂದಿನ ಎರಡು ದಾಸೋಹಗಳಲ್ಲಿ ಪ್ರಸ್ತುತಪಡಿಸಿದ್ದೆ. ಇಂದು ಭಾರತದ ಪ್ರಾಚೀನ ಕಥಾ ಸಂಚಯದಿಂದ ಬುದ್ಧನ ಜಾತಕ ಕಥೆಗಳ ಬಗ್ಗೆ ಮಂಡಿಸುತ್ತಿದ್ದೇನೆ.

ಈ ಕತೆಗಳು ಬುದ್ಧನ ಹಿಂದಿನ ಜನನಕ್ಕೆ ಸಂಬಂಧಿಸಿದ ಕಥೆಗಳು ಎಂದು ಹೇಳಲಾಗುತ್ತದೆ. ಇವು ಪಾಲಿ ಭಾಷೆಯಲ್ಲಿದ್ದು ಕ್ರಿಸ್ತ ಪೂರ್ವದ ಕಥೆಗಳು. ತತ್ವವನ್ನು ನೇರವಾಗಿ ಹೇಳಿದರೆ ನೀರಸವಾಗುತ್ತದೆ. ಅದನ್ನೇ ಕಥೆಗಳ ಮೂಲಕ ಪ್ರತಿಪಾದಿಸಿದರೆ ಆಕರ್ಷಕವಾಗಿರುತ್ತದೆ. ಕಥೆಗಳ ಮೂಲಕ ಜನರಲ್ಲಿ ಆಸಕ್ತಿಯನ್ನು ಕೆರಳಿಸಿ, ತನ್ಮೂಲಕ ಮೌಲ್ಯಗಳನ್ನು, ಆದರ್ಶಗಳನ್ನು, ಜೀವನ ಶ್ರದ್ಧೆಯನ್ನು ಅವರ ಮನದಲ್ಲಿ ಮೂಡಿಸುವುದು ಸುಲಭವಾಗುತ್ತದೆ. ಇದು ಜಾತಕ ಕಥೆಗಳ ಉದ್ದೇಶ. ಕ್ರಿಸ್ತ ಪೂರ್ವ 600ರಲ್ಲಿಯ ಕಥೆಗಳು ಇಂದಿಗೆ ಸಲ್ಲಬಹುದೇ?! ಎಂಬ ಪ್ರಶ್ನೆ ಸಹಜವಾದರೂ, ಸನ್ನಿವೇಶಗಳು ಬೇರೆ ಬೇರೆಯಾದರೂ ಜೀವನ ಮೌಲ್ಯಗಳು ಅಂದಿಗೂ ಇಂದಿಗೂ ಹಾಗೆಯೇ ಉಳಿದಿವೆ. ಆ ಆದರ್ಶಗಳನ್ನು ಪಾಲಿಸಿದವರು ಸಾಧಕರಾಗಿದ್ದಾರೆ, ಪಾಲಿಸದೇ ಇದ್ದವರು ಜೀವನದಲ್ಲಿ ಸೋತಿದ್ದಾರೆ. ಇದು ಅಂದಿಗೂ ಸತ್ಯ, ಇಂದಿಗೂ ಸತ್ಯ ಮತ್ತು ಮುಂದಿನ ತಲೆಮಾರಿಗೂ ಸತ್ಯ.

ಹಿಂಸೆ, ಅತ್ಯಾಚಾರ, ಅನಾಚಾರಗಳು ತಾಂಡವವಾಡುತ್ತಿದ್ದ ಬುದ್ಧನ ಕಾಲದಲ್ಲಿ (ಸುಮಾರು 2500 ವರ್ಷಗಳ ಹಿಂದೆ) ಜ್ಞಾನೋದಯ ಪಡೆದ ಬುದ್ಧನ ಕರುಣೆಯ, ಪ್ರೇಮದ ಮಾತುಗಳು ತಂಗಾಳಿಯಂತೆ ತೋರುತ್ತವೆ. ಕ್ರಿಸ್ತ ಪೂರ್ವ ಆರನೇ ಶತಮಾನದಲ್ಲಿ ಗೌತಮ ಬುದ್ಧನಿಂದ ಸ್ಥಾಪಿತವಾದ ಬೌದ್ಧ ಧರ್ಮ ತಾಯ್ನಾಡಿನಿಂದ ಹೊರಗೆ ಹೋಗಿ ವಿಶ್ವಧರ್ಮವಾಯಿತು. ಬುದ್ಧನು, ಜ್ಞಾನೋದಯವಾದ ಮೇಲೆ ಸುಮಾರು ನಲವತ್ತು ವರ್ಷಗಳ ಕಾಲ ಊರಿಂದ ಊರಿಗೆ ಸಂಚಾರ ಮಾಡಿ ಜ್ಞಾನದ ಬೆಳಕನ್ನು ನೀಡಿದ. ಅವನು ನೀಡಿದ ಉಪನ್ಯಾಸಗಳು, ಸಂಭಾಷಣೆಗಳು ಬಹಳ ಜನರ ಬದುಕನ್ನು ಹಸನುಗೊಳಿಸಿದವು. ಆ ಸಮಯದ ಕಥೆಗಳು ಈ ಜಾತಕ ಕತೆಗಳು.

ಈ ಸಮಯದ 547 ಕಥೆಗಳನ್ನು ಇಪ್ಪತ್ತೆರಡು ನಿಪಾತಗಳಲ್ಲಿ (ಭಾಗಗಳಲ್ಲಿ) ಅಳವಡಿಸಲಾಗಿದೆ. ಇದರಲ್ಲಿ ಕಥೆಗಳು, ಕಥನಗಳು, ಪ್ರಸಂಗಗಳು, ಜನಪದ, ನೀತಿ ಕತೆಗಳು ಎಲ್ಲವೂ ಇವೆ. ಇಲ್ಲಿ ಯಕ್ಷರು, ಕಿನ್ನರರು, ನಾಗರು, ಪಿಶಾಚಿಗಳು, ಮನುಷ್ಯರು ಎಲ್ಲರೂ ಬರುತ್ತಾರೆ. ಕಥೆಗಳ ಶೈಲಿ ಗದ್ಯ, ಸಂವಾದ, ಗೀತೆ, ಹೀಗೆ ಬಗೆಬಗೆಯಲ್ಲಿವೆ. ಮೊದಲು ಬುದ್ಧನ ಪೂರ್ವಜನ್ಮದ ಕಥೆ ಪ್ರಾರಂಭವಾಗಿ ಅಲ್ಲಿಯ ಪಾತ್ರಗಳಿಗೂ ನಂತರದ ಚಾರಿತ್ರಿಕ ಬುದ್ಧನ ಕಾಲದ ವ್ಯಕ್ತಿಗಳೊಡನೆ ಸಂಬಂಧ ಜೋಡಿಸಲಾಗುತ್ತದೆ. ಕೊನೆಯಲ್ಲಿ ಒಂದು ನೀತಿ, ಇಲ್ಲವೇ ತತ್ವ ಇರುತ್ತದೆ.

ಭಾರತದ ಹಿಂದಿನ ಕಥಾ ಪ್ರಪಂಚದಲ್ಲಿ ಪ್ರಚಲಿತವಿರುವ ಸಾವಿರಾರು ಕತೆಗಳಲ್ಲಿ ನೂರಾರು ಕಥೆಗಳಿಗೆ ಜಾತಕ ಕಥೆಗಳೇ ಸ್ಫೂರ್ತಿ. ಹಿತೋಪದೇಶ, ಪಂಚತಂತ್ರ ಬೃಹತ್ ಕತೆಗಳಲ್ಲಿ ಜಾತಕ ಕಥೆಗಳ ಪ್ರಭಾವ ಸಾಕಷ್ಟು ಆಗಿದೆ. ಸಿಂಹ ಗೂಳಿಗಳ ಮಿತ್ರಬೇಧ, ಮೊಸಳೆ ಕತೆ, ಸಿಂಹದ ಚರ್ಮ ಹೊದ್ದ ಕತ್ತೆಯ ಕತೆ, ಕಾಗೆಯ ಕಂಠ ಮಧುರ ಎಂದ ನರಿಯ ಕತೆ, ಇವೆಲ್ಲ ಮೂಲದಲ್ಲಿ ಜಾತಕ ಕಥೆಗಳೇ.

ಕ್ರಿ. ಶ. ಮೂರು, ಎರಡರಲ್ಲಿ ಸಾಂಚಿ ಸ್ತೂಪದಲ್ಲಿ ಹಲವಾರು ಬಗೆಯ ಶಿಲ್ಪಗಳಿವೆ. ಅವು ಜಾತಕ ಕಥೆಗಳಿಗೆ ಸಂಬಂದಿಸಿದವು. ಅದೇ ರೀತಿ 6ನೇ ಶತಮಾನದಲ್ಲಿ ಅಜಂತಾ ಗುಹಾಂತರ ದೇವಾಲಯದಲ್ಲೂ ಜಾತಕ ಕತೆ ಹೇಳುವ ಶಿಲ್ಪಗಳಿವೆ. ಕ್ರಿ.ಶ. 412ರಲ್ಲಿ ಸಿಂಹಳ ಯಾತ್ರೆಗೆ ಬಂದ ಫಾಹಿಯಾನನು ಅಭಯಗಿರಿ ಎಂಬಲ್ಲಿ ಉತ್ಸವದಲ್ಲಿ ಪಾಲ್ಗೊಂಡಿದ್ದ. ಅವನು ಉತ್ಸವದ ದಾರಿಯಲ್ಲಿ ಎರಡೂ ಬದಿಗೂ ಜಾತಕ ಕತೆಗಳು ಶಿಲ್ಪದಲ್ಲಿ ಇದ್ದ ಬಗ್ಗೆ ಬರೆದಿದ್ದಾನೆ. ಈ ಶಿಲ್ಪಗಳಲ್ಲಿ ಆ ಸಮಯದ ವೇಷಭೂಷಣಗಳು, ಆಭರಣಗಳು, ಕೇಶ ಶೃಂಗಾರ, ಜೀವನ ಶೈಲಿ, ಸಂಸ್ಕೃತಿ, ಮೊದಲಾದ ವಿವರಗಳನ್ನು ತಿಳಿಯಬಹುದಾಗಿದೆ. ರಾಮಾಯಣ, ಮಹಾಭಾರತದ ಪ್ರಭಾವವೂ ಜಾತಕ ಕತೆಗಳಲ್ಲಿ ಗಾಢವಾಗಿ ಕಾಣುತ್ತದೆ.

ಕಳೆದ ಶತಮಾನದಲ್ಲಿ ಡೆನ್ಮಾರ್ಕ್ ದೇಶದ ಫಾಜಬೋಲ್ ಎಂಬ ವಿದ್ವಾಂಸ ಸಮಸ್ತ ಜಾತಕ ಕಥೆಗಳ ಮೂಲವನ್ನು ಪರಿಶೋಧಿಸಿ ರೋಮನ್ ಲಿಪಿಯಲ್ಲಿ ಹಲವು ಸಂಪುಟಗಳಲ್ಲಿ ಪ್ರಕಟಿಸಿದ. ಕೆಲವು ಕತೆಗಳು ಇಂಗ್ಲಿಷ್ ಭಾಷೆಗೆ ಅನುವಾದವು. ಕನ್ನಡದಲ್ಲಿ ಜಾತಕ ಕತೆಗಳನ್ನು ಅನುವಾದ ಮಾಡಿದವರಲ್ಲಿ ಜಿ.ಪಿ. ರಾಜರತ್ನಂ ಪ್ರಮುಖರು.

ಒಂದು ಜಾತಕ ಕತೆ:

ಪೂರ್ವ ಕಾಲದಲ್ಲಿ ಕಾಶಿ ರಾಜ್ಯವನ್ನು ಬ್ರಹ್ಮದತ್ತ ಎಂಬ ರಾಜ ಆಳುತ್ತಿದ್ದ. ಅವನಿಗೆ ನೂರು ಮಂದಿ ಕುವರರಿದ್ದರು. ಎಲ್ಲರಿಗಿಂತ ಚಿಕ್ಕವನು ಸಂವರ ಎಂಬುವನು. ರಾಜ ಎಲ್ಲ ಮಕ್ಕಳ ಶಿಕ್ಷಣಕ್ಕೂ ಒಬ್ಬೊಬ್ಬ ಗುರುಗಳನ್ನು ನಿಯಮಿಸಿದ. ಚಿಕ್ಕವನಾದ ಸಂವರನನ ಗುರು ಕೂಡ ಬೋಧಿಸತ್ವನ ಅವತಾರವೇ. ಮಹಾಜ್ಞಾನಿಯಾದ ಬೋಧಿಸತ್ವನು ಸಂವರನನ್ನು ಸಕಲ ವಿದ್ಯಾಪಾರಂಗತನನ್ನಾಗಿ ಮಾಡಿದನು. ರಾಜನು ಎಲ್ಲ ಮಕ್ಕಳಿಗೂ ಒಂದೊಂದು ಪ್ರಾಂತದ ಪಾಲಕರನ್ನಾಗಿ ನಿಯಮಿಸಿ ಕಳಿಸಿದನು.

ಆದರೆ ಸಂವರನ ಗುರು ಭೋಧಿಸತ್ವ, "ನೀನು ಯಾವುದೇ ಪ್ರಾಂತದ ಅಧಿಕಾರ ವಹಿಸಿಕೊಳ್ಳಬೇಡ. ನಿಮ್ಮ ತಂದೆಯವರ ಯೋಗಕ್ಷೇಮ ನೋಡಿಕೊಳ್ಳಲು ಒಬ್ಬರು ಯುವಕ ಬೇಕು" ಎಂದು ಹೇಳಿದರು. ಸಂವರನು ತಂದೆಗೆ, "ಅಪ್ಪ, ನಾನು ನಿಮ್ಮ ಕಡೆಯ ಮಗ. ಅಣ್ಣಂದಿರಂತೆ ನಾನೂ ನಿಮ್ಮನ್ನು ಬಿಟ್ಟು ಹೋದರೆ ನಿಮ್ಮನ್ನು ನೋಡಿಕೊಳ್ಳುವವರು ಯಾರು? ನಾನು ನಿಮ್ಮ ಸೇವೆ ಮಾಡಿಕೊಂಡು ಇರುತ್ತೇನೆ" ಎಂದು ಹೇಳಿ ಅವರೊಡನೆ ಉಳಿದ. ಅವನು ವೃಕ್ಷಗಳನ್ನು ನೆಡಿಸಿದ, ಹೂದೋಟಗಳನ್ನು ನಿರ್ಮಿಸಿದ. ಅನ್ನ ಸಂತರ್ಪಣೆ ಮಾಡಿದ. ಹೊರಗಡೆಯಿಂದ ಬರುವ ಅತಿಥಿಗಳಿಗೆ ಒಳ್ಳೇ ಬಿಡಾರ ನಿರ್ಮಿಸಿದ. ರಾಜ್ಯದೆಲ್ಲೆಡೆ ಅವನ ಕೀರ್ತಿ ಹರಡಿತು. ರಾಜ ವಯಸ್ಸಾದಾಗ ಮಂತ್ರಿಗಳ ಸಲಹೆಯಂತೆ ಸಂವರನಿಗೆ ರಾಜ್ಯಭಾರ ಒಪ್ಪಿಸಿದ. ಉಳಿದ 99 ಸೋದರರಿಗೆ ಕೋಪ ಬಂದು ದಾಳಿ ಮಾಡಿದರು. ಸಂವರನು ಅವರಿಗೆ ನನಗೆ ಎಲ್ಲ ರಾಜ್ಯದ ಭಾರ ಬೇಡ, ನೀವು ನಿಮ್ಮ ನಿಮ್ಮ ಪ್ರಾಂತದ ರಾಜರಾಗಿರಿ" ಎಂದು ಸಾರಿದ. ಆಗ ಹಿರಿಯ ಅಣ್ಣ, "ನಮಗೆ ಮೋಸ ಮಾಡಿದ ಎಂದು ಜಗಳಕ್ಕೆ ಬಂದರೆ, ನಮಗೆಲ್ಲರನ್ನೂ ರಾಜರನ್ನಾಗಿ ಮಾಡಿದ. ಅವನು ಪ್ರಾಮಾಣಿಕ, ಜನಾನುರಾಗಿ ಅವನೇ ರಾಜನಾಗಲಿ" ಎಂದು ಹಾರೈಸಿದನು. ಉಳಿದವರೂ ಒಪ್ಪಿದರು. ಹೀಗೆ ತ್ಯಾಗ ಮತ್ತು ಸೇವೆ, ಪ್ರಾಮಾಣಿಕತೆ ಶ್ರೇಷ್ಠ ಎಂದು ಕತೆ ನಿರೂಪಿಸುವುದು.

ಸನಾತನ ಧರ್ಮ- ಸ್ಮೃತಿಗಳಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯ - ಸನ್ಮಾನ

(ಇಂದಿನ ಅಫಘಾನಿಸ್ಥಾನದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನಮ್ಮ ಸನಾತನ ಧರ್ಮ, ಸಂಸ್ಕೃತಿಗಳಲ್ಲಿ
ಸ್ತ್ರೀಯರಿಗೆ ನೀಡಿದ ಸ್ವಾತಂತ್ರ್ಯ – ಸನ್ಮಾನಗಳ ಪರಿಚಯ)

– ಡಾ. ಜಯಂತಿ ಮನೋಹರ್

ನಮ್ಮ ಎಲ್ಲಾ ಧರ್ಮಶಾಸ್ತ್ರಗಳು ಹಾಗೂ ಪುರಾಣೇತಿಹಾಸಗಳು 'ವೇದೋ-ಖಿಲೋ ಧರ್ಮಮೂಲಮ್ – ವೇದವೇ ಎಲ್ಲಾ ಧರ್ಮದ ಮೂಲ' ಎನ್ನುವ ಮಾತನ್ನು ಹೇಳುತ್ತವೆ. ಮಹಿಳೆಯರೂ ಸೇರಿದಂತೆ, ಯಾರೂ ಜ್ಯೇಷ್ಠರಲ್ಲ. ಯಾರೂ ಕನಿಷ್ಠರಲ್ಲ ಎನ್ನುತ್ತದೆ.

ವೇದ (ಅಥರ್ವ: 10.8.27).
ತ್ವಂ ಸ್ತ್ರೀ ತ್ವಂ ಪುಮಾನ್ ತ್ವಂ ಕುಮಾರ ಉತ ವಾ ಕುಮಾರೀ |
ತ್ವಂ ಜೀರ್ಣೋ ದಂಡೇನ ವಂಚಸಿ ತ್ವಂ ಜಾತೋ ಭವಸಿ ವಿಶ್ವತೋಮುಖಃ || ಅಥರ್ವ: 10.8.27
"ಎಲೈ ಜೀವಿಯೇ, ನೀನು ಸ್ತ್ರೀಯಾಗಿದ್ದೀಯ, ನೀನು ಪುರುಷನೂ ಆಗಿದ್ದೀಯ, (ವಯೋಮಾನಕ್ಕನುಗುಣವಾಗಿ), ಎಳೆಯ ವಯಸ್ಸಿನ ಕುಮಾರನೋ ಕುಮಾರಿಯೋ ಆಗಿದ್ದೀಯ, (ವಯಸ್ಸಾಗಿ), ಕೋಲು ಹಿಡಿದು ನಡೆಯುತ್ತೀಯ, ಮತ್ತೆ ಮತ್ತೆ ಹುಟ್ಟುತ್ತಾ ವಿಶ್ವದಲ್ಲಿ ನಾನಾಮುಖಗಳನ್ನು ಹೊಂದುತ್ತೀಯ''

ಪುರುಷರಂತೆಯೇ ಗುರುಕುಲಗಳಲ್ಲಿ ವಿದ್ಯಾಭ್ಯಾಸ ಮಾಡಿ ಉನ್ನತ ಜ್ಞಾನ ಪಡೆದ, ತಪೋನಿರತರಾದ ಮಹಾ ದರ್ಶನಗಳನ್ನು ಕಂಡಿರುವ ಮಹಿಳಾ ಋಷಿಗಳು ವೇದ ಮಂತ್ರಗಳಲ್ಲಿ ಕಾಣುತ್ತಾರೆ. ಮಗಳನ್ನು ಪಡೆಯಲು ಯಾಗ ಮಾಡಿದ ಉದಾಹರಣೆಗಳಿವೆ. ಉಪನಿಷತ್ತುಗಳಲ್ಲಿ ತಂದೆ ತನ್ನ ಮಗಳನ್ನು ಗುರುಗಳ ಬಳಿ ಕರೆದೊಯ್ಯುವ ಉಲ್ಲೇಖವಿದೆ (ಬೃ.ಉ.೬.೪.೧೯). ಪಾಣಿನಿ ಹಾಗೂ ಪತಂಜಲಿಗಳ ವ್ಯಾಕರಣ ಗ್ರಂಥಗಳಲ್ಲಿ ಗುರುಕುಲಗಳಲ್ಲಿ ಬೋಧಕರಾಗಿದ್ದ ಮಹಿಳೆಯರಿಗೆ, ಆಚಾರ್ಯಾ ಮತ್ತು ಉಪಾಧ್ಯಾಯಾ ಎನ್ನುವ ಸಂಬೋಧನೆ ಕಾಣುತ್ತದೆ. ಹಾಗೆಯೇ, ಅಪಿಶಲಾ (ಅಪಿಶಲೀ ವ್ಯಾಕರಣವನ್ನು ಅಧ್ಯಯನ ಮಾಡುವವಳು) ಎಂದೂ, ಕಾಶಕೃತ್ಸ್ನಾ (ಕಾಶಕೃತ್ಸ್ನನ ಮೀಮಾಂಸಾಗ್ರಂಥವನ್ನು ಅಧ್ಯಯನ ಮಾಡುವವಳು) ಎನ್ನುವ ಉಲ್ಲೇಖ ಅಲ್ಲಿದೆ.

ವಿದ್ಯಾರ್ಜನೆಯಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯ 'ಸದ್ಯೋವಧುಗಳು' - `ಬ್ರಹ್ಮವಾದಿನಿ'ಯರು

ಗುರುಕುಲಗಳಲ್ಲಿ ವಿದ್ಯೆ ಪಡೆಯಲು ಸ್ತ್ರೀಯರಿಗೆ ಮುಕ್ತ ಅವಕಾಶವಿತ್ತು. ವಿದ್ಯಾರ್ಜನೆಯಾದ ತರುವಾಯ ವಿವಾಹಿತರಾಗುವವರನ್ನು 'ಸದ್ಯೋವಧುಗಳು' ಎಂದೂ, ಹೆಚ್ಚಿನ ಸಾಧನೆ ನಡೆಸಿದ ವೇದವಿದರು `ಬ್ರಹ್ಮವಾದಿನಿ'ಯರು - 'ಋಷಿಗಳು' ಎಂದೂ ಪ್ರಖ್ಯಾತರಾಗಿದ್ದಾರೆ. ವೇದಮಂತ್ರಗಳಲ್ಲಿ ಕಾಣುವ ವಸಿಷ್ಠ, ಪರಾಶರ, ವಿಶ್ವಾಮಿತ್ರ, ವಾಮದೇವ ಮುಂತಾದ ಪ್ರಸಿದ್ಧ ಋಷಿಗಳೊಂದಿಗೆ, ವಾಗಂಭೃಣೀ, ದಾಕ್ಷಾಯಣೀ, ಅಪಾಲಾ, ಆತ್ರೇಯೀ, ಮೊದಲಾದ ಮೂವತ್ತೆರಡು ಬ್ರಹ್ಮವಾದಿನಿಯರು ಕಾಣುತ್ತಾರೆ. ಹೀಗೆ, ಅತ್ಯುನ್ನತ ಸ್ಥಾನದಲ್ಲಿ ಮಹಿಳಾ ದಾರ್ಶನಿಕರ ಉಲ್ಲೇಖ ಮತ್ತಿನ್ಯಾವುದೇ ಧಾರ್ಮಿಕ ಪರಂಪರೆಯಲ್ಲಿ ಸಿಗುವುದಿಲ್ಲ. ಸಾಮಾನ್ಯರಿಗೂ ಇದ್ದ ಸ್ವಯಂವರದ ಅವಕಾಶ. ಬಾಲ್ಯವಿವಾಹ ಅಂದು ಇರಲಿಲ್ಲ

ಭದ್ರಾ ವಧೂರ್ಭವತಿ ಯತ್ಸುಪೇಶಾಃ| ಸ್ವಯಂ ಸಾ ಮಿತ್ರಂ ವನುತೇ ಜನೇ ಚಿತ್ || ಋಗ್ವೇದ:10.27.12
"ಕನ್ಯೆಯು ತಾನಾಗಿಯೇ ಸ್ನೇಹದಿಂದ ಪತಿಯನ್ನು ವರಿಸಿದಲ್ಲಿ ಅವಳು ಉತ್ತಮವಾಗಿ ಪತಿಧರ್ಮವನ್ನು ನಿಭಾಯಿಸ ಬಲ್ಲವಳಾಗುತ್ತಾಳೆ".

ವೇದಕಾಲಾನಂತರ ರಚಿತವಾದ ಮನು ಧರ್ಮಶಾಸ್ತ್ರದಲ್ಲಿಯೂ ಈ ವಿಚಾರ ಕಾಣುತ್ತದೆ.

ತ್ರೀಣಿ ವರ್ಷಾಣ್ಯುದೀಕ್ಷೇತ ಕುಮಾರ್ಯುತುಮತೀ ಸತೀ |
ಊರ್ಧ್ವಂ ತು ಕಾಲಾದೇತಸ್ಮಾತ್ ವಿಂದೇತ ಸದೃಶಂ ಪತಿಂ || ಮ.ಧ: 9 – 90
"ಋತುಮತಿಯಾದ ಕನ್ಯೆ, ಹಿರಿಯರು ವಿವಾಹ ಮಾಡಿಕೊಡಲು ಮೂರು ವರ್ಷ ಕಾಯಬೇಕು. ಆನಂತರ ಅವಳು ತನಗೆ ಯೋಗ್ಯನಾದ ಪತಿಯನ್ನು ವರಿಸಬಹುದು."

ವಿಧವೆಯರ ಮರು ವಿವಾಹ ಅಂದು ಸಾಮಾನ್ಯ ಸಂಗತಿಯಾಗಿತ್ತು.

ಉದೀರ್ಷ್ವ ನಾರ್ಯಭಿ ಜೀವಲೋಕಂ ಗತಾಸುಮೇತಂ ಉಪಶೇಷ ಏಹಿ|
ಹಸ್ತಗ್ರಾಭಸ್ಯ ದಿಧಿಷೋಸ್ತವೇದಂ ಪತ್ಯುರ್ಜನಿತ್ವಮಭಿ ಸಂ ಬಭೂಥ|| ಋ.10.18.8
"ಎಲೈ ನಾರಿ, ಎದ್ದೇಳು, ಗತಿಸಿದ ಪತಿಯನ್ನು ಬಿಟ್ಟು ನಿನ್ನ ಕೈಹಿಡಿದಿರುವ ಪತಿಯೊಂದಿಗೆ ಬಾಳಲು ಈಗ ಜೀವಲೋಕದೆಡೆಗೆ ಬಾ."

ವೇದ ಸಂಸ್ಕೃತಿಯ ಅವನತಿಯ ಪರಾಕಾಷ್ಠೆಯಾದ ಘೋರ ಸತಿ ಪದ್ಧತಿಯ ಆಚರಣೆ

ಮೇಲೆ ತಿಳಿಸಿದ ಋಗ್ವೇದ ಮಂತ್ರದ ಉಲ್ಲೇಖದಿಂದಾಗಿ ಅಂದು ಸತಿ ಪದ್ಧತಿಯ ಆಚರಣೆ ಇರಲಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಇದು ಪ್ರಮುಖ ಧರ್ಮ ಶಾಸ್ತ್ರಗಳಾದ ಮನು - ಯಾಜ್ಞವಲ್ಕ್ಯ – ಪರಾಶರ ಸ್ಮೃತಿಗಳಲ್ಲಿಯೂ ಕಾಣುವುದಿಲ್ಲ. ರಾಮಾಯಣದಲ್ಲಿ ದಶರಥನ ಪತ್ನಿಯರ ಸಹಗಮನ ಆಗುವುದಿಲ್ಲ. ಮಹಾಭಾರತದಲ್ಲಿ, ಪತಿಯೊಂದಿಗೆ ಸಾಗುವ ಮಾದ್ರಿಯನ್ನು ಋಷಿಗಳು ತಡೆಯುತ್ತಾರೆ. ಆದರೆ ಪತಿಯ ಮರಣಕ್ಕೆ ತಾನು ಕಾರಣಳಾದೆ ಎಂಬ ಅವಳ ಸಮರ್ಥನೆ ಅಲ್ಲಿದೆ.

ನಮ್ಮ ದೇಶದಲ್ಲಿ ಸಹಗಮನದ ಮೊದಲ ದಾಖಲೆ ಕಾಣುವುದು ಪ್ರ.ಶ.510 ರಲ್ಲಿ. ಮಾಳ್ವದ ಏರನ್ ಶಿಲಾಸ್ತಂಭದಲ್ಲಿ ಕಾಣುವ ಫಲಕದಲ್ಲಿ ಇದರ ದಾಖಲೆ ಕಾಣುತ್ತದೆ. ಹೆಚ್ಚು ಕಾಣುವುದು 9ನೇ ಶತಮಾನದ ನಂತರ. ಅದಕ್ಕೆ ಮೊದಲೇ, ಈಜಿಪ್ಟ್, ಸ್ಕ್ಯಾಂಡಿನೇವಿಯಾ, ಚೀನಾ ದೇಶಗಳಲ್ಲಿ ಕಾಣುತ್ತದೆ.

ಮನು ಧರ್ಮಶಾಸ್ತ್ರದಲ್ಲಿ ಬಲಾತ್ಕಾರಕ್ಕೆ ರಾಜನಿಂದ ಕಟು ಶಿಕ್ಷೆಯ ಶಾಸನ

ಪರದಾರಾಭಿಮರ್ಶೇಷು ಪ್ರವೃತ್ತಾನ್ ಮಹೀಪತಿಃ |
ಉದ್ವೇಜನಕರೈರ್ದಂಡೈಃ ಛಿನ್ನಯಿತ್ವಾ ಪ್ರವಾಸಯೇತ್ ||ಮ.ಧ: 8-352
"ಪರಸ್ತ್ರೀಯರನ್ನು ಕೆಡಿಸುವ/ ಕೆಡಿಸಲು ಯತ್ನಿಸುವ ಪುರುಷರ ಅಂಗಾಂಗಗಳನ್ನು ಕತ್ತರಿಸಿ ರಾಜ ಅವನನ್ನು ದೇಶ ಬಿಟ್ಟು ಓಡಿಸಬೇಕು".

ಅಂತೆಯೇ,

ಯಃ ಅಕಾಮಾಂ ದೂಷಯೇತ್ಕನ್ಯಾಂ ಸ ಸದ್ಯೋ ವಧಮರ್ಹತಿ (ಮ.ಧ:೮-೩೬೪)
"ಕನ್ಯೆಯನ್ನು ಬಲಾತ್ಕರಿಸುವ ಪುರುಷ ವಧಾರ್ಹ "ಎನ್ನುತ್ತದೆ ಮನುಧರ್ಮಶಾಸ್ತ್ರ.

ಇಂದು ನಮ್ಮ ಸಮಾಜದಲ್ಲಿ ಕೆಲವರು ಬಲಾತ್ಕಾರಕ್ಕೆ ಒಳಗಾದ ಮಹಿಳೆಯರನ್ನೇ ದೂಷಿಸುವುದನ್ನು ಕಾಣುವಾಗ ಮಹರ್ಷಿ ವರಾಹಮಿಹಿರರು ಪ್ರಸಕ್ತ ಶಕೆ ೬ ನೇ ಶತಮಾನದಲ್ಲಿ ಹೇಳಿರುವ ಮಾತಿನ ಹಿಂದಿರುವ ಜೈವಿಕ ಸತ್ಯವನ್ನು ಗಮನಿಸಬೇಕು.

ಸ್ತ್ರಿಯಃ ಪವಿತ್ರಮತುಲಂ ನೈತಾ ದುಷ್ಯಂತಿ ಕರ್ಹಿಚಿತ್ |
ಮಾಸಿ ಮಾಸಿ ರಜೋ ಹ್ಯಾಸಾಂ ದುಷ್ಕೃತಾನ್ಯಪಕರ್ಷತಿ ||9|| ಬೃಹತ್ ಸಂಹಿತೆ
ಸ್ತ್ರೀ ಪ್ರಶಂಸಾ ಅಧ್ಯಾಯ – ಖಗೋಳ ಶಾಸ್ತ್ರಜ್ಞ ಮಹರ್ಷಿ ವರಾಹಮಿಹಿರ – ಪ್ರ.ಶ. 6ನೇ ಶತಮಾನ.
"ಸ್ತ್ರೀಯರು ಎಂದಿಗೂ ಪವಿತ್ರರು. ಬಲಾತ್ಕಾರದಿಂದ ಅವರು ದೋಷಯುಕ್ತರಾಗುವುದಿಲ್ಲ. ಪ್ರತಿತಿಂಗಳು ಹೊರಹೋಗುವ ರಜಸ್ಸು ಅವರ ಮೇಲಾದ ದುಷ್ಕೃತ್ಯಗಳನ್ನು ನಿವಾರಿಸುತ್ತದೆ" .

ಮನುಧರ್ಮಶಾಸ್ತ್ರದಲ್ಲಿ ಪತ್ನಿಯ ಸ್ಥಾನ

ಶೋಚಂತಿ ಜಾಮಯೋ ಯತ್ರ ವಿನಶ್ಯತ್ಯಾಶು ತತ್ಕುಲಂ|
ನಶೋಚಂತಿ ತು ಯತ್ರೈತಾ ವರ್ಧತೇ ತದ್ಧಿ ಸರ್ವದಾ|| ಮ.ಧ.3.57
"ಯಾವ ಕುಲದಲ್ಲಿ ಸ್ತ್ರೀಯರು ದುಃಖಿಸುತ್ತಾರೋ ಆ ವಂಶ ನಿರ್ವಂಶವಾಗುತ್ತದೆ. ಯಾವ ವಂಶದಲ್ಲಿ ಅವರು ಸಂತೋಷದಿಂದಿರುತ್ತಾರೋ ಆ ವಂಶವು ಸರ್ವದಾ ಅಭಿವೃದ್ಧಿ ಹೊಂದುತ್ತದೆ"

ತಸ್ಮಾದೇತಾಃ ಸದಾ ಪೂಜ್ಯಾಃ ಭೂಷಣಾಚ್ಛಾದನಾಶನೈಃ|
ಭೂತಿಕಾಮೈರ್ನರೈರ್ನಿತ್ಯಂ ಸತ್ಕಾರೇಷೂತ್ಸವೇಷು ಚ|| ಮ.ಧ:3.59
"ಸುಖ - ಸಂಪತ್ತುಗಳನ್ನು ಬಯಸುವವರು ನಿತ್ಯವೂ ಸ್ತ್ರೀಯರನ್ನು ಒಳ್ಳೆಯ ಭೋಜನ – ಆಭೂಷಣಗಳೊಂದಿಗೆ ಮನೆಯಲ್ಲಿ - ಉತ್ಸವಗಳಲ್ಲಿ ಸತ್ಕರಿಸಬೇಕು "

ಸಂತುಷ್ಟೋ ಭಾರ್ಯಯಾ ಭರ್ತಾ ಭರ್ತ್ರಾ ಭಾರ್ಯಾ ತಥೈವ|
ಯಸ್ಮಿನ್ನೇವ ಕುಲೇ ನಿತ್ಯಂ ಕಲ್ಯಾಣಂ ತತ್ರ ವೈ ಧ್ರುವಂ|| ಮ.ಧ:3.60
"ಯಾವ ಮನೆಯಲ್ಲಿ ಗಂಡನು ಹೆಂಡತಿಯಿಂದ ಹಾಗೂ ಹೆಂಡತಿಯು ಗಂಡನಿಂದ ಪರಸ್ಪರ ಅನುರಾಗದಿಂದ ಸಂತುಷ್ಟಗೊಳ್ಳುತ್ತಾರೋ ಆ ಕುಲದಲ್ಲಿ ಸುಖ ಸಮೃದ್ಧಿಗಳು ನೆಲೆಗೊಳ್ಳುತ್ತವೆ" .

'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಒಂದು ಹೇಳಿಕೆಯನ್ನು ಮಾತ್ರ ನೋಡಿ, ಮನುವಾದ ಎನ್ನುವವರು ಅಲ್ಲಿರುವ 'ಸ್ತ್ರೀ ಧನದ ರಕ್ಷಣೆ' ಮುಂತಾದ ಸ್ತ್ರೀಪರವಾದ ಅನೇಕ ವಿಚಾರಗಳನ್ನು ಗಮನಿಸಬೇಕು. (ನನ್ನ ವೀಡಿಯೋ ನೋಡಬಹುದು)

ವೇದವಿರೋಧೀ ಶಾಸನಗಳು

ವೇದಕಾಲವಾದ ಮೇಲೆ, ನೂರಾರು ವರ್ಷಗಳ ತರುವಾಯ ಹೊರದೇಶಗಳ ಸಂಸ್ಕೃತಿಯ ಪ್ರಭಾವದಿಂದಾಗಿ ಮಹಿಳೆಯರ ಮೇಲೆ ಹಲವಾರು ನಿರ್ಬಂಧಗಳನ್ನು ಹೇರುವ ಪದ್ಧತಿಗಳು ನಮ್ಮ ದೇಶದಲ್ಲಿ ಪ್ರಾರಂಭವಾಯಿತು. ಕನ್ಯಾಗುರುಕುಲಗಳು ಮುಚ್ಚಿದಾಗ, ಎಂಟು ವರ್ಷದ ಬಾಲೆಯರನ್ನು ವಿದ್ಯಾಭ್ಯಾಸಕ್ಕೆ ಕಳಿಸುವ ಬದಲು, ಅಷ್ಟವರ್ಷಾ ಭವೇತ್ ಕನ್ಯಾ – ವಧು ಎಂಟು ವರ್ಷದವಳಾಗಿರಬೇಕುಎನ್ನುವ ನಿಯಮವನ್ನು ಪಾಲಿಸಲು ಬಾಲ್ಯವಿವಾಹ ಪದ್ಧತಿಯ ಪ್ರಾರಂಭವಾಯಿತು.

ಶೃತಿ-ಸ್ಮೃತಿ-ಪುರಾಣ ಗ್ರಂಥಗಳ ನಡುವೆ ಅಂದರೆ, ವೇದದಲ್ಲಿರುವ ಹೇಳಿಕೆಗಳಿಗೆ ಧರ್ಮಗ್ರಂಥಗಳಲ್ಲಿ ವಿರೋಧ ತೋರಿದಾಗ ವೇದ ವಾಕ್ಯವೇ ಪ್ರಮಾಣ ಎಂದು 'ವ್ಯಾಸ ಸ್ಮೃತಿ' ಹೇಳುತ್ತದೆ.

ಶೃತಿಸ್ಮೃತಿಪುರಾಣಾನಾಂ ವಿರೋಧೋ ಯತ್ರ ದೃಶ್ಯತೇ /
ತತ್ರ ಶ್ರೌತಂ ಪ್ರಮಾಣಂತು ತಯೋರ್ದ್ವೈಧೇ ಸ್ಮೃತಿತ್ವರಾ // ವ್ಯಾಸ ಸ್ಮೃತಿ :೧-೫-೪

ಆದರೆ, ವೇದಕಾಲಾನಂತರ ಬಂದ ಕೆಲವು ಧರ್ಮ ಶಾಸ್ತ್ರಗಳಲ್ಲಿ ಕಾಲಕ್ರಮೇಣ ಸೇರ್ಪಡೆಯಾಗಿರುವ ಹಲವಾರು ವಿಚಾರಗಳು ವೇದಧರ್ಮದಿಂದ ಬಹುದೂರ ಹೋಗಿರುವುದು ಖೇದದ ಸಂಗತಿ. ಈ ಧರ್ಮಗ್ರಂಥಗಳು ಸಾರ್ವಕಾಲಿಕ ಸತ್ಯವನ್ನು ಹೇಳುತ್ತಿಲ್ಲ ಎನ್ನುವುದನ್ನು ಗಮನಿಸಬೇಕು. ಇವು ಆಯಾಯಾ ಕಾಲದಲ್ಲಿ ಪ್ರಚಲಿತವಿದ್ದ ನೀತಿ - ನಿಯಮಗಳ ಸಂಗ್ರಹಕೋಶ ಎನ್ನುವುದನ್ನು ಗಮನಿಸಬೇಕು.

ಹಾಗಾಗಿ, ಭಾರತೀಯತೆಯ ಮೂಲವನ್ನು ಕಾಣಲು ವೇದಮಂತ್ರಗಳ ಅಧ್ಯಯನಕ್ಕೇ ಹೋಗಬೇಕಾಗುತ್ತದೆ. ವೇದಕಾಲಾನಂತರದ ಗ್ರಂಥಗಳಲ್ಲಿ ಅನೇಕ ಕಡೆ ಕಾಣುವ ವೇದವಿರೋಧೀ ಹೇಳಿಕೆ ಹಾಗೂ ಆಚರಣೆಗಳನ್ನು ಗುರುತಿಸಿ ದೂರವಿಡಬೇಕಾಗುತ್ತದೆ.

(ಆಸಕ್ತರು ಈ ವಿಷಯವನ್ನು ವಿಷದೀಕರಿಸಿರುವ ಯೂ ಟ್ಯೂಬ್ ನಲ್ಲಿರುವ ನನ್ನ ವೀಡಿಯೋ ನೋಡಬಹುದು.

ಇದನ್ನು ನಾನು ಸಸಕಸ ವೇದಿಕೆಯಲ್ಲಿ ಹಾಕಿದ್ದೇನೆ).

ಒಲಿಂಪಿಕ್ಸ್ (೧)

(ಒಲಿಂಪಿಕ್ಸ್ ನಲ್ಲಿ ರಾಷ್ಟ್ರಗೀತೆ ಮೊಳಗಬೇಕಾದರೆ ಚಿನ್ನದ ಪದಕ ಗೆಲ್ಲಲೇಬೇಕು. ೨೦೦೮ರಲ್ಲಿ ಅಭಿನವಬಿಂದ್ರ ಚಿನ್ನದ ಪದಕ ಗೆದ್ದ ೧೩ ವರ್ಷಗಳ ನಂತರ ಭಾರತಕ್ಕೆ ಚಿನ್ನದ ಪದಕ ದೊರಕಿದೆ. ಆ ಬಗ್ಗೆ ಒಂದು ಕವನ)

ಏರಿತು ಹಾರಿತು ಭಾರತದ ಬಾವುಟ.
ಮೊಳಗಿತು ಮೊಳಗಿತು
ರಾಷ್ಟ್ರಗೀತೆ ಮೊಳಗಿತು
ನೋಡಲು ಎಷ್ಟು ಚೆಂದ
ಕೇಳಲು ಮಹದಾನಂದ

ಹದಿಮೂರು ವರ್ಷಗಳ ನಂತರ ಬಂದಿದೆ ಚಿನ್ನ
ಅಥ್ಲೆಟಿಕ್ ನಲ್ಲಿ ಗಳಿಸಿತು ಮೊದಲ ಚಿನ್ನ
ಮುಂದೆಯೂ ಬರಲಿ ಚಿನ್ನ ಚಿನ್ನ
ನಮ್ಮ ಮಕ್ಕಳಿಗೆ ಇನ್ನಾದರು ಪ್ರೊತ್ಸಾಹಿಸೋಣ

ನೀರಜನ ಸಂತತಿ ಬೆಳೆಯಲಿ
ಭಾರತಕ್ಕೆ ಪದಕಗಳು ಮತ್ತೆ ಮತ್ತೆ ಬರಲಿ.

ಒಲಿಂಪಿಕ್ಸ್ (೨)

(ಜಾವಲಿನ್ ಎಸತೆದಲ್ಲಿ ಚಿನ್ನದ ಪದಕ ಗಳಿಸಿದ ನೀರಜ್ ಚೋಪ್ರಾ ಅವರು ಹದಿಹರೆಯದ ವಯಸ್ಸಿನಲ್ಲಿ ತುಂಬ ದಪ್ಪಗಿದ್ದರಂತೆ. ಅವರ ಬಗ್ಗೆ ಒಂದು ಕವನ)

ಭೀಮ ನಿದ್ದ ಆವತ್ತು
ಇದ್ದ ಕೇಜಿ ಎಂಬತ್ತು
ಅಮ್ಮ ಎಂದಳು ಹೋಗೋ ಭೀಮ ಆಟಕ್ಕೆ
ಭೀಮ ಎಂದ ಅಮ್ಮ ಕೊಡು ಊಟಕ್ಕೆ

ಅಪ್ಪ ಬೈಯಲು ಭೀಮ ನಿಗೆ
ಭೀಮ ಹೊರಟ ಬಯಲಿಗೆ
ಭರ್ಜಿಯ ಎಸೆದ ದೂರಕ್ಕೆ
ಕಳಿಸಿದರು ಅವನನ್ನ ಒಲಿಂಪಿಕ್ಸ್ ಗೆ

ಗಳಿಸಲು ಅವನು ಚಿನ್ನದ ಪದಕ
ಭಾರತಕ್ಕೆ ಬಂದಿತು ಏಳನೇ ಪದಕ
ಯಾರೀ ಪೋರ
ಅವನೇ ನೀರಜ್ ಚೋಪ್ರಾ

- **ಚಂದ್ರಶೇಖರ ಆರ್.ಕೆ.**

ಕೈನೋವು ಬಂದಿದ್ಯಾಕೆ?

– ಟಿ.ಎಸ್.ಶ್ರವಣಕುಮಾರಿ

ನಮ್ಮ ಮಾಧುರಿಗೆ ಇದ್ದಕ್ಕಿದ್ದಂತೆ ಬಲಗೈ ನೋವು ಆರಂಭವಾಯಿತು. ಬರಿ ನೋವಲ್ಲ, ಕೈಯೆತ್ತಲೂ, ತಲೆಬಾಚಲೂ ಸಾಧ್ಯವಾಗದಂತಹ ಸೆಳೆಯುವ ನೋವು. ಅಂದ್ಹಾಗೆ "ಯಾರೀ ಮಾಧುರಿ?" ಎಂದಿರಾ. ಬ್ಯಾಂಕಿನ ನನ್ನ ಆಪ್ತ ಗೆಳತಿಯರಲ್ಲೊಬ್ಬಳು. ಸ್ವಲ್ಪಮಟ್ಟಿಗೆ ಸಿನಿತಾರೆ ಮಾಧುರಿ ದೀಕ್ಷಿತಳನ್ನೇ ಹೋಲುತ್ತಿದ್ದ ಚೆಲುವೆ. ಒಳ್ಳೆಯ ಕೆಲಸಗಾರ್ತಿ. 'ದೂಸರಾ ಮಾತಿಲ್ದೆ ಕಣ್ಮುಚ್ಚಿ ಅವ್ಳ ಕೆಲ್ಸಕ್ಕೆ ಸಹಿಹಾಕಬಹುದು' ಅನ್ನುವಂತಹ ನಂಬಿಕೆಯನ್ನು ಅರ್ಹತೆಯಿಂದಲೇ ಗಳಿಸಿಕೊಂಡಿದ್ದಳು. ವಾಚಾಳಿ, ಸ್ನೇಹಶೀಲೆ. ಹಿತಮಿತವಾದ ಅಲಂಕಾರ, ಚಿಗುರೆಯಂತಿರುವವಳ ಮುಂದೆ ವಯಸ್ಸು ಮಂಡಿಯೂರಿ ಕುಳಿತಿತ್ತು. ಒಟ್ಟಿನಲ್ಲಿ ಶಾಖೆಯಲ್ಲೂ ಮನೆಯಲ್ಲೂ ಚೂಟಿಯಾಗಿದ್ದ ಚಟುವಟಿಕೆಯ ಚೆಲುವೆ.

ನಮ್ಮ ಮಾಧುರಿಯನ್ನು ಮತ್ತು ಗುಣಶೀಲನನ್ನು ಇಪ್ಪತ್ತೈದು ವರ್ಷ ಸೇವಾವಧಿ ಪೂರೈಸಿದ ಸಂದರ್ಭದಲ್ಲಿ ಸನ್ಮಾನಿಸಿ ಮಾತನಾಡುತ್ತಾ ಶಾಖಾಧಿಕಾರಿ "ಎಂಥೆಂಥಹವರೆಲ್ಲಾ ಬಡ್ತಿ ತೆಗೆದುಕೊಂಡು ಉನ್ನತ ಸ್ಥಾನಗಳಲ್ಲಿದ್ದಾರೆ. ಇಂತಹ ಅತ್ಯುತ್ತಮ ಕೆಲಸಗಾರರು ಬಡ್ತಿ ತೆಗೆದುಕೊಳ್ಳದೆ ಇರುವುದು ಬ್ಯಾಂಕಿಗೆ ಆಗುತ್ತಿರುವ ದೊಡ್ಡ ನಷ್ಟ. ಆದಷ್ಟು ಬೇಗನೇ ಇಬ್ಬರೂ ಬಡ್ತಿಯನ್ನು ತೆಗೆದುಕೊಳ್ಳಬೇಕು" ಎಂದು ಚೂಲೆಬ್ಬಿಸಿಬಿಟ್ಟರು.

ಹೊತ್ತಿಗೆ ಸರಿಯಾಗಿ ಬಂದು, ಅಚ್ಚುಕಟ್ಟಾಗಿ ಕೆಲಸವನ್ನು ಮಾಡಿಕೊಂಡು, ಖುಷಿಖುಷಿಯಾಗಿದ್ಕೊಂಡು, ಸಂಜೆ ಹೊತ್ನಲ್ಲಿ ಜೊತೆಯವರೊಂದಿಗೆ ಎಂ.ಜಿ.ರೋಡು, ಬ್ರಿಗೇಡ್ ರೋಡ್ನ ಸೇಲ್‌ಗಳಲ್ಲಿ ಶಾಪಿಂಗ್ ಮಾಡ್ಕೊಂಡು, ಪಾರ್ಕ್‌ನ ಮುಂದೆ ಪಾನಿಪುರಿ, ಚಾಟ್ ಸ್ಟ್ರೀಟ್‌ನಲ್ಲಿ ಸಮೋಸ ತಿಂದುಕೊಂಡು ಆರಾಮಾಗಿ ಇದ್ದವಳಿಗೆ ಅಧಿಕಾರಿಯಾಗುವ ಅಮಲನ್ನು ಹತ್ತಿಸಿಬಿಟ್ಟರು. ನಿಜ, ಅಂಥಹ ಹಲವರನ್ನು ನೋಡಿ 'ಓ ಅಂದ್ರೆ ರೋ ಅನ್ನಕ್ಕೆ ಬರದೆ ಇರೋವೆಲ್ಲಾ ಪ್ರಮೋಷನ್ ತೊಗೊಂಬಂದು ನಮ್ಮ ಪ್ರಾಣ ತಿಂತಾವೆ, ಇವಕ್ಕೆ ಕೆಲ್ಸಾನೂ ನಾವೇ ಹೇಳ್ಕೊಟ್ಟು, ಇಲ್ಲಿ ಸಹಿ ಹಾಕಿ ಅಂತ ಬೆಟ್ಟಿಟ್ಟು ತೋರಿಸ್ಬೇಕು' ಅಂತ ಸ್ವತಃ ಮಾಧುರಿಯೇ ಹಲವಾರು ಬಾರಿ ಆಡಿಕೊಂಡಿದ್ದಳು. ಈಗ ಶಾಖಾಧಿಕಾರಿಯ ಹಿತೋಪದೇಶವನ್ನು ಕೇಳಿ, ಅವರ ಸಲಹೆಯ ಪಿತ್ತ ನೆತ್ತಿಗೇರಿ, 'ಪ್ರಮೋಷನ್ ತೊಗೊಂಡ್ಬಿಡೋದೇ' ಎಂದು ತೀರ್ಮಾನಿಸಿಬಿಟ್ಟಳು. ಜೊತೆಗೆ "ಈ ಸಲ ಇಬ್ರೂ ಪ್ರಮೋಷನ್ ತೊಗೊಂಡ್ಬಿಡೋಣ ಗುಣಾ" ಎಂದು ಅವನನ್ನೂ ಹುರಿದುಂಬಿಸಿದಳು. ಅವನೋ "ಮುಕ್ಕಾಲು ಸರ್ವೀಸೇ ಮುಗೀತಾ ಬಂತು, ಈಗ ಬಡ್ತೀನಾ, ನಂಗೆ ಹುಚ್ಚ್ ನಾಯಿ ಕಡ್ದಿಲ್ಲ ಮೇಡಂ. ನನ್ ಪಾಡಿಗೆ ನಾನು ಸಂಗೀತ, ನಾಟಕ, ಫೋಟೋಗ್ರಫಿ ಅಂತ ಬೇಕಾದ್ದನ್ನು ಮಾಡ್ಕೊಂಡು, ಊರೂರು ತಿರುಕ್ಕೊಂಡು ಹಾಯಾಗಿದೀನಿ" ಎಂದುಬಿಟ್ಟ. "ಅಂದ್ರೇನು? ನಂಗೆ ಹುಚ್ನಾಯಿ ಕಡ್ದಿದ್ಯಾ?" ಎಂದು ಅವನ ಮೇಲೆ ರೇಗಿಕೊಂಡರೂ, ತನ್ನ ತೀರ್ಮಾನವನ್ನು ಬದಲಿಸಲಿಲ್ಲ. ಎಂಥೆಂಥವರೋ ಸಂದುಹೋಗಿರುವಾಗ, ಎಲ್ಲ ಅರ್ಹತೆಯೂ ಇರುವ ನಮ್ಮ ಮಾಧುರಿಗೆ ಪ್ರಮೋಷನ್ ಸಿಕ್ಕಲಾರದೆ?! ಮೊದಲ ಪೋಸ್ಟಿಂಗ್ ಎಂದು ಮೈಸೂರಿನ ಹತ್ತಿರದ ಕೆ.ಆರ್.ನಗರಕ್ಕೆ ಎಸೆದರು. ಮಕ್ಕಳಿಗಾಗಿ ಮೈಸೂರಲ್ಲಿ ಮನೆಮಾಡಿದಳು.

ಅಲ್ಲಿಯವರೆಗೆ ಹಾರಾಡಿಕೊಂಡಿದ್ದವಳ ಕಾಲಿಗೆ ಬೇಡಿ ಬಿದ್ದಾಯಿತು. ಠಾಕೋಠೀಕಾಗಿ ಹತ್ತೂಕಾಲಿಗೆ ಬ್ಯಾಂಕಿನೊಳಗಡಿಯಿಟ್ಟು, ಐದೂಕಾಲಿಗೆ ದಾಟಿಕೊಳ್ಳುತ್ತಿದ್ದವಳು ಈಗ ಅರ್ಧ, ಮುಕ್ಕಾಲು ಗಂಟೆ ಮೊದಲೇ ಬರಬೇಕು. ಆರು ಗಂಟೆಗೆ ತನ್ನ ಕೆಲಸವನ್ನೆಲ್ಲಾ ಮುಗಿಸಿದ್ದರೂ ಮಿಕ್ಕ ಅಧಿಕಾರಿಗಳ ಕೆಂಗಣ್ಣು ಅವಳೆಡೆಗೆ ತಿರುಗುತ್ತಿತ್ತು. ಭಿಡೆಯಿಲ್ಲದೆ ಖುಷಿಯಾಗಿ ಮಾತಾಡಿಕೊಂಡು,

ಕೈಕೆಳಗಿನವರು ಏನಾದರೂ ಸಕಾರಣದಿಂದ ಬೇಗ ಹೋಗಬೇಕೆನ್ನುವ ಅಹವಾಲನ್ನು ಮುಂದಿಟ್ಟಾಗ ಧಾರಾಳವಾಗಿ ಅನುಮತಿ ಕೊಟ್ಟು, ಅವರ ಕೆಲಸವನ್ನೂ ಮೇಲೆಳೆದುಕೊಂಡು ಮಾಡುತ್ತಾ ಶಾಖೆಯಲ್ಲಿ ಜನಾನುರಾಗಿಯಾಗಿಬಿಟ್ಟಳು.

ತಮ್ಮ ಕಣ್ಮುಂದೆಯೇ ಇವತ್ತು ಬಂದಿರುವ ಬಚ್ಚಾ ಹೀಗೆ ಜನಾನುರಾಗಿಯಾಗುವುದನ್ನು ಸಹಿಸಿಕೊಳ್ಳಲು ಸಾಧ್ಯವೇ?! ಹೊಟ್ಟುರುಕ ಮ್ಯಾನೇಜರ್ ಕ್ಯಾಬಿನ್ನಿಗೆ ಕರೆದು "ನೀವು ಅಧಿಕಾರಿ, ಅವರೆಲ್ಲಾ ಗುಮಾಸ್ತರು ಅನ್ನೋದನ್ನ ಮರೀಬಾರ್ದು. ಎಲ್ರಿಗೂ ವಿಪರೀತ ಸಲುಗೆ ಕೊಟ್ಟು ತಲೆಮೇಲೆ ಕೂರ್ಸಿಕೊಂಡಿದೀರಿ. ನೀವೀಗ ಗುಮಾಸ್ತರಲ್ಲ. ಎಲ್ಲರಿಂದ ಒಂದು ಡಿಸ್ಟೆನ್ಸ್ ಮೇಂಟೇನ್ ಮಾಡಿ, ಅವ್ರ ಜೊತೆ ಊಟಕ್ಹೋಗೋದು, ಹಲ್ಕಿರ್ಕೊಂಡು ಮಾತಾಡೋದು ಎಲ್ಲಾ ಬಂದ್‌ಮಾಡಿ. ಬೆಟರ್ ಯು ಡೋಂಟ್ ಫರ್ಗೆಟ್ ದಟ್ ಯು ಆರ್ ಎನ್ ಆಫೀಸರ್" ಎಂದು ಅಧಿಕಾರಿಗಳ 'ಕರ್ಮ ಸಿದ್ಧಾಂತ'ವನ್ನು ಗೀತೋಪದೇಶದಂತೆ ಬೋಧಿಸಿದರು..., ಅಲ್ಲಲ್ಲ ಠರಾವು ಹೊರಡಿಸಿದರು.

ಮೊದಲ ಬಾರಿಗೆ ಮಾಧುರಿಗೆ 'ಪ್ರಮೋಷನ್ ತೊಗೊಂಡು ತಪ್ಪುಮಾಡಿದ್ನೇನೋ' ಅನ್ನಿಸಿತು. ಆದರೇನು ಏಕಮುಖ ಸಂಚಾರದಲ್ಲಿ ಬಂದಾಗಿದೆ, ಹಿಂತಿರುಗುವಂತಿಲ್ಲ. ಅವರನ್ನೂ ಓಲೈಸುತ್ತಾ, ಕೆಳಗಿನವರನ್ನೂ ಮೆಚ್ಚಿಸುತ್ತಾ ತಂತಿಯ ಮೇಲೆ ನಡೆದಾಡಿದಳು. ಸ್ವಲ್ಪ ಹೆಚ್ಚುಕಮ್ಮಿಯಾದರೂ ಮ್ಯಾನೇಜರ್ರ ಚಾಟಿಯ ಕಣ್ಣು ಅವಳೆಡೆಗೆ ತಿರುಗುತ್ತಿತ್ತು. ಒಳಗೊಂದು ಹೊರಗೊಂದು ಇಲ್ಲದಂತೆ ಆರಾಮಾಗಿದ್ದವಳು ನಾಟಕವಾಡುವುದನ್ನು ಕಲಿಯಬೇಕಾಯಿತು. ರಾತ್ರಿ ಎಷ್ಟೆಷ್ಟೋ ಹೊತ್ತಿಗೆ ಬಸ್ಸು, ವ್ಯಾನು, ಟೆಂಪೋ ಯಾವುದು ಸಿಕ್ಕರೆ ಅದರಲ್ಲಿ ಕೂತು ನಿಂತು ಓಲಾಡಿಕೊಂಡು ಮೈಸೂರು ತಲುಪುವಾಗ, ಬೆಂಗಳೂರಲ್ಲಿ ಹಾಯಾಗಿ ಸ್ಕೂಟಿಯಲ್ಲಿ ಸಂಜೆ ಐದೂವರೆಗೆ 'ಝುಂ'ಎಂದು ಓಡಾಡಿಕೊಂಡಿದ್ದು ನೆನಪಿಗೆ ಬರದಿದ್ದೀತೆ!.

ಮೂರು ವರ್ಷ ಕಳೆದು ಮೈಸೂರಿಗೆ ವರ್ಗವಾಗಿ ಬಂದಾಗ ಇವಳ ಕೆಲಸದ ಪರಿಯ ಬಗ್ಗೆ ಕೇಳಿದ್ದ ಅಲ್ಲಿನ ಮೇಲಧಿಕಾರಿಗಳು ರಾತ್ರಿ ಎಂಟು ಗಂಟೆಯಾದರೂ ಏಳಲು ಸಾಧ್ಯವಾಗದಷ್ಟು ಕೆಲಸದ ಹೊರೆಯನ್ನು ಧಾರಾಳವಾಗಿ ಉಡಿತುಂಬಿದರು. ಇಡೀ ದಿನ ಸ್ಟ್ರಾಂಗ್‌ರೂಮಿನ, ತಿಜೋರಿಯ ಬಾಗಿಲನ್ನು ನೂರಾರು ಸಲ ಎಳೆದು, ಹಾಕಿ, ಹತ್ತು ಕೇಜಿ ತೂಕದ ಬೀಗದಕೈ ಗೊಂಚಲನ್ನು ಹಿಡಿದುಕೊಂಡು ಓಡಾಡುತ್ತಾ, ಹತ್ತಿಳಿಯುತ್ತಾ ಹೈರಾಣಾದಳು. ಒಮ್ಮೆ ಅಲ್ಲಿಗೆ ಬಂದಿದ್ದ ಗುಣಶೀಲ "ಏನ್ಮೇಡಂ, ಹೇಗಿದೆ ಆಫೀಸರ್ ಗಿರಿ?" ಎಂದು ಕುಶಲ ವಿಚಾರಿಸಿಕೊಂಡಾಗ ದುಃಖ ಒತ್ತೊತ್ತಿಕೊಂಡು ಬಂದು "ನಂಗೆ ಬರೀ ಹುಚ್ ನಾಯಿ ಕಚ್ಚಿರಲಿಲ್ಲ ಗುಣಾ, ಕಜ್ಜಿ ಹಿಡ್ಡಿದ್ದ ಹುಚ್ನಾಯಿ ಕಚ್ಚಿಕಚ್ಚಿ ಹಾಕಿತ್ತು" ಎಂದು ಅತ್ತೇಬಿಟ್ಟಳು. ಪಾಪ ಅವನೇನು ಮಾಡಿಯಾನು. "ಮೇಡಂ, ಬೇರೆಯವ್ರ ಹತ್ರ ಕೆಲ್ಸ ತೆಗಿಯೋಕೆ ಬರೋರು ಅಧಿಕಾರಿಗಳಾಗಬೇಕು, ತಾವೇ ಮಾಡೋವ್ರಲ್ಲ. ನೀವು ಬೇರೇವ್ರಿಂದ ಮಾಡ್ಸಿ" ಎಂದು ಒಂದೆರಡು ಸಮಾಧಾನದ ಮಾತನ್ನು ಹೇಳಿದ. ಎಷ್ಟೇ ಕಷ್ಟವಾದರೂ ತನ್ನ ಹೆಸರನ್ನು ಬಿಟ್ಟುಕೊಡದ ಛಲ ಅವಳಿಗೆ. ದಿನವೂ ಮನೆ ಸೇರುವಾಗ ಸೊರಗಿ ಸೊಪ್ಪಾಗಿ ಉತ್ಸಾಹ ಸೋರಿಹೋಗಿರುತ್ತಿತ್ತು. ಫ್ರಿಜ್ಜಿಗೆ ತುಂಬಿದ ತಾಜಾ ತರಕಾರಿಯಲ್ಲಿ ಅಡುಗೆ ಮಾಡಿದ್ದಕ್ಕಿಂತ, ಕಸದಬುಟ್ಟಿ ಸೇರಿದವೇ ಹೆಚ್ಚು. ಮುಗಿಯದ ಮನೆಕೆಲಸ, ಮಾಡಿಟ್ಟು ತಿನ್ನಲು ವ್ಯವಧಾನವಿಲ್ಲದೆ ಡಬ್ಬಿಯಲ್ಲಿ ತುಂಬಿಕೊಂಡು ಓಡುವ ಆತುರ, ತಂದದ್ದನ್ನು ತಿನ್ನಲು ಸಾಧ್ಯವಾಗದ ಕೆಲಸದೊತ್ತಡ... ಸಾಕಾಗಿಹೋಯಿತು. ಇಷ್ಟ, ಅಯಿಷ್ಟಗಳ ಬಗೆಗಿನ ತೀರ್ಮಾನವೇ ಹೊರಟುಹೋಗಿ, ದಿನ ಸಾಗಿದರೆ ಸಾಕು ಎನ್ನುವ ಮನಃಸ್ಥಿತಿ ಬಂದುಹೋಯಿತು.

ಹೀಗಿರುವ ಸಮಯದಲ್ಲಿ ಮಾಧುರಿಯ ಬಲಗೈ ಸತ್ತೇ ಹೋಗಿದಿಯೇನೋ ಅನ್ನಿಸುವಷ್ಟು ನಿರ್ಬಲವಾಗಿ ಹೋಯಿತು. ತಲೆ ಬಾಚಿಕೊಳ್ಳಲೂ ಸಾಧ್ಯವಾಗದೆ ಸೊಟ್ಟಸೊಟ್ಟಗೆ ಕ್ಲಿಪ್ಪನ್ನು ಹಾಕಿಕೊಂಡು ಬ್ಯಾಂಕಿಗೆ ಬಂದಳು. ಇವಳ ಅವಸ್ಥೆ ನೋಡಲಾಗದೆ ಕಾಫಿ ಕಾಸುತ್ತಿದ್ದ ಮಂಗಳಮ್ಮ ದಿನವೂ ತಲೆಬಾಚುತ್ತಿದ್ದಳು, ಅಂದು "ಮಂಗಳಮ್ಮಾ, ಕಾಫಿ" ಎಂದು ನಿತ್ಯವೂ ಕರೆಹಾಕಿಯೇ

ಆಫೀಸಿನೊಳಗೆ ಎಂಟ್ರಿ ತೆಗೆದುಕೊಳ್ಳುತ್ತಿದ್ದ ಎಲ್ಲರ ದೊಡ್ಡಣ್ಣ, ಮೂರ್ತಿಗಳ ಕೂಗಿಗೆ ಮಾರುತ್ತರ ಬರದಿದ್ದಾಗ ಕಾಫಿ ಕೋಣೆಗೆ ನುಗ್ಗಿ ಈ ಕೇಶಾಲಂಕಾರೋಪಾಖ್ಯಾನವನ್ನು ಕಂಡು ನಗುವುಕ್ಕಿ "ನಾನು ಬೇಕಾದ್ರೆ ತಲೆಬಾಚಿಕೊಡ್ತೀನಿ, ಮೊದ್ಲು ಕಾಫಿ ಬಿಸಿಗಿಡಿ. ಏನು ಮಾಧುರಿ ಬಾಚಿಕೊಡ್ಲಾ" ಎಂದು ಹಾಸ್ಯ ಮಾಡಿದರೆ, ನೋವಿನಿಂದ ಮಾಧುರಿಯ ಕಣ್ಣಲ್ಲಿ ನೀರು. "ನಿಮ್ಮಂಥವ್ರು ಅಳೋದೆ, ಗುರ್ತಿನ ಒಬ್ರು ಆಯುರ್ವೇದ ಪಂಡಿತರಿದಾರೆ. ಯಾವುದೇ ಅಡ್ಡ ಪರಿಣಾಮವಿರಲ್ಲ. ಅವ್ರ ಹತ್ರ ಆದಷ್ಟು ಬೇಗ ತೋರಿಸ್ಕೊಂಡ್ಬನ್ನಿ" ಎಂದು ಸಮಾಧಾನ ಮಾಡಿದರು.

ಅಲ್ಲಿಂದ ಆರಂಭವಾಯಿತು ಕೈನೋವಿಗೆ ಉಪಚಾರ. ಮೂರು ತಿಂಗಳು ಸತತವಾಗಿ ತೈಲೋಪಚಾರ, ಗುಳಿಗೆಗಳು, ಕಷಾಯ, ಪಥ್ಯ, ಸಕಲ ವೈಭೋಗಗಳು ನಡೆದರೂ ಏನೂ ಪ್ರಯೋಜನವಾಗಲಿಲ್ಲ. ಅಡ್ಡ ಪರಿಣಾಮವಿಲ್ಲವೆಂದು ಸಹೋದ್ಯೋಗಿಯೊಬ್ಬಳು ಹೋಮಿಯೋಪತಿಯ ಸಲಹೆ ಕೊಟ್ಟಳು, ಹಾಗೆಯೇ ಹೇಳಿ ಮತ್ತೊಬ್ಬ ನಾಟಿ ಔಷಧಿಯ ಹಕೀಮರೊಬ್ಬರನ್ನು ಪರಿಚಯಿಸಿದ. ಪ್ರತಿಬಾರಿಯೂ ಹೊಸ ನಿರೀಕ್ಷೆಯಿಂದ ಹೋಗುತ್ತಿದ್ದವಳಿಗೆ ವರ್ಷ ಕಳೆಯುತ್ತಾ ಬಂದರೂ 'ಕಾಲ ದಂಡ, ದುಡ್ಡು ಖರ್ಚು' ಹೊರತು ಗುಣಕಾಣಲಿಲ್ಲ. 'ಅಡ್ಡ ಪರಿಣಾಮದ ಮನೆ ಹಾಳಾಯ್ತು, ಮುಖ್ಯ ಪರಿಣಾಮವೇ ಇಲ್ಲವಲ್ಲ' ಎಂದು ತೀರ್ಮಾನಿಸಿದ ಮಾಧುರಿ ಕಡೆಗೆ ಅಲೋಪತಿಗೆ ಹೋಗುವ ನಿರ್ಧಾರ ಕೈಗೊಂಡು ನಗರದ ಪ್ರತಿಷ್ಠಿತ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಭೇಟಿಕೊಟ್ಟಳು.

ಸ್ವಾಗತಕಾರಿಣಿ ಕೊಟ್ಟ ಹಾಳೆಯಲ್ಲಿ ಎಲ್ಲಾ ಮಾಹಿತಿಗಳನ್ನೂ ತುಂಬಿದ್ದಾಯಿತು. ಬ್ಯಾಂಕ್ ಆಫೀಸರ್ ಎಂದು ನೋಡಿದ ತಕ್ಷಣ "ಹೇಗೂ ಬ್ಯಾಂಕ್ನವ್ರು ಕೊಡ್ತಾರಲ್ಲ, ಒಂದ್ಸಲ ಎಲ್ಲಾ ಥರೋ ಚೆಕಪ್ ಮಾಡ್ಸಿಕೊಳ್ಳಿ ಮೇಡಂ. ರೂಟ್ ಕಾಸ್ ತಿಳ್ಕೋಬೋದು" ಎಂಬ ಒಂದು ದಿವ್ಯ ಸಲಹೆ ಕೊಟ್ಟು ಒಬ್ಬೊಬ್ಬರೇ 'ಪ್ರಾಕಾರ ದೇವತೆಗಳ' ಬಳಿಗೆ ಕಳಿಸಿದಳು. ಅವರವರು ಅವರವರಿಗೆ ಬೇಕಾದ ಪರೀಕ್ಷೆಗಳನ್ನು ಬರೆದು ಪ್ರಯೋಗಾಲಯಕ್ಕೆ ದಬ್ಬಿದರು. ಸ್ಕ್ಯಾನಿಂಗ್, ಎಂ.ಆರ್.ಐ.ಗಳೂ ಮುಗಿದವು. ಸಕ್ಕರೆ ಖಾಯಿಲೆ, ಮೂಳೆಗಳು, ನರರೋಗ....... ಹೀಗೆ ಪ್ರತಿಯೊಬ್ಬ ತಜ್ಞರೂ ನೀಡಿದ ವರದಿಗಳಿಂದ ಫೈಲು ಬಸುರಿ ಹೊಟ್ಟೆಯಂತೆ ಉಬ್ಬಿ ಹೋಯಿತು. ತಲೆಕೆಟ್ಟು ಕೆರ ಹಿಡಿದಿದ್ದರೂ, ಇವತ್ತು ಅದೇನು ಖಾಯಿಲೆಯೆಂದು ತೀರ್ಮಾನ ಮಾಡ್ಕೊಂಡೇ ಹೋಗೋದು" ಎಂದು ಕಡೆಯದಾಗಿ ಫೈಲನ್ನು 'ಮೂಲದೇವರು' ಫಿಸಿಷಿಯನ್ನರ ಮುಂದೆ ಕುಕ್ಕಿ ಕುಳಿತಳು. ವಯಸ್ಸಾದ ಡಾಕ್ಟರು ಕನ್ನಡಕ ಏರಿಸಿಕೊಂಡು ಒಂದೊಂದೇ ಹಾಳೆಯನ್ನು ತೆಗೆದು ಮೊದಲಿನಿಂದ ಕಡೆಯವರೆಗೂ ಗಂಟೆ ಕಾಲ ಓದಿ "ಯಾವ ರಿಪೋರ್ಟ್‌ನಲ್ಲೂ ಏನೂ ಅಬ್ನಾರ್ಮಾಲಿಟಿ ಕಾಣ್ತಿಲ್ವಲ್ಲ. ಅಂದ್ಹಾಗೆ ನಿಮ್ಮ ವಯಸ್ಸೆಷ್ಟು?" ಎನ್ನುತ್ತಾ ಫೈಲಿನ ಮೊದಲ ಹಾಳೆಗೆ ಬಂದು "ಓ ಐವತ್ತಾರು ತುಂಬಿದೆ. ಆದ್ರೆ ಅಷ್ಟು ವಯಸ್ಸಾದವ್ರ ಹಾಗೆ ಕಾಣೋದಿಲ್ವೇ. ಸಹಜವಾಗೇ ಈ ವಯಸ್ಸಿಗೆ ಮೂಳೆಗಳು ಸವೆದಿರುತ್ವೆ, ನರಗಳು ವೀಕಾಗುತ್ವೆ. ದೃಷ್ಟಿ ಮಂದವಾಗ್ತಾ ಹೋಗತ್ತೆ. ಜೊತೆಗೆ ವಿಪರೀತ ಕೆಲ್ಸವಿರತ್ತೆ ಅಂತೀರಿ. ಓವರ್‌ಸ್ಟ್ರೇನ್ ಆಗಿದೆ ಅಷ್ಟೇ. ಸ್ವಲ್ಪ ದಿನ ರಜಾ ಹಾಕಿ ಬಲಗೈಗೆ ವಿಶ್ರಾಂತಿ ಕೊಡಿ. ವಯಸ್ಸಾಗಿದೆ ಅನ್ನೋದ್ನ ಒಪ್ಕೋಬೇಕಮ್ಮ. ಅದಕ್ಕೆ ತಕ್ಕ ಹಾಗೆ ನಮ್ಮ ಚಟುವಟಿಕೆಗಳನ್ನ ರೂಪಿಸ್ಕೊಳ್ಬೇಕು. ಒಂದಷ್ಟು ಕ್ಯಾಲ್ಸಿಯಂ, ನ್ಯೂರೋಬಿಯಾನ್ ಇಂಥವನ್ನು ತೊಗೊಂಡ್ರೆ ಸಾಕು. ಪೇನ್ ರಿಲೀವಿಂಗ್ ಬಾಮ್ ಹಚ್ಕೊಳ್ಳಿ, ತೀರಾ ಜಾಸ್ತಿಯಾದಾಗ ಪೇನ್ ಕಿಲ್ಲರ್ಸ್ ತೊಗೊಳಿ. ನಥಿಂಗ್ ಟು ವರಿ. ಇನ್ನೇನಾದ್ರೂ ಕೇಳ್ಬೇಕಾ?" ಎಂದರು.

"ಇನ್ನೇನಿಲ್ಲ ಸರ್, ನಂಗೈವತ್ತಾರು ವರ್ಷ ಆಗಿದೆ ಅಂತ ತಿಳ್ಕೊಳಕ್ಕೆ ನೀವು ಇಷ್ಟೆಲ್ಲಾ ಟೆಸ್ಟ್ ಮಾಡ್ಸಿ ಐವತ್ಸಾವ್ರ ಖರ್ಚು ಮಾಡ್ಸಿದ್ದಾ? ಅದು ನಂಗೆ ಗೊತ್ತಿತ್ತಲ್ಲಾ" ಎನ್ನುತ್ತಾ ಎದ್ದಾಗ "ಆ … " ಎಂದು ಕಳೆದ ಡಾಕ್ಟರ ಬಾಯಿ ಅವಳು ಎದ್ದುಹೋಗುವವರೆಗೂ ಮುಚ್ಚಿಕೊಳ್ಳಲಿಲ್ಲ.

ಲಾವಣಿ

ಕಾಫಿ

ಬನ್ನಿರಿ ಗೆಳೆಯರೆ, ಎಲ್ಲರು ಕೂಡಿರಿ
ಸುಮಧುರ ಸಂಜೆಯ ಸಮಯದಲಿ
ಕಾಫಿಯ ಕಥೆಯನು ಹೇಳುವೆ ಸುಲಲಿತ
"ಕಥನ ಕುತೂಹಲ" ರಾಗದಲಿ

ಬೆಳ್ಳಂಬೆಳಗಿನ ಸುಗಂಧ ಮಾತ್ರಕೆ
ಮಿದುಳದೊ ನಲಿವುದು ಚುರುಕಿನಲಿ
ದಿನದ ಸವಾಲಿಗೆ ಸೇವನೆ ಶಕುತಿಯೊ
"ಖಾತರಿ" ಎಂಬುದು ಮಾತಿನಲಿ!

ಸಾವಿರ ವರುಷದ ಹಿಂದಿನ ಕಥೆಯದು
ಇಥಿಯೋಪಿಯ ಎಂಬ ದೇಶದಲಿ
ಪ್ರಕೃತಿಯ ಕಲೆಯದು ಬೆರಗನು ತೂರುತ
ಗಿಡವೊಂದರ ಕಥೆ ಬೆಳಕಿನಲಿ

ಕುರುಬನೆ ಓರ್ವನು ಕುರಿಗಳ ಮೇಯಿಸಿ
ಹಾಡುತ ಬೆಟ್ಟದ ತಪ್ಪಲಲಿ
ಗಿಡವೊಂದರ ಫಲ ಮೇಯುತ ಕುರಿಗಳು
ಕುಣಿದವು ತಕ-ಪಕ ಖುಷಿಯಲ್ಲಿ!

ಕಂಡನು ಕುರುಬನು ವಿಸ್ಮಯ ಸಂಗತಿ
ಕಾಣದುದೆಂದೂ ಮೊದಲಿನಲಿ
ಊರಲಿ ಕಥೆಯದೊ ಅಚ್ಚರಿ ಎನ್ನುತ
ಚಪಲಕೆ ಗುರಿ-ಮನ ಬೇಗದಲಿ

ಹಣ್ಣನೆ ಚಚ್ಚುತ, ರಸವನೆ ಸವಿಯಲು
ಮೈಮನ ಚುರುಕದೊ ನಲಿವಿನಲಿ
ಭಟ್ಟಿಯನಿಳಿಸಲು "ಪೇಯ"ದ ಜನುಮವು
ಕಂಡರೊ ಮಹತನು ಬೀಜದಲಿ

ಸುಲ್ತಾನರಿಗೆಲ್ಲ "ಪೇಯವು" ಮಾರಕ
ಸಂಕಟ ಎರಗಿತೊ ನಿಷೇದದಲಿ
ಆದರು ನಿಲ್ಲದು ಪೇಯದ ಸೆಳೆತವು
ಸೇವನೆ ಸಾಗಿತೊ ಗುಟ್ಟಿನಲಿ

"ಖಾಹ್ವಾ" ಎಂಬುದು ಟರ್ಕಿಯ "ಖಾವೇ"
"ಕೋಫೇ" ಆಯಿತು ಡಚ್ಚರಲಿ
ಹರಡಿತು ಚಟದಂತೆ ವೇಗದಲೆಲ್ಲೆಡೆ
ಮಾದಕವಾಯ್ತದೊ ಇಂಗ್ಲೆಂಡಿನಲಿ

ಗುಪ್ತ ಪೋಲೀಸರ ಕಾರ್ಯಾಚರಣೆಗು
ಬಗ್ಗದು ಕಾಫಿಯು ಸುಲಭದಲಿ
ಆಡಿತು, ಕಾಡಿತು ಮನುಜರನೆಲ್ಲರ
ಉಳಿಯಿತು ಬಹುಪ್ರಿಯ ಜಗದಲ್ಲಿ!

ಫಕೀರರಿದ್ದರು ಬುಡನ್ ಸಾಹೇಬರು
ತಂದರು ಬೀಜವ ಕಷ್ಟದಲಿ
ಬಿತ್ತಲು ಬೆಳೆಯಿತು ಸುಗಂಧ ಹರಡುತ
ಮನೆ-ಮನೆ ಮಾತದೊ
ಮಲೆನಾಡಿನಲಿ

ಹಠದಿಂದಲ್ಲದೊ ಚಟವದು ಪೇಯವು
ಪ್ರತಿ ಪ್ರತಿಯೊಂದೂ ಊರಿನಲಿ
ಮನೆಯೊಳಗಿದ್ದರು ಹೊರಗಡೆಯಿದ್ದರು
ಕಾಫಿಗೆ ಸೆರೆ ನಾವ್ ಬೇಗದಲಿ

ಕಾಫಿಯ ಕುಡಿಯದೆ ಬದುಕದು ವ್ಯರ್ಥವೊ
ತಿಳಿಯಿರಿ ಸತ್ಯವ ಕಥೆಯಲ್ಲಿ
ಇರಲದೊ ಬಿಡಲದೊ ಸಾಧನೆ ಎಂಬುದು,
ಜೀವನ ಸಾರ್ಥಕ ಕಾಫಿಯಲಿ!

- **ಕೆ.ಆರ್.ಎಸ್.ಮೂರ್ತಿ**

ಚಿತ್ತ ವಿಚಿತ್ರ ಚಿತ್ರಗಳು

- ಶೀಲಾ ಭಂಡಾರ್ಕರ್

ಚಿಕ್ಕವಳಿದ್ದಾಗ ಎಷ್ಟೋ ಸಲ ಥಿಯೇಟರಿಗೆ ಹೋಗಿ ಸಿನೆಮಾ ನೋಡಿ ಹೊರಬರುವಾಗ ನಾನೇ ಆ ಚಿತ್ರದ ನಾಯಕಿ ಎಂದು ನನಗೆ ಭ್ರಮೆಯಾಗುವುದಿತ್ತು.

ಮನೆಗೆ ನಡೆದುಕೊಂಡು ಬರುವಾಗ ತಮ್ಮ, ತಂಗಿ ಏನಾದರೂ ವಟವಟ ಮಾತನಾಡುತ್ತಾ ಇದ್ದರೆ, ನಾನು ಮಾತ್ರ ಇಲ್ಲದ ಮುಂಗುರಳನ್ನು ತೀಡಿಕೊಂಡು ಸೊಂಟವನ್ನು ಸ್ವಲ್ಪ ಹೆಚ್ಚೇ ಬಳುಕಿಸುತ್ತಾ ನಡೆದು ಬರುತಿದ್ದೆ. ಅವರೇನಾದರೂ ಪ್ರಶ್ನೆ ಕೇಳಿದರೆ ಮುಗುಳ್ನಕ್ಕು ಹಾಂ ಹೂಂ ಅಷ್ಟೇ ನನ್ನ ಉತ್ತರ.

ಒಳಗೊಳಗೇ ಅವರೆಷ್ಟು ನಗುತಿದ್ದರೋ.. ಮೊದಲೇ ಮಾತನಾಡಿಕೊಂಡು ನನ್ನ ಹಾವಭಾವಗಳನ್ನು ಗಮನಿಸಿ ಆಡಿಕೊಳ್ಳುತಿದ್ದರೋ ನನಗದು ತಿಳಿಯದಷ್ಟು ಸಿನೆಮಾ ನಾಯಕಿಯೊಳಗೆ ನಾನ ಇಳಿದು ಬಿಡುತಿದ್ದೆ.

ಹೀಗೇ ಇರುವಾಗ ನಮ್ಮ ಮನೆಗೆ ಟಿ.ವಿ ಬಂತಲ್ಲಾ!! ಮನೆಯಲ್ಲೇ ಕೂತು ಸಿನೆಮಾ ನೋಡಬಹುದು ಎಂದು ಭಾರೀ ಖುಷಿ. ಆಗಿನ್ನೂ ಕನ್ನಡ ಚಾನೆಲ್ ಗಳು ಇರಲಿಲ್ಲ. ಬರಿಯ ದೂರದರ್ಶನ. ಪ್ರಾದೇಶಿಕ ಭಾಷೆಯ ಚಿತ್ರಗಳನ್ನು ಪ್ರಸಾರ ಮಾಡುವಾಗ ಅಪರೂಪಕ್ಕೆ ಕನ್ನಡ ಚಿತ್ರ ಬರುವುದಿತ್ತು. ವಾರಕ್ಕೊಂದು ಹಿಂದಿ ಚಿತ್ರ.

ಒಂದು ಭಾನುವಾರ ಹಿಂದಿ ಚಿತ್ರ ಅಭಿಮಾನ್. ಬೇಗ ಬೇಗ ಎಲ್ಲ ಕೆಲಸಗಳನ್ನು ಮುಗಿಸಿ ಎಲ್ಲರೂ ಟಿವಿ ಯ ಮುಂದೆ ಕೂತೆವು.

ಸಿನೆಮಾ ಶುರುವಾಗಿ ಮೊದಲ ಹಾಡು "ಮೀತ್ ನಾ ಮಿಲಾರೆ ಮನ್ ಕಾ.." ಮುಗಿದು, ಮುಂದೆ ಕತೆ ಮುಂದುವರಿಯುತ್ತಾ.. ದುರ್ಗಾ ಮೌಸಿಯನ್ನು ನೋಡಲು ಅಮಿತಾಬ್ ಊರಿಗೆ ಬಂದಾಗ ಜಯಾ ಬಾಧುರಿ "ನದಿಯಾ ಕಿನಾರೆ" ಹಾಡು ಹಾಡುತ್ತಾ ಕುಣಿದು ಕುಪ್ಪಳಿಸಿ ಕುಪ್ಪಳಿಸಿ ನಡೆಯುತಿದ್ದಳು.

ಅಷ್ಟರಲ್ಲಿ ಹಾಲಿನ ಹುಡುಗ ಬಂದು ಬಾಗಿಲು ತಟ್ಟಿದ. ಸಿನೆಮಾದಿಂದ ಇಳಿದು ಭೂಮಿಗೆ ಬಂದರು ಎಲ್ಲರೂ. ಅಮ್ಮ ನನಗೆ ಹಾಲು ಹಾಕಿಸಿಕೊಳ್ಳಲು ಹೇಳುವುದಕ್ಕೂ, ನನ್ನೊಳಗೆ ಜಯಾ ಬಾಧುರಿ ಆವಾಹನೆಯಾಗುವುದಕ್ಕೂ ಸರಿಯಾಯ್ತು.

ನನಗೂ ಕೂತಲ್ಲಿ ಕಾಲುಗಳು ಕುರುಕುರು ಅನ್ನುತಿದ್ದವು. ಒಳ್ಳೆ ಚಾನ್ಸ್ ಎಂದು ಎದ್ದು ಹೊರಗೆ ಬರುವಾಗ ಡುಬುಕ್ ಅಂತ ಒಂದು ಸಲ ಹಾರಿದ್ದೇ.. ಪಕ್ಕದಲ್ಲಿದ್ದ ಸ್ಟೂಲಿಗೆ ಕಾಲು ಝಾಡಿಸಿದಂತೆ ತಾಗಿ, ಆ ಸ್ಟೂಲು ಢಮಾರ್ ಎಂದು ಬಿದ್ದು ನನ್ನ ಪಾದದ ಕೀಲು ಭಯಂಕರ ನೋವಿನಿಂದ ತತ್ತರಿಸಿತು. ಕುಂಟುತ್ತಲೇ ಹಾಲು ಹಾಕಿಸಿ ಬಂದು ಕೂತೆ. ನೋವನ್ನು ಯಾರಿಗೂ ಹೇಳದೆ ಇದ್ದರೂ ಚಿಟಿಚಿಟಿ ಸಿಡಿಯುತಿದ್ದ ಕಾಲು ಮಾತ್ರ ಸಿನಿಮಾ ಕತೆಯನ್ನು ಆನಂದಿಸಲು ಬಿಡಲಿಲ್ಲ. ಚಿತ್ರ ಮುಗಿದ ಮೇಲೆ ನೋಡಿದರೆ ಪಾದ ಊದಿಕೊಂಡು ಎತ್ತಿಡಲು ಕೂಡ ಆಗದಷ್ಟು ನೋವು.

ಮನೆಯಲ್ಲಿ ಎಲ್ಲರೂ ಏನಾಯ್ತು ಎಂದು ಕೇಳಿದಾಗ ನಾನು ಕುಣಿದದ್ದು ಅವರಿಗೆ ಹೇಗೆ ಹೇಳಲಿ? ಸ್ಟೂಲ್ ಬಿದ್ದ ಸದ್ದಾದರೂ ಅವರೆಲ್ಲ ಟಿವಿಯೊಳಗೆ ಹೋಗಿದ್ದರಿಂದ, ಬಿದ್ರೆ ಎತ್ತಿಡ್ತಾಳೆ ಎನ್ನುವ ರೀತಿಯಲ್ಲಿ ಸುಮ್ಮನಿದ್ದರು. ಆ ಸ್ಟೂಲು ನನ್ನ ಕಾಲಿಗೆ ತಾಗಿಯೇ ಬಿದ್ದದ್ದು.

ಅದರಿಂದ ಏಟಾಗಿದೆ ಎಂದುಕೊಂಡರೂ, ನನ್ನ ಎಲ್ಲಾ ಚೇಷ್ಟೆಗಳ ಅರಿವಿದ್ದ ನನ್ನ ಅಮ್ಮ ಇನ್ನಾದರೂ ಸ್ವಲ್ಪ ಕೈಕಾಲು ಕುಣಿಸುವುದು ಕಮ್ಮಿ ಮಾಡು ಎಂದು ಬೈದರು. ಆ ಊತ, ನೋವು ಎಲ್ಲ ಕಮ್ಮಿಯಾಗಲು ಒಂದು ವಾರವೇ ಬೇಕಾಯ್ತು. ಅಲ್ಲಿಯವರೆಗೆ ದಿನಾ ಬೈಯಿಸಿಕೊಂಡಿದ್ದೆ.

ಮುಂದಿನ ಭಾನುವಾರ ಯಾವುದೋ ಮತ್ತೊಂದು ಸಿನೆಮಾ. ಹಿಂದಿನ ವಾರದ ಅನುಭವ ಮರೆಯಲುಂಟೆ!? ಅಷ್ಟಾಗಿ ಮನಸ್ಸನ್ನು ತೊಡಗಿಸಲು ಸಾಧ್ಯವಾಗಲಿಲ್ಲ. ಆಮೇಲಿಂದೀಚೆಗೆ ಸಿನೆಮಾವನ್ನು ಕೃತಕವೆಂದೇ ನೋಡುವ ಅಭ್ಯಾಸವಾಗಿ ಹೋಯಿತು. ಇದೂ ಒಂದು ಮಾನಸಿಕ ಖಾಯಿಲೆ ಇದ್ದರೂ ಇರಬಹುದು.

"ನದಿಯಾ ಕಿನಾರೆ.." ಹಾಡು ಈಗ ಕೇಳಿದರೂ ಪಾದದ ಕೀಲು ಸಣ್ಣಗೆ ಅಳುತ್ತದೆ. ಅದರ ಜೊತೆಗೆ ಶೂಟಿಂಗ್ ಸಮಯದಲ್ಲಿ ನನ್ನ ಹಾಗೆ ಜಯಾ ಬಾಧುರಿಗೂ ಕುಣಿಯುತ್ತಾ ಹೋಗುತಿದ್ದಾಗ ಕಾಲು ಯಾವುದಕ್ಕಾದರೂ ಹೊಡೆದು ನನ್ನ ಹಾಗೆ ಆಗಿದ್ದಿದ್ದರೆ ಏನು ಮಾಡುತಿದ್ದರೋ. ಯಾವುದೋ ಹಳ್ಳಿಯಲ್ಲಿ ಬೇರೆ ಶೂಟಿಂಗ್. ಒಂದು ವಾರ ಅವಳೂ ನನ್ನಂತೆ ಬೈಯಿಸಿಕೊಳ್ಳುತಿದ್ದಳು ಅನಿಸುತ್ತದೆ.

ಆಮೇಲೆ ಒಂದಿಷ್ಟು ವರ್ಷಗಳವರೆಗೆ ದೊಡ್ಡವರು ಗಂಭೀರವಾಗಿ ಸಿನೆಮಾ ವೀಕ್ಷಿಸುತಿದ್ದರೆ, ನನ್ನ ಗಾಬರಿಗೆ ಕಾರಣಗಳೇ ಬೇರೆ ಇರುತಿದ್ದವು.

ಉದಾ: ನಾ ನಿನ್ನ ಮರೆಯಲಾರೆ ಚಿತ್ರದಲ್ಲಿ ರಾಜಕುಮಾರ್ ಅವರಿಗೆ ಲಕ್ಷ್ಮಿಯವರು ಮಳೆ ಬಂದಾಗ ಮರದ ಅಡಿಯಲ್ಲಿ ಬಹಳ ವರ್ಷಗಳ ನಂತರ ಭೇಟಿ ಆಗುತ್ತಾರೆ. ಅದರ ನಂತರ ಏನೇನೋ ಸುಳ್ಳುಗಳನ್ನು ಇಬ್ಬರೂ ಹೇಳಿ, ಆ ಸುಳ್ಳುಗಳು ಬಯಲಾದಾಗ ಲಕ್ಷ್ಮಿ ಮನೆ ಖಾಲಿ ಮಾಡಿ ಹೊರಟು ಹೋಗಿರುತ್ತಾರೆ. ಕ್ಷಮಿಸಿ. ಲಕ್ಷ್ಮಿ ಅಂದರೆ ಚಿತ್ರದ ನಾಯಕಿ ಉಷಾ.

ನಾಯಕ ಆನಂದ್ ಓಡಿ ಓಡಿ ಬಂದು ತನ್ನ ಬೈಕ್ ಏರಿ ರೈಲ್ವೇ ಸ್ಟೇಷನ್ ಗೆ ಬಂದು ನೋಡುವಷ್ಟರಲ್ಲಿ ರೈಲು ಹೊರಟಾಯ್ತು. ಜೋರಾಗಿ " ಉಷಾ........" ಅಂತ ಕೂಗಿದಾಗ, ಆ ರೈಲಿನ ಸೀಟಿ, ಚುಕುಬುಕು ಶಬ್ದಗಳ ಗಲಾಟೆಯಲ್ಲೂ ಉಷಾಳಿಗೆ ಸ್ಪಷ್ಟವಾಗಿ ಕೇಳಿಸುತ್ತದೆ.

ಅದು ಒಂದು ನನಗೆ ಆಶ್ಚರ್ಯದ ಸಂಗತಿ.

ಅದರ ನಂತರ ಆನಂದ್ ಅಲ್ಲಿಂದ ಮತ್ತೆ ಓಡಿ .... ಓಡಿ... ಮತ್ತೆ ತನ್ನ ರೋಡ್ ಕಿಂಗ್ ಬೈಕ್ ಏರಿ ನೇರವಾಗಿ ರಸ್ತೆಯಲ್ಲಿ ಹೋಗಲಾಗದೇ ಗುಡ್ಡ ಬೆಟ್ಟಗಳ ಮೇಲೆಲ್ಲಾ ಬೈಕ್ ಓಡಿಸಿ ಫುಲ್ ಗಾಯ ಮಾಡ್ಕೊಂಡು ಹೋಗುತಿದ್ದರೆ..... ಆ ರೈಲು ಎಲ್ಲಿದ್ದರೂ ಎಷ್ಟು ದೂರದಿಂದಲೂ ಉಷಾಳಿಗೆ ಅವನು ಸ್ಪಷ್ಟವಾಗಿ ಕಾಣುತ್ತಾನೆ.

ಅದು ಸೋಜಿಗವೇ ನನಗೆ! ಅದು ಹೇಗೆ ಎಂದು ಕೇಳಿದರೆ ದೊಡ್ಡವರು ಹೇಳುತಿದ್ದದ್ದು ಒಂದೇ. "ಸಿನೆಮಾ ಅಲ್ವಾ ಅದು? ಅದು ಹಾಗೆ...."

" ಏ... ಸರಿ ಇಲ್ಲ ಇದು" ಎಂದು ಅನಿಸಲು ಶುರುವಾಗಿದ್ದೇ ಆವಾಗಿಂದ.

ಹೋಗಲಿ... ಹೇಗೋ ಗುಡ್ಡಬೆಟ್ಟ ಹಳ್ಳ ದಿಣ್ಣೆ ಅಂತೆಲ್ಲ ಬೈಕ್ ಓಡಿಸಿ ಕೊನೆಗೆ ರೈಲ್ವೇ ಸ್ಟೇಷನ್ನಿನಲ್ಲಿ ರೈಲು ನಿಲ್ಲೋದ್ರೊಳಗೆ ನಾಯಕ ಅಲ್ಲಿ ಹಾಜರ್. ಹೇಗೋ ತಪ್ಪಿಸಿ ಹೋಗಬೇಕೆಂದಿದ್ದ ಉಷಾ ಬಾಗಿಲ ಬಳಿ ಬಂದು ನಿಂತು.. ರೈಲಿನಿಂದ ಇಳಿದು ಆನಂದ್ ಬಳಿ ಬರುತ್ತಿರುವಾಗ ದೊಡ್ಡವರಿಗೆಲ್ಲ ಸಮಾಧಾನದ ನಿಟ್ಟುಸಿರು ಬರಲು ಶುರುವಾದರೆ.... ನನಗೆ ಮಾತ್ರ ಇಲ್ಲದ ಚಿಂತೆಗಳು.

ಅವಳು ಮನೆ ಖಾಲಿ ಮಾಡಿ ಬಂದವಳು ಅವಳ ಮನೆ ಸಾಮಾನೆಲ್ಲ ಎಲ್ಲಿ ಹೋಯಿತು? ಅವಳ ಮನೆಯಲ್ಲಿದ್ದ ಆ ಬಣ್ಣಬಣ್ಣದ ಸೋಫಾ ಖುರ್ಚಿಗಳೆಲ್ಲ ಎಲ್ಲಿ ಬಿಟ್ಟಳು? ಬಟ್ಟೆ ಬ್ಯಾಗ್ ಆದರೂ ಜತೆಗೆ ಹಿಡಿದುಕೊಂಡು ತಾನೇ ರೈಲು ಇಳಿಯಬೇಕು ಇವಳು. ಹೋಗಲಿ.. ಒಂದು ಪರ್ಸ್ ಆದರೂ ಕೈಯಲ್ಲಿ ಹಿಡಿಯುವುದು ಬೇಡ್ವಾ?

ಎಂತಾ ಹುಚ್ಚಿ, ಬೇಜವಾಬ್ದಾರಿ ಹೆಣ್ಣು ಎಂದೆಲ್ಲಾ ಯೋಚನೆಗಳು ಬಂದು ಕಿರಿಕಿರಿ ಆಗ್ಲಿಕ್ಕೆ ಶುರುವಾಗ್ತಿತ್ತು. ಅವರಿಬ್ಬರೂ ತಬ್ಬಿಕೊಂಡು ಮೈಮರೆತು ಪ್ರಪಂಚ ಮರೆತು ನಿಂತಿದ್ದರೆ ದೊಡ್ಡವರೆಲ್ಲಾ ತಾವೇ ಆನಂದ್ ಉಷಾ ಎಂದು ಕಲ್ಪಿಸಿಕೊಂಡು ರೊಮ್ಯಾಂಟಿಕ್ ಮೂಡಲ್ಲಿ ತೇಲಾಡುತಿದ್ದರೆ ನನಗೆ ಮಾತ್ರ, "ಈಗ ಟ್ರೈನ್ ಹೊರಡಬೇಕಂತೆ, ಇವಳ ವಸ್ತುಗಳೆಲ್ಲ ಅಲ್ಲೇ ಬಿಟ್ಟು ಬಂದಿದ್ದಾಳೆ. ಹಾಕಲು ಬಟ್ಟೆ ಕೂಡ ಇಲ್ಲ ಇವಳಿಗೆ. ಏನು ಮಾಡ್ತಾಳೋ ಮಾಡಿಕೊಳ್ಳಲಿ" ಎನ್ನುವ ಚಡಪಡಿಕೆ.

ದೊಡ್ಡವರ ಹತ್ರ ನನ್ನ ಅನುಮಾನ ಕೇಳಿದರೆ. "ಅದು ಸಿನೆಮಾ ಅಲ್ವಾ? ಡೈರೆಕ್ಟರ್ ತಂದು ಕೊಡ್ತಾನೆ ಆಮೇಲೆ" ಎಂದು ಹೇಳುತಿದ್ದರು.

ಈಗೀಗ ಸಿನೆಮಾ ನೋಡೋದನ್ನೇ ಬಿಟ್ಟು ಬಿಟ್ಟಿದ್ದೇನೆ. ನನಗೆ ಪೂರ್ತಿಯಾಗಿ ಕತೆಯೊಳಗೆ ಹೋಗಲು ಸಾಧ್ಯವಾಗುತ್ತಿಲ್ಲ. ನೋಡುತ್ತಿದ್ದರೆ, ನಟರ ಅಭಿನಯದಲ್ಲಿನ ನಾಟಕೀಯತೆ, ಅತೀನಟನೆ ಇವುಗಳೇ ಕಣ್ಣಿಗೆ ಬಿದ್ದು "ಛಕ್!! ಇವರು ಯಾಕೆ ಸಹಜವಾಗಿ ಮಾತನಾಡುವುದಿಲ್ಲ?" ಅನಿಸಲು ಶುರುವಾದರೆ, ಕತೆಯೂ ರುಚಿಸುವುದಿಲ್ಲ. ಬೇಜಾರಾಗಿ ನಿದ್ರೆ ಬರಲು ಶುರು ಆಗಿಬಿಡುತ್ತದೆ.

ಎಲ್ಲ ಚಿತ್ರಗಳಲ್ಲ, ಕೆಲವೊಂದು ಬಹಳ ಇಷ್ಟವಾಗಿರುವುವೂ ಇವೆ. ಆದರೆ ಮೇಲೆ ಹೇಳಿದ ವಿಷಯ ಬಹುತೇಕ ಚಿತ್ರಗಳಿಗೆ ಮತ್ತು ನನಗೆ ಸಂಬಂಧಿಸಿದ್ದು.


ನನ್ನಲ್ಲೇ ಎಡವಟ್ಟಿದೆ ಎಂದು ಗೊತ್ತು ನನಗೆ. ಮನೆಯಲ್ಲಿ ಕೂತು ದೂರದರ್ಶನದಲ್ಲಿ ಚಿತ್ರಗಳನ್ನು ನೋಡುತ್ತಿರುವಾಗ ನಾನು ಮಧ್ಯೆ ಮಾತನಾಡಿ ಉಳಿದವರ ಆಸಕ್ತಿಗೂ ಭಂಗ ತರಿಸುವುದರಿಂದ ಮೊದಲೇ ನನಗೆ ತಾಕೀತಾಗಿರುತ್ತದೆ. 'ನಿನ್ನ ತಾರ್ಕಿಕ ವಾದಗಳನ್ನೆಲ್ಲ ಶುರು ಮಾಡುವುದಿಲ್ಲವೆಂದಾದರೆ ಮಾತ್ರ ನೋಡಲು ಕೂತುಕೊಳ್ಳಬಹುದು. ಇಲ್ಲವಾದರೆ ನಿನ್ನ ಇಷ್ಟದ ಬೇರೆ ಯಾವ ಕೆಲಸವಾದರೂ ಮಾಡಿಕೊಂಡಿರಲು ನಿನಗೆ ಮುಕ್ತ ಅವಕಾಶವಿದೆ' ಎಂದು ಭಾಷಣಕಾರರಂತೆ ಹೇಳುವಾಗ. ನಾನು ಬಹಳ ಸಂತೋಷದಿಂದ ಜೋರಾಗಿ, "ಮುಕ್ತ ... ಮುಕ್ತ.... ಮುಕ್ತ...." ಎಂದು ಹಾಡುತ್ತಾ ಹೊರ ನಡೆಯುತ್ತೇನೆ.

ಆದರೂ ನನಗೆ ಆಗಲೂ.... ಈಗಲೂ ಅನಿಸುವುದು ನನ್ನಂತವರಿಗೆ ಹೀಗೆಲ್ಲ ತಲೆ ಕೆಟ್ಟು ಹೋಗುವಷ್ಟು ಯೋಚನೆ ಮಾಡಲು ಬಿಡದ ಹಾಗೆ ಸಿನೆಮಾ ತಯಾರು ಮಾಡಲು ಯಾರಿಗೂ ಸಾಧ್ಯ ಇಲ್ವಾ? ಅಂತ.

ಪಂಪ ಅರಿಕೇಸರಿಗೆ ತೋರಿಸಿದ ಪಾನಭೂಮಿ

- ಶಾಂತಾ ನಾಗಮಂಗಲ

ಹೇಳಿ ಕೇಳಿ ಅರಿಕೇಸರಿ ರಾಜ. ಅವನ ರಾಜ್ಯದಲ್ಲಿರುವ ಪಾನಭೂಮಿ ಅವನಿಗೆ ತಿಳಿಯದೇ ಇರುತ್ತದೆಯೇ? ಅವುಗಳೇ ರಾಜ್ಯದ ಅತಿಮುಖ್ಯ ಆದಾಯ ಮೂಲವಾಗಿರುವಾಗ? ಅರಿಕೇಸರಿ ಆಳುತ್ತಿದ್ದಾಗ ಈ ಸಾರಾಯಿ ವ್ಯವಹಾರ ರಾಜ್ಯದ ಬೊಕ್ಕಸದ ದೊಡ್ಡ ಆದಾಯ ಮೂಲವಾಗಿತ್ತೋ ಇಲ್ಲವೋ ನಮಗೆ ತಿಳಿಯದು. ಆದರೆ ಮದ್ಯಪಾನ ರಸಿಕರು ಬಹಳ ಜನ ಇದ್ದಿರಬೇಕು. ಇಲ್ಲದಿದ್ದರೆ ಅರಿಕೇಸರಿಯ ಜೊತೆಜೊತೆಯಲ್ಲಿ ಯುದ್ಧ ಭೂಮಿಗೂ ಆಗಿಂದಾಗ್ಗೆ ಹೋಗಿ ಬರುತ್ತಾ, ದರ್ಬಾರಿನಲ್ಲಿ, ಕವಿ-ಗಮಕಿ-ವಾದಿ-ವಾಗ್ಮಿ– ಈ ಸಾಹಿತ್ಯ ಚತುರ್ಮುಖರ ಸಾಲಿನಲ್ಲಿ ಮೊದಲ ಪೀಠವನ್ನು ಅಲಂಕರಿಸಿ, ಕಾವ್ಯ ಬರೆದ ಪಂಪ, ತನ್ನ 'ವಿಕ್ರಮಾರ್ಜುನ ವಿಜಯ'ದಲ್ಲಿ ಅಷ್ಟು ವಿಸ್ತಾರವಾಗಿ ಇದರ ವರ್ಣನೆ ಮಾಡುತ್ತಿದ್ದನೇ? ಕಲ್ಪನೆಯ ರೆಂಕೆಗಳು ಗರಿಗೆದರಿ ಹಾರಬೇಕಾದರೂ, ಆರಂಭದ ವೇಗಕ್ಕೆ (ಮೊಮೆಂಟಮ್) ಮಣ್ಣಿನ ಗಟ್ಟಿ ನೆಲ ಬೇಕಲ್ಲವೇ? ಹಾಗೆ ತಾವು ಕಂಡುದಕ್ಕೆ ನೂರ್ಮಡಿ ಕಲ್ಪನೆಯ ಕುಸುರಿ ಕೆಲಸಮಾಡಿ ಕೊಡುವವರು ಕವಿಗಳಾಗುತ್ತಾರೆ. ಪಂಪನೂ ಹಾಗೆಯೇ.



ಸಾಮಾನ್ಯವಾಗಿ "ಪಂಪಭಾರತ" ಎಂದು ಜನಜನಿತವಾಗಿರುವ 'ವಿಕ್ರಮಾರ್ಜುನ ವಿಜಯಂ' ಕಾವ್ಯದಲ್ಲಿ ಈ ಪಾನಭೂಮಿಯ ವರ್ಣನೆ ಒಂದು ವಿಶಿಷ್ಟವಾದ ಸಂದರ್ಭದಲ್ಲಿ ಬರುತ್ತದೆ. ಅರಿಕೇಸರಿ ಅಂದರೆ ಅರ್ಜುನ, ಅರ್ಜುನ ಎಂದರೆ ಅರಿಕೇಸರಿ ಎಂಬ ಸಮೀಕರಣವನ್ನು ಮಾಡಿಕೊಂಡೇ ಪಂಪ ತನ್ನ 'ವಿಕ್ರಮಾರ್ಜುನ ವಿಜಯಂ' ಕಾವ್ಯವನ್ನು ಬರೆದಿರುವನಾದ್ದರಿಂದ, ಈ ಪಾನಭೂಮಿಯನ್ನು ಅರ್ಜುನನಿಗೆ ತೋರಿಸಿದ ಅಂದರೂ, ಅರಿಕೇಸರಿಗೆ ತೋರಿಸಿದ ಅಂದರೂ ಏನೂ ವ್ಯತ್ಯಾಸವಾಗಲ್ಲ. ಇದು ನನ್ನ ಈ ಲೇಖನದ ತಲೆಬರಹಕ್ಕೆ ಸಮಾಜಾಯಿಷಿ ಅಂದುಕೊಳ್ಳೋಣ. ಸರಿ ಪಂಪನಿಗೆ ಈ ಮದಿರಾಕ್ರೀಡೆಯನ್ನು ತನ್ನ ನಾಯಕನಿಗೆ ತೋರಿಸುವ ಸಂದರ್ಭ ಬಂದದ್ದಾದರೂ ಹೇಗೆ?

ಅಲ್ಲಿನ ಸಂದರ್ಭ ಹೀಗಿದೆ. ತೀರ್ಥಯಾತ್ರೆ ಮಾಡುತ್ತಾ ಅರ್ಜುನ, ಕೊನೆಯ ಘಟ್ಟವಾಗಿ ದ್ವಾರಕೆಗೆ ಬಂದಿದ್ದಾನೆ. ಅಲ್ಲಿ ಸುಭದ್ರೆಯನ್ನು ಕಂಡು ಅವಳನ್ನು ಇಷ್ಟಪಟ್ಟಿದ್ದಾನೆ. ಇಬ್ಬರಿಗೂ ಮೊದಲ ನೋಟದಲ್ಲಿ ಪ್ರೇಮಾಂಕುರವಾಗಿದೆ. ರಾತ್ರಿ ಮಲಗಿದಾಗ ಅರ್ಜುನನಿಗೆ ಸುಭದ್ರೆಯ ನೆನಪಿನಿಂದಾಗಿ, ಪ್ರೇಮ ಫಲಿಸುವುದೋ ಇಲ್ಲವೋ ಎಂಬ ಚಿಂತೆಯಿಂದಾಗಿ ನಿದ್ರೆ ಬಾರದಿದೆ. ಹೊರಳಿ ಹೊರಳಿ ಸಾಕಾಗಿ ಎದ್ದು, ದ್ವಾರಕೆಯ ಬೀದಿಗಳಲ್ಲಿ ತಿರುಗಾಡುತ್ತಾ ಸೂಳೆಗೇರಿಗೆ ಬರುತ್ತಾನೆ. ಏನಿದು? ಪಂಪ ಮಾಡಿರುವ ಎಡವಟ್ಟು, ಸುಭದ್ರೆ ನೆನಪಲ್ಲಿ ನಿದ್ದೆ ಬರಲಿಲ್ಲ ಅಂದರೆ ಸೂಳೆಗೇರಿಗೆ ಕಳಿಸೋದೆ –ಅಂತಾ ಯೋಚನೆ ನಮಗೆ ಬರೋದು ತಪ್ಪೇನಿಲ್ಲ ಬಿಡಿ.

ಪಾಪ ! ಅಷ್ಟಾದಶ, ಅಲ್ಲಲ್ಲ, ಕನ್ನಡದ ಕಾವ್ಯಲಕ್ಷಣಗಳನ್ನು ಹೇಳುವ ಗ್ರಂಥಗಳು ಚತುರ್ವಿಂಶತಿ ಅಂದರೆ ೨೪ ವರ್ಣನೆಗಳು ಮಹಾಕಾವ್ಯದಲ್ಲಿ ಇರಬೇಕು ಅಂತಾ ಹೇಳಿವೆಯಂತೆ. ಅವುಗಳಲ್ಲಿ ಸೂಳೆಗೇರಿಯ ವರ್ಣನೆಯೂ ಸೇರಿದೆ. ಹಾಗಾಗಿ ಪಂಪ ಇಲ್ಲಿ ಈ ವರ್ಣನೆಯನ್ನು ತೂರಿಸಿದ್ದಾನೆ. ರಾತ್ರಿಯಲ್ಲಿ ಎದ್ದಿರುವ, ಬಗೆಬಗೆಯ ಚಟುವಟಿಕೆಗಳು ನಡೆಯುವ ಕೇರಿಯೆಂದರೆ ಅದೇ ತಾನೇ? ಅಲ್ಲಿನ ಎಲ್ಲಾ ತೆರನಾದ ವ್ಯಾಪಾರಗಳನ್ನೂ ನೋಡುತ್ತಾ ಬರುವ ಅರ್ಜುನನ ಕಣ್ಣಿಗೆ ಪಾನಭೂಮಿಯೂ ಕಾಣುತ್ತದೆ. ಅಲ್ಲಿ ಒಂದು ಮದಿರಾ ಪಾನ ಗೋಷ್ಠಿ ನಡೆಯುತ್ತಿದೆ. ಅಲ್ಲಿರೋರೆಲ್ಲಾ "ಒಳ್ವೆಂಡಿರ್" ಗಳೇ ಅಂದರೆ ಸುಂದರಿಯರಾದ ಹೆಂಗೆಳೆಯರೇ. ಅವರು ತಮ್ಮ ಮುಂದೆ ಮುನ್ನೂರ ಅರವತ್ತು ಜಾತಿಯ ಕಳ್ಳಳನ್ನು ಇಟ್ಟುಕೊಂಡು ಗೋಷ್ಠಿ ನಡೆಸುತ್ತಿದ್ದರಂತೆ. ಟೇಬಲ್ ಮ್ಯಾನರ್ಸ್ ಅಂತಾರಲ್ಲಾ ಹಾಗೆ ಅವರೆಲ್ಲಾ ಮದಿರಾ ಪಾನದ ಎಟಿಕೇಟ್ಸ್ ಎಲ್ಲವನ್ನೂ ಚೆನ್ನಾಗಿ ಅರೆದು ಕುಡಿದಿದ್ದವರು. ಅವರೆಲ್ಲಾ ಹೇಗೆ ಮಧುಪಾನ ಮಾಡ್ತಾ ಇದ್ದರು ಅಂತಾ ಪಂಪ ವರ್ಣನೆ ಓದಿದ ಮೇಲೆ ಅದು ನಿಮಗೇ ಗೊತ್ತಾಗುತ್ತೆ. ಪಂಪನ ಹಳಗನ್ನಡದ ವರ್ಣನೆಯನ್ನೇ ನೋಡಿ:

ಮುನ್ನೂರರವತ್ತು ಜಾತಿಯ ಕಳ್ಗಳಂ ಮುಂದಿಟ್ಟು ಮಧುಮಂತ್ರದಿಂ ಮಧುದೇವತೆಗಳನರ್ಚಿಸಿ, ಪೊನ್ನ ಬೆಳ್ಳಿಯ ಪದ್ಮರಾಗದ ಪಚ್ಚೆಯ ಗಿಳಿಯ ಕೋಗಿಲೆಯ ಕೊಂಚೆಯಂಚೆಯ ಕುಂತಳಿಕೆಯ ಮಾಳ್ಕೆಯ ಸಿಪ್ಪುಗಳೊಳ್ ತೀವಿ, ಮಧುಮಂತ್ರದಿಂ ಮಂತ್ರಿಸಿ, ನೆಲದೊಳೆರೆದು, ತಲೆಯೊಳ್ ತಳಿದು, ಕಳ್ಳೊಳ್ ಬೊಟ್ಟನಿಟ್ಟುಕೊಂಡು, ಕೆಲದರ್ಗೆಲ್ಲಂ ಬೊಟ್ಟಿಟ್ಟು, ಕಿರಿಯರ್ ಪಿರಿಯರರಿದು ಪೊಡವಟ್ಟು, ಧರ್ಮಗಳ್ಗುಡಿವರ್ಗೆಲ್ಲಂ ಮೀಸಲ್ಗಳ್ಳನೆರೆದು, ಪೊನ್ನ ಬೆಳ್ಳಿಯ ಸಿಪ್ಪುಗಳೊಳ್ ಕಿರಿ ಕಿರೆದನೆರೆದು ಕುಡಿ ಬಿದಿರ ಕುಡಿಯ ಮಾವಿನ ಮಿಡಿಯ, ಮಾರುದಿನ ಮೆಣಸುಗಡಲೆಯ ಪುಡಿಯೊಳಡಸಿದಲ್ಲವಲ್ಲಣಿಗೆಯ ಚಕ್ಕಣಂಗಳ ಸವಿಸವಿದು-- ಹೀಗೆ ಪಂಪ ಒಂದು ದೊಡ್ಡ ಗದ್ಯಭಾಗದಲ್ಲಿ ವೇಶ್ಯಾವಾಟಿಕೆಯ ದಿನಚರಿಯ ಒಂದು ಜೀವಂತ ಚಿತ್ರಣವನ್ನೇ ನಮ್ಮ ಕಣ್ಣಮುಂದೆ ಕಟ್ಟಿಕೊಡುತ್ತಾನೆ.

ಅಲ್ಲಿ ವೇಶ್ಯೆಯರು, ಹಿರಿಯ, ಕಿರಿಯರೆಲ್ಲಾ ಸೇರಿದ್ದಾರೆ . ಅವರೆಲ್ಲಾ ಬಗೆ ಬಗೆಯಾದ ಕಳ್ಳುಗಳನ್ನು ಮುಂದಿಟ್ಟುಕೊಂಡು, ಮೊದಲು ಮಧುದೇವತೆಗಳನ್ನು ಮಧುಮಂತ್ರಗಳಿಂದ (ಅವು ಯಾವ ಮಂತ್ರವೋ ಗೊತ್ತಿಲ್ಲ) ಪೂಜೆ ಮಾಡಿ ನಂತರ ಸೇವನೆ ಮಾಡುವ ಮಡಿವಂತರು, ಆಚಾರವಂತರು ಅವರು.

ಇಷ್ಟೊಂದು ವೆರೈಟಿ ಮದ್ಯಗಳು ಈ ಹೊತ್ತೂ ಇವೆಯೋ ಇಲ್ಲವೋ – ಈ ವಿಷಯದಲ್ಲಿ ನಾನು ಅನನುಭವಿ. ಅನುಭವಸ್ಥರೋ, ಇಲ್ಲ ವಿಷಯ ತಿಳಿದವರೋ ಇದನ್ನು ಪ್ರಮಾಣೀಕರಿಸಬೇಕಷ್ಟೆ. ಅದೇ ರೀತಿ ಈ ಮದ್ಯಪಾನ ಗೊಷ್ಠಿಗಳಲ್ಲಿ ಈ ಬಗೆಯ ವ್ಯವಹಾರಗಳು, ಶಿಷ್ಟಾಚಾರಗಳು ನಡೆಯುತ್ತವೆಯೋ ಅಥವಾ ಪೂರ್ತಿಯಾಗಿ ಇದು "ಅಪಾರೇ ಕಾವ್ಯಸಂಸಾರೇ ಕವಿರೇವ ಪ್ರಜಾಪತಿಃ | ಯಥಾಸ್ಮೈ ರೋಚತೇ ತಸ್ಮೈ ತಥೇದಂ ಪರಿವರ್ತತೇ" – ಅಂದರೆ ಕಾವ್ಯಪ್ರಪಂಚದಲ್ಲಿ ಕವಿಯೇ ಬ್ರಹ್ಮ. ಅವನಿಗೆ ಹೇಗೆ ಇಷ್ಟವಾಗುವುದೋ ಹಾಗೆಯೇ ಆ ಪ್ರಪಂಚದ ನಿರ್ಮಾಣ ಎಂಬಂತೆ ಪಂಪನದೇ ಕಲ್ಪನೆಯೋ ಗೊತ್ತಿಲ್ಲ. ಏನೇ ಇರಲಿ, ನಿಜಕ್ಕೂ ರೋಚಕವಾದ ಕಣ್ಣಿಗೆ ಕಟ್ಟುವ ನುಡಿಚಿತ್ರ ಎನ್ನುವುದರಲ್ಲಿ ಎರಡು ಮಾತಿಲ್ಲ.

ಅವರು ಎಲ್ಲರ ಹಾಗೆ ಕಳ್ಳನ್ನು ಕರಟದಲ್ಲೋ, ಸಿಲ್ವಾರದ ಲೋಟದಲ್ಲೋ, ಮಣ್ಣಿನ ಸ್ರಾವೆಯಲ್ಲೋ ಕುಡಿಯೋರಾಗಿರಲಿಲ್ಲ. ಅವರ ಬಳಿ ಚಿನ್ನದ, ಬೆಳ್ಳಿಯ, ಪದ್ಮರಾಗದ, ಪಚ್ಚೆಯ ಕಲ್ಲಿನಲ್ಲಿ ಮಾಡಿದ ಮಧುಚಷಕಗಳು (ವೈನ್ ಕಪ್ಸ್) ಇದ್ದವು. ಅಷ್ಟೇ ಅಲ್ಲ. ಅವರ ರಾಸಿಕ್ಯ ಯಾವ ಮಟ್ಟದ್ದು ಎಂದರೆ ಈ ಮಧುವಿನ ಬಟ್ಟಲುಗಳು ಗಿಳಿ, ಕೋಗಿಲೆ, ಹಂಸ, ಕ್ರೌಂಚಪಕ್ಷಿ, ಕುಂತಳಿಕೆ (ಶಕುಂತ ಪಕ್ಷಿ) ಹಕ್ಕಿಯ ಕೊಕ್ಕಿನಂತೆ ಕೊಕ್ಕಿರುವ ಅಥವಾ ಅದೇ ಆಕಾರದ ಬಟ್ಟಲುಗಳಿದ್ದವಂತೆ. ಅವುಗಳಲ್ಲಿ ಮಧುವನ್ನು ಎರೆದು ಪುನಃ

ಮಧುಮಂತ್ರಗಳಿಂದ ಮಂತ್ರಿಸಿ (ಕಿಕ್ ಹೆಚ್ಚಾಗಲಿ ಎಂದಿರಬೇಕು) , ಹಾಗೆ ಮಂತ್ರಪೂತವಾದ ಮದಿರೆಯನ್ನು ಸ್ವಲ್ಪ ಭೂತಾಯಿಗೆ ಚೆಲ್ಲಿ ನೈವೇದ್ಯಮಾಡಿ, ಸ್ವಲ್ಪ ತಮ್ಮ ತಲೆಯ ಮೇಲೆ ಪ್ರೋಕ್ಷಿಸಿಕೊಂಡು, ಕಳ್ಳನ್ನೇ ಬೆರಳಿಂದ ತೆಗೆದು ತಾವು ಮೊದಲು ಬೊಟ್ಟಿಟ್ಟುಕೊಂಡು, ಪಕ್ಕದಲ್ಲಿರುವವರಿಗೆ ಬೊಟ್ಟಿಟ್ಟು, ಅಲ್ಲಿರೋ ಹಿರಿಯರಿಗೆ ಕಿರಿಯರು ನಮಸ್ಕಾರ ಮಾಡಿ ಆಮೇಲೆ ಸೇವನೆಯನ್ನು ಆರಂಭಿಸುತ್ತಿದ್ದರು ಎಂದು ಪಂಪ ವರ್ಣಿಸುತ್ತಾನೆ. ಅದೊಂದು ಯಜ್ಞವೋ ಎನ್ನುವಂತೆ ಈ ಕೆಲಸವನ್ನು ವಿಧಿ ನಿಯಮಗಳನ್ನು ಅನುಸರಿಸಿ ಮಾಡುತ್ತಿದ್ದರು ಎಂದು ಕಾಣುತ್ತದೆ.

ಇಷ್ಟೆಲ್ಲಾ ಸುದೀರ್ಘವಾದ ಗುಂಡುಪಾರ್ಟಿಯ ಸಿದ್ಧತೆ ಬಹುಶಃ ಅಲ್ಲಿ ಪ್ರತಿರಾತ್ರಿಯ ಕಥೆಯಾಗಿರಬೇಕು. ಹಾಗೆ ಆಗುವಾಗ ಅಲ್ಲಿ ಕೆಲವರು ಬಿಟ್ಟಿ ಪಾರ್ಟಿಗಳು ಬಂದು, ಬಟ್ಟಲು ಹಿಡಿದುಕೊಂಡು ಕಾಯುತ್ತಿದ್ದರು ಎಂದು ಕಾಣುತ್ತದೆ. ಅದಕ್ಕೆ ಆ ಧರ್ಮಿಷ್ಠರಾದ ಗೋಷ್ಠಿಯ ಸದಸ್ಯೆಯರಿಗೆ ಬೇಸರವೇನಿಲ್ಲ. ಯಾವ ಯಜ್ಞಕ್ಕೂ ಕಡಿಮೆಯಿಲ್ಲದಷ್ಟು ಧಾರ್ಮಿಕ ವಿಧಿ ವಿಧಾನಗಳನ್ನು ಅನುಸರಿಸುತ್ತಿರುವ ಅವರಿಗೆ, ಯಜ್ಞ ಎಂದರೆ ಹಂಚುವಿಕೆಯೂ ಇರಬೇಕು ಎಂಬ ಗೀತಾಚಾರ್ಯನ ನುಡಿಮುತ್ತು ಗೊತ್ತಿಲ್ಲದೇ ಇರುತ್ಯೇ? ದಾನ ಮಾಡಿದ ಪುಣ್ಯವೂ ಬರಲಿ ಅಂತ, ಅಂತಹವರಿಗೆ ಒಂದಷ್ಟು ಮೀಸಲು ಕಳ್ಳನ್ನೇ ಪಕ್ಕಕ್ಕೆ ಇಟ್ಟುಬಿಟ್ಟಿರ್ತಾ ಇದ್ದರಂತೆ. ಅಂತಹ ಮೀಸಲು ಕಳ್ಳನ್ನು ಎರೆದು ಮುಗಿಸಿದ ಮೇಲೆ ನಿರಾತಂಕವಾಗಿ ಇವರ ಪಾರ್ಟಿ ಶುರು. ಆಮೇಲೆ ಅವರುಗಳು ಚಿನ್ನ ಬೆಳ್ಳಿಯ ಬಟ್ಟಲುಗಳೊಳಗೆ ಸ್ವಲ್ಪಸ್ವಲ್ಪವೇ ತುಂಬಿ, ನಿಧಾನವಾಗಿ ಹೀರುತ್ತಾ , ಬಿದಿರ ಕಳಲೆಯ ಉಪ್ಪಿನಕಾಯಿ, ಮಾವಿನ ಮಿಡಿ, ಮೆಣಸುಕಡಲೆ, ಚಕ್ಕಣ ಅಂದರೆ ಮಟನ್ ಚಾಪ್ಸ್ ಗಳನ್ನು ಅವರವರ ಇಷ್ಟಾನುಸಾರ ನಂಚಿಕೊಂಡು ಮದ್ಯಪಾನ ಮಾಡುತ್ತಾ ಸುಖಿಸುತ್ತಿದ್ದ ಚಿತ್ರಣವನ್ನು ಪಂಪ ಬಹಳ ಜೀವಂತಿಕೆಯಿಂದ, ಒಂದಿಷ್ಟೂ ಮಡಿವಂತಿಕೆಗೆ ಎಡೆಗೊಡದೆ ಚಿತ್ರಿಸಿದ್ದಾನೆ. ಮಲ್ಲಿಕಾರ್ಜುನನ "ಸೂಕ್ತಿಸುಧಾರ್ಣವ" ದಲ್ಲಿ ಹೇಳಿರುವಂತೆ ಅರಮನೆಗಲ್ತು, ಸೂಳೆಮನೆಗಲ್ತು, ಸವಣ್ ಮನೆಗಲ್ತು, -- ಹೀಗೆ ಎಲ್ಲ ಬಗೆಯ ಅನುಭವವನ್ನು ಪಡೆದ ಕವಿಯ ಕಾವ್ಯವೇ ಎಲ್ಲ ಕಡೆಗೆ ಸಲ್ಲುವುದು ಎಂಬಂತೆ ಕಾವ್ಯಧರ್ಮವನ್ನು ಮೆರೆದಿದ್ದಾನೆ.

ಮುಂದೆಯೂ ಇನ್ನೂ ಮೂರು-ನಾಲ್ಕು ಪದ್ಯಗಳಲ್ಲಿ ಕುಡಿದವರ ಚೇಷ್ಟೆ, ತೊದಲು ಮಾತುಗಳು, ಹುಚ್ಚು ನಗೆ ಕುಣಿತಗಳು, ಬೇರೆ ಬೇರೆ ಬಗೆಯ ಮಧುವಿನ ವಿವರಗಳು, ಅವುಗಳ ಗುಣದೋಷಗಳನ್ನು ಹೇಳುವುದು, ಎಲ್ಲವನ್ನೂ ವರ್ಣಿಸಿದ್ದಾನಾದರೂ, ಈ ಗದ್ಯಭಾಗದ ವಿವರಣೆಯ ಜೀವಂತಿಕೆಯಾಗಲೀ, ಜೀವನ ವಿಧಾನದ ಲವಲವಿಕೆಯಾಗಲೀ ಅಷ್ಟಾಗಿ ಕಾಣದು.

ಕನ್ನಡದ ಹಲವು ಕಾವ್ಯಗಳಲ್ಲಿ ಸೂಳೆಗೇರಿಯ ವರ್ಣನೆ ಬಂದಿದೆ, ಮತ್ತು ಅದು ಅನೌಚಿತ್ಯದ ಎಲ್ಲೆಯನ್ನೂ ದಾಟಿರುವುದು ಕಂಡುಬರುತ್ತದೆ. ಪಂಪನದು ಔಚಿತ್ಯಪೂರ್ಣ ಎಂದು ಒಪ್ಪಲಾಗದಿದ್ದರೂ, ಈ ಬಗೆಯ ನಾರೀಮಣಿಯರ ಪಾನಗೋಷ್ಠಿಯ ವರ್ಣನೆ ಬೇರೆ ನಾನು ಓದಿರುವ ಯಾವ ಕಾವ್ಯದಲ್ಲೂ ಕಂಡುಬಂದಿಲ್ಲ. ಈ ನಿಟ್ಟಿನಿಂದ ವಿಶೇಷವೆನಿಸಿತು ನನಗೆ.

ಚಾಕು ಹೆಗಡೆ

- ಜೀವಿ. ಹೆಗಡೆ

"ಸುಬ್ರಾಯ, ವಿಘ್ನೇಶ ಹೇಳುವುದರಲ್ಲಿ ತಪ್ಪಿಲ್ಲ. ಅವನಿಗೂ ಅವನ ಸಂಸಾರ ಅಂತ ಇದೆ. ಕಾಲವೂ ಬದಲಾಗಿದೆ ನೋಡು. ದೇಶಕ್ಕೇ ಸ್ವಾತಂತ್ರ್ಯ ಬಂದಿದೆ. ಅವನು ಅದನ್ನು ಬಯಸಿದರೆ ತಪ್ಪೇ? ನೀನು ಹೇಗೋ ನಿನ್ನ ಸ್ವಂತ ತಮ್ಮ ಅಂತ ತಿಳಿದು ಅವನ ಬಗ್ಗೆ ಕಾಳಜಿ ವಹಿಸುತ್ತೀಯೆ. ಅವನ ಹೆಂಡತಿ ನಿನ್ನ ಹೆಂಡತಿಗೆ ಸ್ವಂತ ತಂಗಿಯಲ್ಲವಲ್ಲ. ಅವನ ಮಕ್ಕಳಿಗೆ ಎಲ್ಲ ವಿಷಯಕ್ಕೂ ನಿನ್ನಲ್ಲಿ ಕೇಳಲು ಮುಜುಗರವಾದರೆ ತಪ್ಪಲ್ಲ. ಆದ್ದರಿಂದ ಅವನು ಕೇಳುವ ಅವನ ಪಾಲನ್ನು ಅವನಿಗೆ ಕೊಡುವದೇ ಸರಿ. ಇದು ನನ್ನ ಅಭಿಪ್ರಾಯವೇ ವಿನಃ ಒತ್ತಾಯ ಅಲ್ಲ".

ಕುಮಾರ ಹೆಗಡೆಗೆ ಸುಬ್ರಾಯ ಭಟ್ಟರ ಕುಟುಂಬದಲ್ಲಿ ಹಸ್ತಕ್ಷೇಪ ಮಾಡಿದಲ್ಲಿ ಯಾವುದೇ ಲಾಭವಿಲ್ಲ. ವಿಘ್ನೇಶ ಭಟ್ಟರು ಕುಮಾರ ಹೆಗಡೆಯವರಲ್ಲಿ ಏನನ್ನೂ ಹೇಳಿರಲಿಲ್ಲವೆನ್ನಿ. ಒಮ್ಮೆ ತೋಟದಲ್ಲಿ ಕೊನೆಕೊಯ್ಲಿನ ಸಂದರ್ಭದಲ್ಲಿ ವಿಘ್ನೇಶ ಭಟ್ಟರನ್ನು ಭೇಟಿಯಾದ ಕುಮಾರ ಹೆಗಡೆಯೇ ಹೇಳಿದ್ದನು. "'ವಿಘ್ನೇಶ, ಏನೋ ಹೇಗಿದ್ದೀಯಾ?. ಅಣ್ಣ ಸುಮಾರು ದಿನಗಳಿಂದ ಕಾಣುತ್ತಿಲ್ಲವಲ್ಲ. ಸವಾರಿ ಎಲ್ಲಿಗೆ ಹೋಗಿದೆ?"

"ಮೊನ್ನೆ ಯಾವುದೋ ಕೆಲಸವಿದೆ ಅಂತ ಬೆಂಗಳೂರಿಗೆ ಹೋಗಿದ್ದಾನೆ ಅಂತ ಅತ್ತಿಗೆ ಹೇಳಿದ್ದಾಳೆ. ಎರಡು ದಿನಗಳಲ್ಲಿ ಬರುತ್ತಾನಂತೆ".

"ಇತ್ತಿತ್ತಲಾಗಿ ಅಣ್ಣ ಬೆಂಗಳೂರಿಗೆ ಹೋಗುವದು ಹೆಚ್ಚಾದ ಹಾಗಿದೆ."

"ಯಜಮಾನನೆಂದರೆ ಅದೂ ಇದೂ ಕೆಲಸ ಇದ್ದೇ ಇರುತ್ತದೆಯಲ್ಲವೇ?"

"ನೋಡು ವಿಘ್ನೇಶ, ನಿಮ್ಮ ಮನೆಯ ವ್ಯವಹಾರ ನನಗೆ ಸಂಬಂಧಿಸಿದ್ದಲ್ಲ. ಅದರಿಂದ ನನಗೇನಾಗಬೇಕಿದೆ ಹೇಳು. ಆದರೂ ನಿನ್ನ ಸ್ನೇಹಿತ ನಾನು. ನಿನಗೆ ಲುಕ್ಸಾನು ಆಗುವದನ್ನು ಹೇಗೆ ಸಹಿಸಲಿ ಹೇಳು. ಏನಿದ್ದರೂ ನೀನೂ ಅವನ ಕುರಿತು ಕಾಳಜಿವಹಿಸುವದು ಒಳ್ಳೆಯದು. ಬೆಂಗಳೂರಿನಲ್ಲಿ ಅವನ ಸ್ವಂತಕ್ಕೆ ಜಮೀನು ಖರೀದಿ ಮಾಡಲು ಹೋಗಿದ್ದಾನೆ ಅಂತ ಸುದ್ದಿ ಇದೆ. ನಿನ್ನಣ್ಣ ಕುಟುಂಬದ ಯಜಮಾನನಾಗಿ ನಿನಗೆ, ಅದರಲ್ಲೂ ನನ್ನ ಚಡ್ಡೀದೋಸ್ತನಿಗೆ, ಅನ್ಯಾಯ ಮಾಡಿಯಾನು ಎನ್ನುವ ನೋವುಂಟು ನನಗೆ, ಅಷ್ಟೆ. ನೀನುಂಟು ನಿನ್ನ ಅಣ್ಣ ಉಂಟು ಬಿಡು." ವಿಘ್ನೇಶ ಭಟ್ಟರ ಮನಸ್ಸಿನಲ್ಲಿ ಹುಳು ಬಿಟ್ಟು ಹೊರಟ ಕುಮಾರ ಹೆಗಡೆ.

ಕುಮಾರ ಹೆಗಡೆಯ ಸ್ವಭಾವವೇ ಹಾಗೆ. ಊರಿನಲ್ಲಿಯ ವಿಷಯಗಳನ್ನು ಹೇಗೋ ತಿಳಿದುಕೊಳ್ಳುತ್ತಿದ್ದ. ಅಣ್ಣ-ತಮ್ಮ, ತಂದೆ- ಮಗ, ಬಾವ-ನೆಂಟ, ಯಜಮಾನ-ಆಳು ಹೀಗೆ ಯಾವ ಸಂಬಂಧವಾದರೂ ಅವರ ಮಧ್ಯದಲ್ಲಿರುವ ಭಿನ್ನಾಭಿಪ್ರಾಯಗಳನ್ನು ದೊಡ್ಡದು ಮಾಡಿಯೋ ಅಥವಾ ಮನಸ್ತಾಪವನ್ನೇ ತಂದು ಹಾಕಿಯೋ ಕೆಲಸ ಮಾಡುತ್ತಾ ಇರಬೇಕು.

ಅನಂತ ಗೋಪಾಲರಾಯರ ಮಗ. ಅವನ ಹೆಂಡತಿ ವೈಶಾಲಿಯ ಬಾಯಿ ಸ್ವಲ್ಪ ಜೋರು. ಕುಮಾರ ಹೆಗಡೆಗೆ ಪೇಟೆಯಲ್ಲಿ ಗೋಪಾಲರಾಯರು ಸಿಕ್ಕಿದರು.

"ರಾಯರೆ, ಇದು ಯಾಕೋ ನನಗೆ ಸರಿ ಬರಲಿಲ್ಲ"

"ಏನು?"

"ನೀವು ಗಂಡ ಹೆಂಡತಿ ವಯಸ್ಸಾದವರು. ನಿಮ್ಮ ಸೊಸೆ ವೈಶಾಲಿ ತಗ್ಗಿ ಬಗ್ಗಿ ನಡೆಯಬೇಕಲ್ಲವೇ? ಅನಂತನಾದರೂ ಹೇಳಬೇಕಿತ್ತು. ನಿಮ್ಮ ಪಕ್ಕದ ಮನೆ ಸುನಂದಾಬಾಯಿಯೇ ಹೇಳಿದ್ದಾಳಂತಲ್ಲ 'ಗಂಡು ಬೀರಿಯನ್ನು ಅತ್ತೆ ಮಾವ ಹೇಗೆ ಸುಧಾರಿಸಿಕೊಳ್ಳುತ್ತಾರೋ ' ಅಂತ. ಅಂತೂ ನಿಮಗೆ ಮಗ ಸೊಸೆ ಇದ್ದರೂ ಇಲ್ಲದಂತಾಯಿತು ಅಂತ ನನಗೆ ಚಿಂತೆ ಅಷ್ಟೇ."'

"ದೇವರ ಇಚ್ಛೆಯಂತಾಗುತ್ತದೆ" ಗೋಪಾಲರಾಯರು ಹೇಳಿದರು.

ನಾಲ್ಕು ದಿನದ ನಂತರ ಅನಂತ ಭೇಟಿಯಾದ ಕುಮಾರ ಹೆಗಡೆಗೆ,
"ಅನಂತ, ತಂದೆ ಅನುಭವಿಗಳು. ನಿನ್ನ ಹೆಂಡತಿ ಹುಡುಗು ಬುದ್ಧಿಯವಳು. ಅವರು ಸುಧಾರಿಸಿಕೊಂಡು ಹೋಗಬೇಕಲ್ಲವೇ?"

"ಹೌದು, ಹಿರಿಯರಲ್ಲವೇ ಅವರು. ಸುಧಾರಿಸಿಯಾರು".

"ನೋಡು, ತಪ್ಪು ತಿಳಿದುಕೊಳ್ಳಬೇಡ. ನನ್ನ ಮಗ ಬೇರೆಯಲ್ಲ, ನೀನು ಬೇರೆಯಲ್ಲ. ಒಂದು ಮಾತು ಬರುತ್ತದೆ ಹೋಗುತ್ತದೆ ಯಪ್ಪ. ನಿಮ್ಮ ಪಕ್ಕದ ಮನೆ ಸುನಂದಾಬಾಯಿಯಲ್ಲಿ ಅದನ್ನೇ ಹೇಳಿ ಊರೆಲ್ಲಾ ಪ್ರಚಾರವಾದರೆ ಹೇಗೆ? ನೀವು ಹೇಗೆ ದಿನಾಲೂ ಸಂಬಾಳಿಸಿಕೊಳ್ಳುತ್ತೀರೋ ಏನೋ? ಅಂತೂ ನೀವು ಸಮಾಧಾನದಲ್ಲಿದ್ದರೆ ಸಾಕು, ಬರುತ್ತೇನೆ".

ಮುಂದಿನದು ಊಹೆಗೆ ಬಿಟ್ಟಿದ್ದು.

ಊರಿನಲ್ಲಿ ಬೇರೆಯವರ ಜೊತೆ ಕುಮಾರ ಹೆಗಡೆ ಹೇಳುವುದೇ ಬೇರೆ.

"ಅವರು ನೋಡು ಅಣ್ಣ ತಮ್ಮ, ಹಾವು ಮುಂಗಸಿಯ ತರ ಇದ್ದಾರೆ. ಅವರಲ್ಲಿ ಮನಸ್ತಾಪ ಬೇಡ ಅಂತ ನಾನೇ ಪಂಚಾಯ್ತಿ ನಡೆಸಿ ಗಿಳಿಗೆ ಹೇಳಿದ ಹಾಗೆ ಹೇಳಿದೆ. ಕೇಳುವ ಹಂತದಲ್ಲಿಲ್ಲ ಅಣ್ಣ ತಮ್ಮ ಇಬ್ಬರೂ. ಬೇರೆಯಾಗಿಯೇ ಶುದ್ಧ ಅಂತ ಇಬ್ಬರೂ ಹೇಳುವವರೇ. ಏನೋ ಅಂತೂ ಮನಃಕಷಾಯ ಹೊಂದಿ ಒಟ್ಟಿರುವದಕ್ಕಿಂತ ಬೇರೆಯಾಗಿ ಪ್ರೀತಿಯಿಂದ ಇದ್ದರೊಳ್ಳೆಯದಲ್ಲವೇ?" ಅಂತ ನಿರ್ಣಯದ ಶರಾ ಬರೆಯುತ್ತಾನೆ.

"ಮಾರು, ನಿನ್ನ ಗಣೇಶ ಹೆಗಡೇರು ಪುಣ್ಯಾತ್ಮರು".

ಮಾರು, ಗಣೇಶ ಹೆಗಡೆಯ ಮನೆ ಆಳು. ಬಹಳ ವರ್ಷಗಳಿಂದ ಅವರಲ್ಲಿ ಕೆಲಸ ಮಾಡುತ್ತಿದ್ದಾನೆ. ಇಬ್ಬರೂ ಕುಮಾರ ಹೆಗಡೆಗೆ ಗೊತ್ತಿದ್ದವರೆ. ಕುಮಾರ ಹೆಗಡೆಯ ಮಾತು ಕೇಳಿ ಮಾರುವಿಗೆ ಏನು ಹೇಳಬೇಕು ಅಂತ ತತ್ ಕ್ಷಣ ಸೂಚಿಸಲಿಲ್ಲ. ಒಂದು ರೀತಿಯ ಉದಾಸೀನದಿಂದಲೇ "ಹಂ" ಅಂತ ಹೇಳಿದ.

"ನಿನ್ನ ಅಣ್ಣನ ಮಗ ದೇವು ಹೇಳಿದ. ನಿನ್ನಂತಹ ಕೆಲಸಗಾರ ಇಡೀ ಕೊಪ್ಪದಲ್ಲಿಯೇ ಯಾರೂ ಇಲ್ಲವಂತೆ. ಅವನು ಸೆಂಟ್ರಿಂಗ್ ಕೆಲಸಕ್ಕೆ ಹೋಗುತ್ತಾನಂತೆ. ಅರ್ಧ ದಿನದ ಕೆಲಸಕ್ಕೇ ಐನೂರು ರೂಪಾಯಿ ಪಗಾರಂತೆ. ಯಾಕೋ ನಿನ್ನ ಬಿಟ್ಟೆ ಕೆಲಸ

ಹೆಚ್ಚಾಯಿತು ಅಂತ ಅನಿಸುತ್ತದೆ. ನಿನ್ನ ಪ್ರಾಮಾಣಿಕ ಕೆಲಸಕ್ಕೆ ಬರೇ ಮುನ್ನೂರ?. ಯಾರಾದರೂ ನಾನೂರು ಕೊಟ್ಟಾರು. ಅಂತೂ ನಿಮ್ಮ ಹೆಗಡೇರ ಪುಣ್ಯ ಹೇಳು".

"ಮಗನೂ ಹಾಗೇ ಹೇಳುತ್ತಿದ್ದಾನೆ ಹೆಗಡೇರೆ. ಗಣೇಶ ಹೆಗಡೇರ ಹತ್ತಿರ ಕೆಲಸ ಬಿಟ್ಟು ದೇವಣ್ಣನ ಜೊತೆ ಸೆಂಟ್ರಿಂಗ್ ಗೆ ಹೋದರೆ ಪಗಾರೂ ಹೆಚ್ಚು. ಮನೆ ಕೆಲಸಕ್ಕೂ ಸುಲಭ ಅಂತ. ಒಮ್ಮೆ ಹೇಗಡೇರ ಹತ್ತಿರ ಹೇಳಿಯೇ ಮುಂದುವರಿಯುತ್ತೇನೆ" ಅಂತ ಕುಮಾರ ಹೆಗಡೆಯಲ್ಲಿ ಹೇಳಿದ ಮಾರು.

ನಾಲ್ಕು ದಿನದ ಮೇಲೆ ಭಟ್ಟರ ಅಂಗಡಿಗೆ ಸಾಮಾನು ತರಲು ಹೋದಾಗ ಗಣೇಶ ಹೆಗಡೆ ಭೇಟಿಯಾದರು ಕುಮಾರ ಹೆಗಡೆಗೆ.

"ಗಣೇಶಣ್ಣ, ಇದು ಕಲಿ ಕಾಲ. ಚಿಗುರೇ ಬೇರನ್ನು ನುಂಗಿದ ಹಾಗಾಯಿತು".

"ಏನು ಹಾಗಂದರೆ ಕುಮಾರ?"

"ನೋಡು, ಮೊನ್ನೆ ಮಾರು ಸಿಕ್ಕಿದ್ದ. ನಿನ್ನ ಮನೆಯಲ್ಲಿ ಪಗಾರು ಸರಿಯಾಗಿ ಕೊಡುವುದಿಲ್ಲ, ಅವನ ಅಣ್ಣನ ಮಗ ದೇವು ಜೊತೆ ಸೆಂಟ್ರಿಂಗ್ ಕೆಲಸಕ್ಕೆ ಹೋದರೆ ಪಗಾರು ಹೆಚ್ಚು ಅಂತ ಹೇಳಿದನಪ್ಪ. ಅದಕ್ಕೇ ನೆನಪಿಗೆ ಬಂದಿತು, ಹೇಳಿದೆ ಅಷ್ಟೇ".

"ಏನಾಗುತ್ತದೆಯೋ ನೋಡೋಣ".

"ಗಣೇಶ, ನಾನು ಅಧಿಕಪ್ರಸಂಗಿ ಅಂತ ನೀನು ಹೇಳಿದರೂ ಅಡ್ಡಿಯಿಲ್ಲ. ನನ್ನವರ ಅಭಿಮಾನ ನನಗೆ ಹೆಚ್ಚಿನದು. ಇದು ಕೇವಲ ದುಡ್ಡಿನ ವಿಷಯವಲ್ಲ. ಮೂವತ್ತು ವರ್ಷದಿಂದ ನಿನ್ನ ಹತ್ತಿರ ಕೆಲಸಕ್ಕಿದ್ದವ ಅವನು. ಕೆಲಸ ಇರಲಿ ಇಲ್ಲದಿರಲಿ ಅವನನ್ನು ಹಾಗೂ ಅವನ ಕುಟುಂಬವನ್ನು ಸಾಕಿದವನು ನೀನು. ಖಾಯಂ ಆಗಿ ಕೆಲಸ ಕೊಡುತ್ತಾರೆ ಅಂದರೆ ಅವನಪ್ಪನಂತವನೂ ಕೆಲಸಕ್ಕೆ ಬಂದಾನು. ಅವನ ಬೇಡಿಕೆಗೆ ನೀನು ಮಣಿಯುವದು ಸರಿ ಅಲ್ಲ ಅಂತ ಅನಿಸಿತು. ಅದಕ್ಕೇ ಹೇಳಿದೆ. ಇನ್ನು ನೀ ಉಂಟು ಮಾರು ಉಂಟು. ಹೇಳಲು ನಾನು ಯಾರು? ಮನೆಗೆ ಬೇಗ ಹೋಗಬೇಕಾಗಿದೆ" ಹೇಳುವದನ್ನೆಲ್ಲಾ ಹೇಳಿ ಮನೆಗೆ ಹೊರಟ ಕುಮಾರ ಹೆಗಡೆ.

ಇಂತಹ ಎಷ್ಟೋ ಘಟನೆಗಳಿಗೆ ಕುಮಾರ ಹೆಗಡೆ ಕಾರಣನಾದರೂ ಅವನು ಉದ್ದೇಶಪೂರ್ವಕವಾಗಿ ಹೀಗೆ ಮಾಡುವುದಿಲ್ಲ. ಅವನ ಮಟ್ಟಿಗೆ ಎಲ್ಲರಿಂದಲೂ ಪ್ರೀತಿ ಪಡೆಯಬೇಕು ಎನ್ನುವ ಆಸಕ್ತಿ. ಆದ್ದರಿಂದಲೇ ಎಲ್ಲರಿಗೂ ಅವನಲ್ಲಿ ವಿಶ್ವಾಸ. ಎಲ್ಲರಿಗೂ ಅವನ ಮಧ್ಯಸ್ತಿಕೆ ಬೇಕೇ ಬೇಕು. ಊರಿನಲ್ಲಿ ಯಾವ ಪಂಚಾಯ್ತಿಯಾದರೂ ಕುಮಾರ ಹೆಗಡೆಗೆ ಕರೆ ಹೋಗುತ್ತದೆ.

ಆದರೆ ಇತ್ತೀಚಿಗೆ ಯಾಕೋ ಕೆಲವರು ಪಡ್ಡೆ ಹುಡುಗರು ಕುಮಾರ ಹೆಗಡೆಗೆ ಚಾಕು ಹೆಗಡೆ (ಚಾಡಿಕೋರ ಕುಮಾರ ಹೆಗಡೆ) ಎನ್ನುತ್ತಾರೆ.

ನಾಗರೀಕ ಸೇವಾ ಪರೀಕ್ಷೆಗಳಲ್ಲಿ ಮಾಧ್ಯಮ ಭಾಷೆಯಾಗಿ ಕನ್ನಡ

- ಬಿ. ಆರ್ ರವೀಂದ್ರನಾಥ್

ಯುಪಿಎಸ್ ಸಿ ನಡೆಸುವ ನಾಗರೀಕ ಸೇವಾ ಪರೀಕ್ಷೆಗಳನ್ನು ಕನ್ನಡ ಮಾಧ್ಯಮ ಭಾಷೆಯಲ್ಲಿ ನಡೆಸಬೇಕೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಗ್ರಹಿಸಿದೆ ಎಂಬ ಸುದ್ದಿ ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ. ಹಿಂದಿ ಮತ್ತು ಇಂಗ್ಲೀಷ್ ಗೊತ್ತಿಲ್ಲದ ಅಭ್ಯರ್ಥಿಗಳು ಅವಕಾಶವಂಚಿತರಾಗುತ್ತಿದ್ದಾರೆ ಎಂದು ಪ್ರಾಧಿಕಾರದ ಅಧ್ಯಕ್ಷರು ಬೇಸರ ವ್ಯಕ್ತಪಡಿಸಿದ್ದಾರೆ.

ಭಾರತದಲ್ಲಿ ಬ್ಯಾಂಕುಗಳ ಹುದ್ದೆಗಳಿಗಾಗಿ ನಡೆಸುವ ನೇಮಕಾತಿ ಪರೀಕ್ಷೆಗಳಲ್ಲಿ ಮಾಧ್ಯಮ ಭಾಷೆಯಾಗಿ ಕನ್ನಡವನ್ನು ಇತ್ತೀಚೆಗೆ ಪ್ರಯಾಸಪಟ್ಟು ಸೇರಿಸಲಾಗಿದೆ. ಈಗ ಎಂಜಿನಿಯರಿಂಗ್ ಪದವಿಗಳನ್ನೂ ಒಳಗೊಂಡಂತೆ ಎಲ್ಲಾ ಪದವಿ ತರಗತಿಗಳನ್ನು ಕನ್ನಡ ಮಾಧ್ಯಮದಲ್ಲಿ ನಡೆಸುವುದರ ಬಗ್ಗೆ ಈಗಾಗಲೇ ಘೋಷಣೆಯಾಗಿದೆ. ಪ್ರತಿ ವರ್ಷ ಕನ್ನಡ ಭಾಷೆಯಲ್ಲಿ ಸುಮಾರು 7000 ಪುಸ್ತಕಗಳು ಪ್ರಕಟಗೊಳ್ಳುತ್ತಿವೆ ಎಂಬ ಒಂದು ಅಂದಾಜಿದೆ. ಆದರೆ ಈ ರೀತಿಯ ಪರೀಕ್ಷೆಗಳಿಗೆ ಉಪಯೋಗವಾಗಬಹುದಾದ, ಪೂರಕ ಮಾಹಿತಿಗಳನ್ನು ಒದಗಿಸಬಹುದಾದ, ಆಕರ ಗ್ರಂಥಗಳು ಹೆಚ್ಚು ಪ್ರಕಟಗೊಳ್ಳುತ್ತಿಲ್ಲ. ಇದರಿಂದ ಕನ್ನಡ ಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳುವವರೂ ಸಹ ಆಂಗ್ಲ ಭಾಷೆಯಲ್ಲಿರುವ ಪುಸ್ತಕಗಳನ್ನು ಅಥವಾ ಮಾಹಿತಿ ಜಾಲತಾಣಗಳನ್ನು ಆಶ್ರಯಿಸಬೇಕಾಗುತ್ತದೆ. ಆಗ ಕನ್ನಡ ಮಾಧ್ಯಮದಲ್ಲಿ ಪರೀಕ್ಷೆಯನ್ನು ನಡೆಸುವ ಮೂಲ ಉದ್ದೇಶ ಸಫಲಗೊಳ್ಳುವುದಿಲ್ಲ.

ಭಾರತದಲ್ಲಿ ಬಹುಕಾಲದಿಂದ ನಡೆಸಲಾಗುತ್ತಿರುವ ಪ್ರತಿಷ್ಠಿತ ನಾಗರೀಕ ಸೇವಾ ಪರೀಕ್ಷೆಗಳಲ್ಲಿ ಕನ್ನಡ ಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿದ್ದರೂ ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ನಮಗೆ ನಿರಾಶಾದಾಯಕ ಚಿತ್ರ ಕಂಡುಬರುತ್ತದೆ. ಯುಪಿಎಸ್ ಸಿ ಅಧಿಕೃತವಾಗಿ ಪ್ರಕಟಿಸಿರುವ 2008 ರಿಂದ 2018ವರೆಗಿನ 11 ವರ್ಷಗಳ ಅಂಕಿ ಅಂಶಗಳ ಪ್ರಕಾರ ಕನ್ನಡವನ್ನು ಮಾಧ್ಯಮ ಭಾಷೆಯಾಗಿ ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳ ಗರಿಷ್ಠ ಸಂಖ್ಯೆ 29 ಹಾಗೂ ಕನಿಷ್ಠ ಸಂಖ್ಯೆ 5 ಆಗಿರುತ್ತದೆ. ಮರಾಠಿ ಭಾಷೆಯಲ್ಲಿ ಗರಿಷ್ಠ 237 ಮತ್ತು ಕನಿಷ್ಠ 75, ತಮಿಳು ಭಾಷೆಯಲ್ಲಿ ಗರಿಷ್ಠ 98,ಕನಿಷ್ಠ 9, ತೆಲುಗು ಭಾಷೆಯಲ್ಲಿ ಗರಿಷ್ಠ 117, ಕನಿಷ್ಠ 15, ಗುಜರಾತಿ ಭಾಷೆಯಲ್ಲಿ ಗರಿಷ್ಠ 135, ಕನಿಷ್ಠ 36 ಮತ್ತು ಇತರ ಭಾರತೀಯ ಭಾಷೆಗಳಲ್ಲಿ ಒಂದಂಕಿ ಸಂಖ್ಯೆಯ ಅಭ್ಯರ್ಥಿಗಳಿರುತ್ತಾರೆ. ಹಿಂದಿ ಭಾಷೆಯಲ್ಲಿ ಗರಿಷ್ಠ 5082 ಮತ್ತು ಕನಿಷ್ಠ 889 ಆಗಿರುತ್ತದೆ. 11 ವರ್ಷಗಳಲ್ಲಿ ಹಿಂದಿ ಭಾಷೆಯ ಅಭ್ಯರ್ಥಿಗಳ ಸಂಖ್ಯೆ ಸತತವಾಗಿ ಇಳಿಕೆಯಾಗುತ್ತಿದೆ. ಇಂಗ್ಲೀಷ್ ಭಾಷೆಯನ್ನು ಆಯ್ಕೆ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಒಟ್ಟಿನಲ್ಲಿ ಕನ್ನಡವನ್ನು ಕೆಲವೇ ಅಭ್ಯರ್ಥಿಗಳು ಮಾಧ್ಯಮ ಭಾಷೆಯಾಗಿ ಆಯ್ಕೆ ಮಾಡುತ್ತಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

ನಾಗರೀಕ ಸೇವಾ ಪರೀಕ್ಷೆಗಳಲ್ಲಿ ಕನ್ನಡವನ್ನು ಮಾಧ್ಯಮ ಭಾಷೆಯಾಗಿ ಆಯ್ಕೆ ಮಾಡುವ ಅಭ್ಯರ್ಥಿಗಳ ಸಂಖ್ಯೆ ಕಡಿಮೆ ಇರುವುದರ ಕಾರಣದಿಂದ ಅಧ್ಯಯನದ ಪರಿಕರಗಳ ಕೊರತೆಗಳಿರುವುದು ಸಹಜ. ಕನ್ನಡ ಮಾಧ್ಯಮದಲ್ಲಿ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅಭ್ಯರ್ಥಿಗಳಿಗೆ ಪ್ರೋತ್ಸಾಹಿಸಲು ಕನ್ನಡದಲ್ಲಿ ಅಧ್ಯಯನ ಪರಿಕರಗಳನ್ನು ಒದಗಿಸುವ ಕೆಲಸ ಆಗಬೇಕಿದೆ. ಈ ಪರೀಕ್ಷೆಗೆ ಬೇಕಾಗುವ ಪರಿಕರಗಳನ್ನು ಕನ್ನಡದಲ್ಲಿ ಒದಗಿಸಲು ಅಪಾರ ಮಟ್ಟದ ಶ್ರಮ ಹಾಗೂ ಹಣದ ಅಗತ್ಯವಿರುತ್ತದೆ. ಇದನ್ನು ಒದಗಿಸಲು ಯಾರೂ ಮುಂದೆ ಬಂದಿಲ್ಲದಿರುವುದರಿಂದ ಈ ಕೆಲಸ ಆಗುತ್ತಿಲ್ಲ.

ಅಂತರ್ಜಾಲದಲ್ಲಿಯೂ ಕನ್ನಡದಲ್ಲಿ ಬಹಳಷ್ಟು ಮಾಹಿತಿಗಳು ಲಭ್ಯವಿರುವುದಿಲ್ಲ. ಅಂತರ್ಜಾಲದಲ್ಲಿ ಲಭ್ಯವಿರುವ ಮುಕ್ತ ವಿಶ್ವಕೋಶವಾದ ವಿಕಿಪೀಡಿಯಾದ ಕನ್ನಡ ಪುಟಗಳಲ್ಲಿಯೂ ಹೆಚ್ಚಿನ ಮಾಹಿತಿಗಳು ಲಭ್ಯವಿಲ್ಲ. ಕೆಲವು ಪ್ರಮುಖ ವಿಷಯಗಳ ಬಗ್ಗೆ ಅಗತ್ಯವಿರುವಷ್ಟು ಮಾಹಿತಿಗಳು ಲಭ್ಯವಿರುವುದಿಲ್ಲ. ವಿಕಿಪೀಡಿಯಾದ ಇತರ ದಕ್ಷಿಣ ಭಾರತದ ಭಾಷೆಗಳಲ್ಲಿನ ಪುಟಗಳು

ದೀರ್ಘವಾಗಿದ್ದರೂ, ಕನ್ನಡ ಭಾಷೆಯ ಪುಟಗಳಲ್ಲಿನ ಮಾಹಿತಿ ಅತ್ಯಲ್ಪ. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸ್ಥಾಪಿಸಿ ನಿರ್ವಹಿಸುತ್ತಿರುವ 'ಕಣಜ' ಅಂತರಜಾಲ ಕನ್ನಡ ಜ್ಞಾನಕೋಶ ಜಾಲತಾಣದಲ್ಲಿಯೂ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ಬೇಕಾಗುವ ಮಾಹಿತಿಗಳು ಹೆಚ್ಚಿಲ್ಲ.

ಪದವಿಗಳನ್ನು ಕನ್ನಡ ಮಾಧ್ಯಮದಲ್ಲಿ ಪಡೆಯುವವರಿಗೆ ಪಠ್ಯ ಪುಸ್ತಕ ಹಾಗೂ ಗೈಡ್ ಪುಸ್ತಕಗಳು ಕನ್ನಡದಲ್ಲಿದ್ದರೂ ಸಾಕಾಗಲಾರದು. ಪೂರಕ ಮಾಹಿತಿಗಳನ್ನು ಒದಗಿಸುವ ಪುಸ್ತಕಗಳನ್ನೂ ಒದಗಿಸಿಕೊಡಬೇಕಾಗುತ್ತದೆ. ಜೊತೆಗೆ ಪೂರಕ ಮಾಹಿತಿಗಳನ್ನು ಒದಗಿಸುವ ಅಧಿಕೃತ/ನಂಬಲರ್ಹ ಜನಪ್ರಿಯವಾಗಿರುವ ವಿಕಿಪಿಡಿಯಾದಂತಹ ಜಾಲತಾಣಗಳಲ್ಲಿ ಲಭ್ಯವಾಗುತ್ತಿರುವ ಮಾಹಿತಿಗಳ ಕನ್ನಡ ಅವತರಣಿಕೆಗಳನ್ನೂ ಒದಗಿಸುವ ಕೆಲಸವೂ ಆಗಬೇಕಿದೆ. ಕರ್ನಾಟಕ ಸರ್ಕಾರದ 'ಕಣಜ' ಜಾಲತಾಣದಲ್ಲಿಯೂ ಹೆಚ್ಚಿನ ಮಟ್ಟದ ಮಾಹಿತಿಗಳನ್ನು ತುಂಬಬೇಕಾಗಿದೆ.

ಹೀಗಾಗಿ ಕನ್ನಡ ಮಾಧ್ಯಮದಲ್ಲಿ ಪರೀಕ್ಷೆಗಳನ್ನು ಬರೆಯಲು ಸಿದ್ಧವಿರುವ ಯುವಜನರನ್ನು ಪ್ರೋತ್ಸಾಹಿಸಲು ನಾವೆಲ್ಲರೂ ಶ್ರಮ ವಹಿಸಿ ಎಲ್ಲ ರೀತಿಗಳಲ್ಲಿ ಸಹಕಾರಗಳನ್ನು ನೀಡಬೇಕಾಗುತ್ತದೆ.

ಸಿಂಧು ಸೇರಿದ ಬಿಂದು

ಸಿಂಧು ಸೇರುವ ಆಸೆ
ಚಲುವೆ ಬಿಂದುವಿಗೆ!

ಆಗಸದ ಅಂಗಳದಿ ಇಣಿಕಿದಳು.
ಆಳ! ಪ್ರಪಾತ!!

ಹಾರುತ್ತ, ತೇಲುತ್ತ,
ಬಳುಕುತ್ತ, ಬೆದರುತ್ತ,

ಇಳಿದಿಳಿದು, ಬಸವಳಿದು,
ಕಸುವು ಕುಗ್ಗಿದರೂ!

ಬಹುದೊಡ್ಡ ಗುರಿ ಇಟ್ಟು
ದೂರದೂರಿನ ದಾರಿ ಹಿಡಿದಳಬಲೆ!

ಬುಡ ಬಿಟ್ಟುಬಂದಳು.
ದಡ ಕಾಣದು !

ಹಿಂದೆ ನೋಡಳು,
ಮುಂದೆ-ಮುಂದೆ ಸಾಗಿದಳು.

ಮುಗ್ಗರಿಸಿ-ಮುಗ್ಗರಿಸಿ
ಎಡವಿಯೇ ಬಿಟ್ಟಳು.!!

ವಿಶಾಲ ಮರ, ರೆಂಬೆ_ಕೊಂಬೆ ಫಲ-ಪುಷ್ಪಭರಿತ.
ಎಲೆಯ ತೊಟ್ಟಿಲಿನಲ್ಲಿ ಕುಳಿತು ನೋಡಿದಳು.

-ಕೆಳಗೆ,
ಹೊಳೆ-ಹೊಳೆವ ಹೊಳೆ !

ಉಲಿಯುತಿದೆ,ಕರೆಯುತಿದೆ
'ಜುಳು-ಜುಳು, ಜುಳು -ಜುಳು.

ತೂಗುತ್ತಲಿದೆ, ನಿನ್ನ ಬಿಡೆನೆಂದು ಎಲೆ!
'ಜೋ-ಜೋ ಜೋ -ಜೋ.

ಒಂದೇ ನೆಗೆತ ,

ಜಿಗಿ-ಜಿಗಿದಳಾ ಬಾಲೆ
ಹರಿವ ನೀರಿಗೆ ನೀರೆ!

ಬಾನ್ಗಳದ ಹನಿ "ಬಿಂದು"
'ಸಿಂಧು' ಸೇರಿದಳು.

ಬಂಧುರದ 'ಸಿಂಧು'ವೇ ಆದಳವಳು||
ಬಂಧುರದ 'ಸಿಂಧು'ವೇ ಆದಳವಳು!!


- **ಪಾರ್ವತಿ. ವಿ. ಹೆಗಡೆ**

ಪುಸ್ತಕ ಪರಿಚಯ

‘ತ್ರಿಮುಖಿ’

- ಜಿ. ವಿ. ಅರುಣ

ಈಚೆಗೆ ಬಿಡುಗಡೆಯಾದ ಒಂದು ಪುಸ್ತಕದ ಪರಿಚಯವನ್ನು ಇಂದು ನಾನು ಮಾಡಿಕೊಡುತ್ತಿದ್ದೇನೆ. ಇದು ಪುಸ್ತಕ ಪರಿಚಯ ಮಾತ್ರ. ಇಂಗ್ಲಿಷಿನಲ್ಲಿ ಬುಕ್ ಚೆಕ್ ಅನ್ನುತ್ತಾರಲ್ಲ ಹಾಗೆ. ಇದು ವಿಮರ್ಶೆಯಲ್ಲ.



ನಾನು ಪರಿಚಯಿಸುತ್ತಿರುವ ಪುಸ್ತಕ ‘ತ್ರಿಮುಖಿ’. ಇದರಲ್ಲಿ ತಮ್ಮ ನೆನಪಿನ ಹಾದಿಯನ್ನು ಬಿಚ್ಚಿಟ್ಟಿರುವ ಲೇಖಕರು ಡಾ ಸಿ.ಆರ್.ಸತ್ಯ ಅವರು. ಅತ್ಯುತ್ತಮ ವಿಜ್ಞಾನಿಯಾಗಿ, ಕನ್ನಡ ಹಾಗೂ ಇಂಗ್ಲಿಷ್ ಲೇಖಕರಾಗಿ, ಹಾಸ್ಯ ಬರಹಗಾರರಾಗಿ ಕನ್ನಡಿಗರಿಗೆ ಶ್ರೀ ಸತ್ಯ ಅವರ ಪರಿಚಯ ಇದ್ದೇ ಇದೆ. ಡಾ.ವಿಕ್ರಂ ಸಾರಾಭಾಯ್, ಡಾ.ಅಬ್ದುಲ್ ಕಲಾಂ, ಪ್ರೊ. ಎಸ್.ಆರ್.ರಾವ್ ಮುಂತಾದ ಶ್ರೇಷ್ಠ ವಿಜ್ಞಾನಿಗಳ ಜೊತೆ ಕೆಲಸ ಮಾಡಿದ ಮೇಧಾವಿ.

‘ತ್ರಿಮುಖಿ’- ಶ್ರೀ ಸತ್ಯ ಅವರ ಸಂಪೂರ್ಣ ಜೀವನ ಚರಿತ್ರೆ ಅಲ್ಲದಿದ್ದರೂ ಈ ಪುಸ್ತಕದಲ್ಲಿ ಅವರ ಜೀವನದ ಪ್ರಮುಖ ಘಟ್ಟಗಳ ನಿರೂಪಣೆ ಇದೆ.

ಮೊದಲನೆಯ ಭಾಗ - “ಹೊರನಾಡು ಕನ್ನಡಿಗನಾಗಿ” , ಎರಡನೆಯದು - “ಒಬ್ಬ ಪ್ರವಾಸಿಗನಾಗಿ” , ಕೊನೆಯದು - “ಮರಳಿ ತವರೂರಿಗೆ”

ಇವು ಮೂರು ಶ್ರೀ ಸಿ. ಆರ್.ಸತ್ಯ ಅವರು ಬೆಂಗಳೂರಿನಿಂದ ಹೊರಟು ಹೊರನಾಡಿಗನಾಗಿ, ಪ್ರವಾಸಿಯಾಗಿ, ಮರಳಿ ಮನೆಗೆ ಬಂದ ಹಾದಿಯ ಕುತೂಹಲ ಮೂಡಿಸುವ ಚಿತ್ರಣವನ್ನು ಕಾವ್ಯಮಯವಾಗಿ ವಿಭಾಗಿಸಿ, ‘ತ್ರಿಮುಖಿ’ ಎಂದು ಹೆಸರಿಸಿರುವುದು ಆಕರ್ಷಕವಾಗಿದೆ.

ಈ ಮೂರು ಮುಖಗಳ ದರ್ಶನ ಮಾಡಿಸುತ್ತ ಶ್ರೀ ಸತ್ಯ ಅವರು ತಮ್ಮ ಜೀವನ ಪಯಣದ ರೋಚಕ ಸಂಗತಿಗಳನ್ನು ಬಹಳ ಆಪ್ತವಾಗಿ ಮೂಡಿಸುತ್ತಾರೆ. ಈ ಬರಹವನ್ನು ಓದುತ್ತಿದ್ದರೆ, ಅಲ್ಲೇ - ಅವರ ಪಕ್ಕದಲ್ಲೇ ನಾವು ಇರುವ ಅನುಭವ ಆಗುತ್ತದೆ.

ಭಾರತವನ್ನು ಬಾಹ್ಯಾಕಾಶ ಕ್ಷೇತ್ರದಲ್ಲಿ ಉನ್ನತ ಸ್ಥಾನದಲ್ಲಿ ನಿಲ್ಲಿಸಿದ ಮಹಾನ್ ವಿಜ್ಞಾನಿಗಳ ಜೊತೆ ಹೆಗಲಿಗೆ ಹೆಗಲುಕೊಟ್ಟು ಶ್ರೀ ಸಿ.ಆರ್.ಸತ್ಯ ಅವರು ಮಾಡಿದ ಕಾರ್ಯವನ್ನು ತಿಳಿಯುವಾಗ ರೋಮಾಂಚನವಾಗುತ್ತದೆ. ರಾಕೆಟ್ಟಿಗೆ ಬೇಕಾದ ಇಂಧನ ಸಮ್ಮಿಶ್ರಣದ ನೋದಕಗಳ ಸ್ಫೋಟಕವನ್ನು ಜೀಪಿನ ಟ್ರೈಲರ್‌ನಲ್ಲಿ ಕಾರೈಕುಡಿಯಿಂದ ತಿರುವನಂತಪುರಕ್ಕೆ ತರಲು ನಿಯೋಜಿತರಾಗಿದ್ದರು. ರಾತ್ರಿ ಇವರು ತಪಾಸಣೆಗೆ ಜೀಪ್ ನಿಲ್ಲಿಸಿದ ಸ್ಥಳಕ್ಕೆ ಹೋದಾಗ ಅವರ ಎದೆ ದಸಕ್ಕೆಂದಿತು. ಜೀಪಿಗೆ ಒರಗಿಕೊಂಡು ಯಾರೋ ಇಬ್ಬರು ಬೀಡಿ ಸೇದುತ್ತಿದ್ದರು. ಕಾವಲುಗಾರ, ಪೊಲೀಸರು ನಾಪತ್ತೆಯಾಗಿದ್ದರು. ಅಕಸ್ಮಾತ್ ಗೀರಿದ ಕಡ್ಡಿಯೋ, ಸೇದಿ ಬಿಸಾಕಿದ ಬೀಡಿ ತುಂಡೋ ಟ್ರೈಲರ್ ಒಳಗೆ ಬಿದ್ದಿದರೆ ಕೊಯಮತ್ತೂರಿನ ಆ ಭಾಗವೇ ನಿರ್ನಾಮವಾಗಿ ಹೋಗಬೇಕಿತ್ತು. ಅದನ್ನು ಮನಗಂಡು ಅವರು ರಾತ್ರಿಯೆಲ್ಲಾ ಜೀಪಿಗೆ ಪಹರೆ ಕೊಟ್ಟಿದ್ದಾಯ್ತು.

ಒಮ್ಮೆ ನಮ್ಮ ದೇಶದಲ್ಲಿ ತಯಾರಾಗುವ ಗುಂಡು ನಿರೋಧಕ ಜ್ಯಾಕೆಟ್‌ಗಳನ್ನು ಕೊಳ್ಳಲು ಆಲ್ಜೀರಿಯಾದ ಜಂಟಾದಿಂದ ಕರೆ ಬಂದಿತ್ತು. ಅಲ್ಲಿಗೆ ಹೋಗಿ, ಅವರ ರಾಜಧಾನಿಯಲ್ಲಿ ಉಗ್ರರು ನಡೆಸುತ್ತಿದ್ದ ಅಟ್ಟಹಾಸದಿಂದ ಪಾರಾಗಿ ಹಿಂದಿರುಗಿದ ಕತೆ ಓದಿದಾಗ ಮೈಝುಂ ಎನ್ನಿಸುತ್ತದೆ. ಅದಕ್ಕಿಂತ ಹೆಚ್ಚಾಗಿ, ಎ ಕೆ ೪೭ರ ದಾಳಿ ತಡೆಯುವ ಗುಂಡು ನಿರೋಧಕ ಜ್ಯಾಕೆಟ್‌ಗಳನ್ನು ನಮ್ಮಲ್ಲೇ ಟಾಟಾ ಸಂಸ್ಥೆಯೊಂದು ನಿರ್ಮಿಸುತ್ತಿದೆ ಎಂಬ ವಿಚಾರ ನಮ್ಮನ್ನು ಆಶ್ಚರ್ಯಚಕಿತರನ್ನಾಗಿಸುತ್ತದೆ.

ಎ ಕೆ ೪೭ರ ನಿರ್ಮಾತೃ ರಷ್ಯಾದ ವಿಜ್ಞಾನಿ ಮೈಕೆಲ್ ಕಲಾಷ್ನಿಕೋವ್ ಅವರನ್ನು ದೆಹಲಿಯಲ್ಲಿ ಭೇಟಿಯಾದ ಬಗ್ಗೆ ವಿವರಿಸಿದ್ದಾರೆ. ಲೇಖನದ ಕೊನೆಗೆ ಮೂಡಿರುವ ವಿಷಾದದ ಛಾಯೆ, ಜೀವ ತೆಗೆಯುವ ಸಾಧನಗಳ ಬಗ್ಗೆ, ಅವುಗಳ ದುರುಪಯೋಗಗಳ ಬಗ್ಗೆ ಬರೆದಿರುವುದು ನಮ್ಮನ್ನು ಚಿಂತನೆಗೆ ಹಚ್ಚುತ್ತದೆ.

ಒಮ್ಮೆ ಇಸ್ರೋದಲ್ಲಿ ಕೆಲಸಕ್ಕೆ ಹಾಜರಾಗದ ಒಬ್ಬ ನೌಕರನಿಗೆ ನೋಟಿಸ್ ಕೊಟ್ಟು, ನೌಕರರ ಯೂನಿಯನ್ ಇವರನ್ನು ಘೇರಾವ್ ಮಾಡಿ "ಸತ್ಯ ಅವರು ಕರ್ನಾಟಕದಿಂದ ಬಂದು ಮಲಯಾಳಿಗಳ ಮೇಲೆ ಇಲ್ಲಸಲ್ಲದ ಆರೋಪ ಅಪವಾದ ಹೊರಿಸುತ್ತಿದ್ದಾರೆ ಇವರಿಗೆ ಕೇರಳದವರನ್ನು ಕಂಡರೆ ಆಗುವುದಿಲ್ಲ" ಎಂದು ದೂರು ಕೊಟ್ಟಿದ್ದರು.

ಈ ಪ್ರಕರಣವು ನೇರವಾದ ಕೆಲಸಕ್ಕೆ ರಾಜಕೀಯ ಲೇಪನ ಮಾಡುವ ಕಲೆಯ ಪ್ರದರ್ಶನದಂತಿದೆ. ಕೇರಳದ ಸಂಸದ ವಯಲಾರ್ ರವಿ ಅವರು "ಇಸ್ರೋ ಸಂಸ್ಥೆಯಲ್ಲಿ ಕನ್ನಡದವರ ದಬ್ಬಾಳಿಕೆ ನಿಜವೇ?" ಎಂದು ಲೋಕಸಭೆಯಲ್ಲಿ ಪ್ರಶ್ನಿಸುವವರೆಗೂ ಇದು ಹೋಗಿತ್ತು. ನಮ್ಮ ನಾಯಕರಿಗೆ ಯಾರನ್ನು, ಯಾವುದನ್ನು ಪೋಷಿಸಬೇಕು, ದಮನ ಮಾಡಬೇಕು- ಎನ್ನುವುದು ತಿಳಿಯ ದಿರುವುದು, ತಿಳಿದಿದ್ದರೂ ಕುರುಡ-ಕಿವುಡರಂತೆ ವರ್ತಿಸುವುದು ನಮ್ಮ ಅವ್ಯವಸ್ಥೆಗೆ ಹಿಡಿದ ಕೈಗನ್ನಡಿಯಂತೆ ಭಾಸವಾಗುತ್ತದೆ.

ಇಸ್ರೋ ಸಂಸ್ಥೆಯಲ್ಲಿ ತಾಂತ್ರಿಕ ನಿರ್ದೇಶಕರಾಗಿ ತಿರುವನಂತಪುರದಲ್ಲಿದ್ದ ಶ್ರೀ ಸಿ. ಆರ್. ಸತ್ಯ ಅವರಿಗೆ ಒಮ್ಮೆ ಪ್ರೊ. ರಾವ್ ಅವರಿಂದ ಕರೆ ಬಂತು. ಆಗ ಅವರು ಕೆಲಸ ಮಾಡುತ್ತಿದ್ದ ತಾಂತ್ರಿಕ ಕ್ಷೇತ್ರ: ಸಮ್ಮಿಶ್ರ ವಸ್ತುಗಳು (ಕಂಪೋಸಿಟ್ಸ್). ಇವು ಲೋಹಗಳಿಗಿಂತಲೂ ಉತ್ಕೃಷ್ಟವಾದ ಅನೇಕ ಉಪಯೋಗಕರ ಗುಣಲಕ್ಷಣಗಳನ್ನು ಹೊಂದಿರುತ್ತವೆ. ಈ ಸಮ್ಮಿಶ್ರ ವಸ್ತುಗಳನ್ನು ದೃಢೀಕರಿಸಿದ ಪ್ಲಾಸ್ಟಿಕ್ ಎಂದೂ ಹೇಳಬಹುದು. ಇವನ್ನು ಅಳವಡಿಸಿಕೊಂಡು ವಿನ್ಯಾಸ ಮಾಡಿ ನಿರ್ಮಿಸಿದ ಉಪಕರಣಗಳು ಈಗ ಬಾಹ್ಯಾಕಾಶ, ರಕ್ಷಣಾ ಕ್ಷೇತ್ರ ಹಾಗೂ ಅನೇಕ ಕೈಗಾರಿಕೆಗಳಲ್ಲಿ ಮತ್ತು ದಿನನಿತ್ಯ ಬಳಕೆಯಲ್ಲಿ ಹೆಚ್ಚು ಹೆಚ್ಚಾಗಿ ಕಂಡುಬರುತ್ತಿವೆ.

ಈ ತಂತ್ರಜ್ಞಾನದ ಬಗ್ಗೆ ಬೆಂಗಳೂರಿಗೆ ಬಂದು ಶ್ರೀ ರತನ್ ಟಾಟಾ ಅವರಿಗೆ ಸುಮಾರು ಒಂದು ಘಂಟೆ ಅವಧಿಯಲ್ಲಿ ತಿಳಿಸಿಕೊಡಿ ಎಂದು ಪ್ರೊ. ರಾವ್ ಅವರು ಆದೇಶಿಸಿದರು. ಅನಂತರ ನಡೆದದ್ದನ್ನು ಶ್ರೀ ಸತ್ಯ ಅವರು ಹೀಗೆ ದಾಖಲಿಸುತ್ತಾರೆ :

'ಹಾಗಾಗಿ ಒಂದು ದಿನ ಬೆಂಗಳೂರಿನ ಬಾಹ್ಯಾಕಾಶ ಕೇಂದ್ರದ ಮುಖ್ಯ ಕಛೇರಿಯಲ್ಲಿ ಶ್ರೀ ರತನ್ ಟಾಟಾ ಅವರನ್ನು ಮುಖಾಮುಖಿ ಭೇಟಿಮಾಡಿ, ಅವರೊಡನೆ ವಿಚಾರ ವಿನಿಮಯ ಮಾಡಿದ್ದು ನನ್ನ ಸುಯೋಗವೇ ಎನ್ನಬೇಕು. ನಾನು ಹೇಳಿದ್ದನ್ನೆಲ್ಲಾ ಬಹು ಆಸಕ್ತಿಯಿಂದ ಕೇಳಿ, 'ಇದು ಯೋಚನೆ ಮಾಡಬೇಕಾದ ವಿಷಯ. ನಿಮ್ಮಿಂದ ನನಗೆ ಇನ್ನೂ ಹೆಚ್ಚು ಸಲಹೆಗಳು ಬೇಕು ಎಂದರು".

ಇಸ್ರೋ ಒಪ್ಪಿಗೆ ಪಡೆದು, ತಮ್ಮ ಕೆಲಸದ ಜೊತೆಗೇ ಒಂದು ವರ್ಷ ಕಾಲ ಶ್ರೀ ಟಾಟಾ ಅವರಿಗೆ ಶ್ರೀ ಸಿ. ಆರ್. ಸತ್ಯ ಅವರು ತಾಂತ್ರಿಕ ಸಲಹೆಗಾರರಾಗಿದ್ದರು. ಅದರ ಪರಿಣಾಮವಾಗಿ ಜಿಗಣಿಯಲ್ಲಿ ಟಾಟಾ ಅಡ್ವಾನ್ಸ್ಡ್ ಮೆಟೀರಿಯಲ್ ಸಂಸ್ಥೆ ಪ್ರಾರಂಭವಾಯಿತು.

ಅದನ್ನು ಮುನ್ನಡೆಸಲು ಶ್ರೀ ರತನ್ ಟಾಟಾ ಅವರ ಆಹ್ವಾನದಂತೆ ಶ್ರೀ ಸತ್ಯ ಅವರು ಟಾಟಾ ಅಡ್ವಾನ್ಸ್ಡ್ ಮೆಟೀರಿಯಲ್ ಸಂಸ್ಥೆಗೆ ತಾಂತ್ರಿಕ ನಿರ್ದೇಶಕರಾಗಿ ಸೇರಿ 2009ರಲ್ಲಿ ನಿವೃತ್ತರಾದರು. ಈಗ ಈ ಟಾಟಾ ಸಂಸ್ಥೆಯು ಬೃಹತ್ ಪ್ರಮಾಣದ ಉದ್ಯಮವಾಗಿದೆ. ರಕ್ಷಣೆ ಮತ್ತು ವೈಮಾನಿಕ ಕ್ಷೇತ್ರದಲ್ಲಿ ದೊಡ್ಡ ಹೆಸರುಗಳಿಸಿದೆ.

ಇವುಗಳ ಜೊತೆಗೆ ಅವರ ಸಂಪರ್ಕಕ್ಕೆ ಬಂದ ಅನೇಕ ವ್ಯಕ್ತಿಗಳ ಪರಿಚಯ, ಅವರೊಡನೆ ಕಳೆದ ರಸಮಯ ಸನ್ನಿವೇಶಗಳು, ಅವರು ತಿರುವನಂತಪುರದ ಅನಂತಶಯನ ದೇವಸ್ಥಾನದ ನಿರ್ಮಾಣದ ಬಗ್ಗೆ ಮಾಡಿದ ಸಂಶೋಧನೆ, ತಿರುವನಂತಪುರದಲ್ಲಿ ಬೆಳೆಸಿದ ಕರ್ನಾಟಕ ಅಸೋಸಿಯೇಷನ್, ಅದು ಮಾಡಿದ ಸ್ತುತ್ಯ ಕಾರ್ಯಗಳು, ಪುರಂದರದಾಸರ ಐವತ್ತು ಕೃತಿಗಳನ್ನು ಮಲೆಯಾಳಿ ಲಿಪಿಯಲ್ಲಿ ಸಾಹಿತ್ಯ ಮತ್ತು ಸ್ವರಸಂಯೋಜನೆಗಳ ಸಮೇತ ಮುದ್ರಿಸಿ ಅಲ್ಲಿಯ ಸಂಗೀತಗಾರರಿಗೆ ಹಂಚಿದ್ದು, ಹಾಗೆಯೇ ಮಹಾರಾಜ ಸ್ವಾತಿ ತಿರುನಾಳ್ ಅವರ ಐವತ್ತು ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿ ಪ್ರಕಟಿಸಿದ್ದು - ಈ ತರಹದ ಅನೇಕ ಸಾಂಸ್ಕೃತಿಕ ಕೆಲಸಗಳ ದಾಖಲೆ ನಮ್ಮನ್ನು ಆಶ್ಚರ್ಯಚಕಿತರನ್ನಾಗಿಸುತ್ತವೆ.

ಶ್ರೀ ಸತ್ಯ ಅವರ ಲೇಖನದಲ್ಲಿ ನವಿರಾದ ಹಾಸ್ಯ ಹಾಸುಹೊಕ್ಕಾಗಿರುತ್ತದೆ. ಅಂಥ ಒಂದು ಪ್ರಸಂಗವನ್ನು ನಿಮ್ಮ ಮುಂದೆ ತೆರೆದಿಡುತ್ತಿದ್ದೇನೆ. ಇದು ಬ್ಯಾಂಕಿಗೆ ಸಂಬಂಧಿಸಿದ್ದರಿಂದ ಈ ವೇದಿಕೆಯ ಸದಸ್ಯರಿಗೆ ಆಪ್ಯಾಯಮಾನ ಆಗುವುದರಲ್ಲಿ ಸಂಶಯವಿಲ್ಲ. ಇದು ಶ್ರೀ ಸತ್ಯ ಅವರು ಬ್ರಹ್ಮಚಾರಿಯಾಗಿದ್ದಾಗ ನಡೆದ ಘಟನೆ!

"ಒಮ್ಮೆ ಸಿಂಡಿಕೇಟ್ ಬ್ಯಾಂಕ್ ಮಹಿಳಾ ಸಿಬ್ಬಂದಿಗಳಿಗೆಂದೇ ಮೀಸಲಾದ ಒಂದು ಶಾಖೆಯನ್ನು ತಿರುವನಂತಪುರದಲ್ಲಿ ತೆರೆಯಿತು. ಅಲ್ಲಿದ್ದ ಮಹಿಳೆಯರೆಲ್ಲಾ ನಮ್ಮ ಕಣ್ಣಿಗೆ ವಿಶ್ವಸುಂದರಿಯರ ಹಾಗೇ ಕಂಡರು. ಅದರಲ್ಲೂ ಕ್ಯಾಷಿಯರ್ ಅಂತೂ ಎಲ್ಲರ ಕಣ್ಣುಗಳನ್ನೂ, ಮನವನ್ನೂ ಸೆಳೆಯುವಂತಹ ಸ್ಫುರದ್ರೂಪಿಯಾಗಿದ್ದಳು. ಇದಕ್ಕೆ ನಮ್ಮ ಪ್ರತಿಕ್ರಿಯೆ? ಇನ್ಯಾವುದೋ ಬ್ಯಾಂಕಿನಲ್ಲಿದ್ದ ನಮ್ಮ ಜುಜುಬಿ ಠೇವಣಿಗಳನ್ನು ಈ ಬ್ಯಾಂಕಿಗೆ ರವಾನಿಸಿದ್ದು ಮೊದಲನೇ ಹಂತ. ಎರಡನೇ ಹಂತದಲ್ಲಿ ಶನಿವಾರಗಳು ನಮಗೆ ರಜಾ ದಿನಗಳಾದುದ್ದರಿಂದ ಸಾವಧಾನವಾಗಿ ಸ್ವಲ್ಪ ಸ್ವಲ್ಪ ದುಡ್ಡು ಎಳೆಯುವುದು. ಇನ್ನೂರು ರೂಪಾಯಿ ಬೇಕಾದರೆ ಎರಡು ಬಾರಿ ನೂರು ರೂಪಾಯಿ ಚೆಕ್‌ಗಳನ್ನು ಪಾವತಿಸೋದು. ಹೀಗಾಗಿ ಕ್ಯಾಷಿಯರ್ ಮುಂದೆ ಎರಡರಷ್ಟು ಹೊತ್ತು ಕಳೆಯಬಹುದಲ್ಲಾ! ನನ್ನ ಸ್ನೇಹಿತನೊಬ್ಬ ಈ ಪ್ರಕ್ರಿಯೆಯಲ್ಲಿ ಮೂರನೇ ಹಂತಕ್ಕೂ ಇಳಿದ. ಅದು: ಕ್ಯಾಷಿಯರ್ ಹತ್ತಿರ ಇನ್ನೊಮ್ಮೆ ಹೋಗಿ ಒಂದು ನೂರು ರೂಪಾಯಿಗೆ ಚಿಲ್ಲರೆ ಕೇಳುವುದು!"

ಡಾ.ಸತ್ಯ ಅವರ ಬಗ್ಗೆ ಅನೇಕರಿಗೆ ಗೊತ್ತಿಲ್ಲದೆ ಇರುವ ಎರಡು ವಿಚಾರಗಳಿವೆ. ಮೊದಲನೆಯದು ಹಾಸ್ಯೋತ್ಸವಗಳಲ್ಲಿ ಕೇಳಿ ಬರುವ

ಆಚೆ ಮನೆ ಸುಬ್ಬಮ್ಮಂಗೆ
ಏಕಾದಶಿ ಉಪ್ವಾಸ
ಎಲ್ಲೋ ಸ್ವಲ್ಪ ತಿಂತಾರ್ ಅಷ್ಟೆ
ಉಪ್ಪಿಟ್ಟು - ಅವಲಕ್ಕಿ - ಪಾಯ್ಸ
ಮೂರೋ ನಾಕೋ ಬಾಳೇಹಣ್ಣು
ಸ್ವಲ್ಪ ಚಕ್ಕುಲಿ ಕೋಡ್ ಬಳೆ
ಗಂಟೆಗೆರಡು ಸೀಬೆ ಹಣ್ಣು
ಆಗಾಗ ಒಂದೊಂದ್ ಕಿತ್ತಳೆ - ಈ ಹಾಸ್ಯ ಕವಿತೆಯ ಕರ್ತೃ ಶ್ರೀ ಸಿ. ಆರ್. ಸತ್ಯ ಎಂಬುದು ಅನೇಕರಿಗೆ ಗೊತ್ತಿಲ್ಲ.

ನಮ್ಮಲ್ಲಿ ಅನೇಕರಿಗೆ ತಿಳಿಯದ ಮತ್ತೊಂದು ವಿಷಯವೆಂದರೆ ಡಾ. ಸತ್ಯ ಅವರು ಕನ್ನಡಿಗರ ಪ್ರಾತಃಸ್ಮರಣೀಯರಾದ ಪ್ರೊ ಎ. ಆರ್.ಕೃಷ್ಣಶಾಸ್ತ್ರಿಗಳ ಮೊಮ್ಮಗ. ಪ್ರೊ. ಎ.ಆರ್. ಕೃ. ಅವರ ಸಮಸ್ತ ಕೃತಿಗಳನ್ನು ಅಂತರ್ಜಾಲದಲ್ಲಿ ಉಚಿತವಾಗಿ ಸಿಕ್ಕುವಂತೆ ಮಾಡಿರುವುದು ಶ್ರೀ ಸತ್ಯ ಅವರ ಕನ್ನಡ ಪ್ರೀತಿಗೆ ನಿದರ್ಶನ. ಇಲ್ಲಿಯವರೆಗೆ ಪ್ರೊ.ಎ.ಆರ್. ಕೃ. ಅವರ ಕೃತಿಗಳನ್ನು ೫೦೦೦ಕ್ಕೂ ಹೆಚ್ಚು ಬಾರಿ ಡೌನ್ ಲೋಡ್ ಮಾಡಿಕೊಳ್ಳಲಾಗಿದೆ ಎಂದರೆ ಆ ಪುಸ್ತಕಗಳಿಗೆ ಇಂದಿಗೂ ಇರುವ ಬೇಡಿಕೆಯು ಮನವರಿಕೆಯಾಗುತ್ತದೆ.

(೧೪೦ ಪುಟಗಳ ತ್ರಿಮುಖಿ ಪುಸ್ತಕದಲ್ಲಿ ೩೨ ಚಿತ್ರಗಳಿವೆ ಇದರ ಬೆಲೆ ೧೯೯/- ರೂಪಾಯಿಗಳು.
ಇದನ್ನು Bichi ಪ್ರಕಾಶನದವರು ಹೊರತಂದಿದ್ದಾರೆ)

ನನ್ನ ಬೃಹತ್ ಬೆಂಗಳೂರು
ಮಹಾನಗರ ಮನೆಯ ಕಾರ್ಮಿಕಳು

ಗೇಟಿಗೆ ಮೂರು ಬಾರಿ ಕಟಕಟಿಸಿದ ಶಬ್ದವಾದರೆ
ಬಳೆಗಳ ಸದ್ದಿನೊಂದಿಗೆ ಹಾಲಿನ ಚೀಲ ಇಳಿಸಿದರೆ
ಪಕ್ಕದ ಮನೆಯ ಕುರೋ ಎಂಬ ನಾಯಿ ಜಿಗಿದರೆ
ನಿರಾಳ ದಿನದ ಆರಂಭ, ತಿಪ್ಪಮ್ಮ ಕೆಲಸಕ್ಕೆ ಬಂದರೆ..

ಓಣಿಯ ಹಿಂದಿನ ನಲ್ಲಿಯಿಂದ ಗಿಡಗಳಿಗೆ ನೀರುಣಿಸಿ
ಬಾಗಿಲ ಮುಂದಿನ ಮೆಟ್ಟಿಲುಸಾಲು ತೊಳೆದು ನಿರುಕಿಸಿ
ಹೂ ಕಟ್ಟಲೋ ಮನೆ ಒರೆಸಲೋ ಎನ್ನುತಲೇ ಕೈಯೊರೆಸಿ
ಹಿತ್ತಲ ತನ್ನ ಕಾರ್ಯಪಟ್ಟಿಯ ಅವಲೋಕಿಸುವ ಚೂಟಿ..

ಏನು ಹೇಳಿದರೂ ಈಗಲೇ ಮಾಡುವೆ ಎನ್ನುವಳು ಎಲ್ಲಕ್ಕೂ,
ಇಲ್ಲಿ ಕೇಳಿ, ಅಲ್ಲಿ ಬಿಟ್ಟು ಮಾಡುವುದು ಮತ್ತದೇ ಹಿಕ್ಮತ್ತು,
ಆತುರಕ್ಹುಟ್ಟಿದವಳಂತೆ ಹನ್ನೊಂದು ಕುದುರೆ ತುರ್ತು
ಸೊರ್ರ.ನೆ ಕಾಫಿ ಬೆರೆಸುತ್ತಲೇ ಕುಡಿಯಲು ಹಿಕಮತ್ತು..

ರಣಕಹಳೆ ಸದ್ದಿಗೆ ದಂಡೆದ್ದಂತೆ ಶೂರಾಧಿಶೂರಳು,
ಸೆರಗ ಸಿಕ್ಕಿಸಿ ಕಸಬರಿಗೆ ಎತ್ತಿದರೆ ಕುರುಡಳು
ಇರುವ ಇಪ್ಪತ್ತು ಮೂಲೆ ಕಸ ಅದಲು ಬದಲು
ಸೋರುವ ನೀರಿನ ಮಾಪಿನಿಂದೊರೆಸಲು ವೈರಿ, ನೆಂಟನು..

ಕಾಲರ್ ತಿಕ್ಕಿದರೆ ಜೇಬು, ಅಂಚು ಉಜ್ಜಿದರೆ ಸೆರಗು,
ಉಳಿಸಿಕೊಳ್ಳುವುದು ಕರೆ, ಹುಷ್ಕು.. ಉಸ್ಸು ದಮ್ಮೆಲ್ಲ ಟುಸ್ಸು
ತಿಂಗಳಿಗೆರಡು ಪ್ರಿಲ್ ಬಾಟಲು, ವಾರಕ್ಕೊಂದು ಸೋಪು,
ಪಾತ್ರೆಗಳದ್ದು ಮಾತ್ರ ಹ್ಯಾಪುಮೋರೆ, ಉಳಿದು ಜಿಡ್ಡು..

ಬೇಡದ ವಸ್ತುಗಳ ವಿಲೇವಾರಿ ಅವಳ ಜವಾಬ್ದಾರಿ
ಬೇಕಿದ್ದನ್ನಿಟ್ಟುಕೊಂಡು, ಕಾಸು ಮಾಡುವಳು ರದ್ದಿಯಲ್ಲಿ
ಮಾತ್ರೆಗಾಗಿ ಮೊದಲು ನನ್ನ ಕೇಳಿ, ವೈದ್ಯರ ಕಾಣುವಳು
ಸಂಸಾರ ತಾಪತ್ರಯಕೆ ಅಣ್ಣನೆಂದಿವರ ನಂಬುವಳು..

ಶುದ್ಧ ಅವಿವೇಕಿಯ ದುಡ್ಡು ದಂಡಮಾಡಿ ಸಾಕಿದ್ದೇನೆ ಎಂದಿರಾ?!
ಮುಗ್ಧ ಮನಸಿಂದ ದುಡಿವ ಅವಳೇ, ಅವಳ ಸಂಸಾರದಾಧಾರ
'ನಮ್ಮಕ್ಕ' ಎಂದು ಹಬ್ಬ, ನೆಂಟರು, ಕಾಯಿಲೆ ಎಲ್ಲಕ್ಕಾಗುವಳು
ಅತ್ತೆ ತೀರಿದಾಗಂತೂ ಕಂಗಾಲಾದ ನನಗೆ ಸಖಿಯಾದಳು..

ಪಿಎಫ್ಫು, ಬೋನಸಿಲ್ಲದೆ ಸಂಬಳಕೆ ಬರುವ ಕಾರ್ಮಿಕಳು,
ದುಡಿದೇ ತಿನ್ನುವೆ ಎನ್ನುವ ಸ್ವಾಭಿಮಾನಿ ಭಾರತೀಯ ಪೌರಳು..

- **ರಾಧಿಕಾ**

ಹರಟೆ

ಯಮುನಟಿ ಅಂದ್ರೆ ಏನು ಅಮ್ಮಾವ್ರೇ

- ನಾಗರತ್ನ ಚಂದ್ರಶೇಖರ್

ಈ ಪ್ರಶ್ನೆ ಕೇಳಿದ್ದು ನಮ್ಮ ಮನೆ ಕೆಲಸ ಮಾಡೋ ಕಮಲಿ. ಯಮುನಟಿ ಅನ್ನೋ ಪದವೇ ವಿಚಿತ್ರವಾಗಿತ್ತು. ಅದನ್ನು ಈ ಹಿಂದೆ ನಾನು ಕೇಳಿದ ನೆನಪಿಲ್ಲ. ಕಮಲಿಗೆ ಅದರ ಅರ್ಥ ಹೇಳಬೇಕು ಅಂದ್ರೆ ಯಾವ ಡಿಕ್ಷನರಿ ತೆಗೆದು ನೋಡುವುದು ಅಂದುಕೊಳ್ಳುತ್ತಾ, "ಅಲ್ವೆ ಕಮಲಿ, ಯಾರು ಹೇಳಿದರು, ಈ ಪದ ನಿನಗೆ ಎಲ್ಲಿ ಸಿಕ್ಕಿತು" ಎಂದೆ ಕುತೂಹಲದಿಂದ.

"ಅದೇಮ್ಮೋರೆ, ನೀವು ಆಗಾಗ ಟಿವಿ ನೋಡುವಾಗ ನಾನು ಕೇಳಿಸಿಕೊಳ್ತಿದ್ದೆ. ಈ ಕರೋನ ಬರದೇ ಇರಬೇಕಾದರೆ ಅದೇನೋ ಯಮುನಾಟಿ ಜಾಸ್ತಿ ಮಾಡಿಕೊಳ್ಳಬೇಕು ಅಂತ ಅದೆಷ್ಟು ಜನ ಹೇಳ್ತಾ ಇದ್ರಲ್ವಾ ಅದು ಜಾಸ್ತಿ ಮಾಡ್ಕೊಂಡ್ರೆ ಕರೋನ ಬರಲ್ವವಂತೆ, ಹೌದಾಮ್ಮೋರೆ?"

ಅವಳ ವಿಶ್ಲೇಷಣೆ ಮುಗಿಯುವ ಮುನ್ನವೇ ನನಗೆ ಯಮುನಟಿಯ ಅರ್ಥ ಹೊಳೆಯಿತು. ನನ್ನ ನಗು ಹೊಟ್ಟೆ ತುಂಬಿ ಮನೆತುಂಬಾ ಹರಡಿತ್ತು.

ಕಮಲಿಗೆ ಅದನ್ನು ಹೇಗೆ ಬಿಡಿಸಿ ಹೇಳುವುದು ಎಂದು ಯೋಚಿಸುವಷ್ಟರಲ್ಲಿ ಕೋಣೆಯೊಳಗೆ ಓದಿಕೊಳ್ಳುತ್ತಿದ್ದ ಚಿಕ್ಕಮಗಳು ಜುಮ್ಮಿ ಅರ್ಥಾತ್ ಜಮುನ ಅವಳ ಐ ಪ್ಯಾಡ್ ಸಮೇತ ನಗು ಕೇಳಿ ಹೊರಬಂದಳು. ಪೆಚ್ಚಾಗಿ ನಿಂತಿದ್ದ ಕಮಲಿಯನ್ನೂ ನನ್ನನ್ನೂ ನೋಡುತ್ತಿರುವಾಗಲೇ, "ಏ ಜುಮ್ಮಿ, ಕಮಲಿಗೆ ಇಮ್ಯುನಿಟಿ ಅಂದರೆ ಏನು ಅಂತ ಹೇಳು ನೋಡೋಣ" ಅಂದೆ.

"ಏನಮ್ಮ ನೀನು, ಇನ್ನರ್ಧ ಗಂಟೆಯಲ್ಲಿ ಆನ್ಲೈನ್ ಕ್ಲಾಸ್ ಶುರುವಾಗುತ್ತೆ, ನನಗೆ ಟೈಮಿಲ್ಲ, ಇಷ್ಟಕ್ಕೂ ಕಮಲಿಗೆ ಏಕೆ ಬೇಕು ಅದರ ಅರ್ಥ".

"ಅಲ್ವೇ ಪುಟ್ಟಿ, ಅವಳು ನಿನ್ನ ಹಾಗೆ ಸ್ಕೂಲಿಗೆ ಹೋಗಿ ಇಂಗ್ಲಿಷ್ ಕಲಿತಿದ್ದರೆ ಅರ್ಥ ಆಗ್ತಿತ್ತು. ಪಾಪ ಅವಳ ಅಪ್ಪ, ಅಮ್ಮ, ಇಬ್ಬರೂ ಗಾರೆ ಕೆಲಸಕ್ಕೆ ಹೋಗ್ತಾರೆ ಹೊಟ್ಟೆ ತುಂಬಿಸಿಕೊಳ್ಳೋಕೆ. ಇವಳೂ, ಇವಳ ತಂಗಿ, ನಾಲ್ಕಾರು ಮನೆಕೆಲಸ ಮಾಡಿಕೊಂಡು ಅಷ್ಟುಇಷ್ಟು ದುಡ್ಡು ಕೂಡಿಟ್ಟುಕೊಳ್ಳುತ್ತಿದ್ದಾರೆ. ಈ ಕರೋನ ಇಲ್ಲದ್ದಿದ್ದರೆ ಇಷ್ಟೊತ್ತಿಗೆ ಕಮಲಿಗೆ ಮದುವೆಯಾಗಿ ಸಂಸಾರ ಶುರುವಾಗಿ ಮಕ್ಕಳು ಆಗಿರುತ್ತಿತ್ತು, ಅಲ್ವೇನೇ ಕಮಲಿ?"

"ಅಯ್ಯೋ ಮದುವೆಯಲ್ಲ ಈಗ್ಲೇ ಬೇಡ ಅಮ್ಮಾವ್ರೇ ನಾನು ಹುಂ ಅಂದ್ರೆ ಊರಲ್ಲಿ ಸೋದರಮಾವನಿಗೆ ನನ್ನ ಕಟ್ಟೋಕೆ ನಮ್ಮವ್ವ ತಯಾರಾಗವಳೆ. ಅವನ ಲಗ್ನ ಆದರೆ ಬೆರಣಿ ತಟ್ಟಕೋಂತ ಎಮ್ಮೆ ಮೇಯಿಸ್ಕೋಂಡು ಹಳ್ಳೀಲೇ ಇರಬೇಕು ಅಷ್ಟೇ".

"ಹೌದೆ ಕಮಲಿ, ಇಷ್ಟು ಬೇಗ ನೀನು ಮದುವೆ ಆಗಬೇಡ. ಚೈಲ್ಡ್ ಮ್ಯಾರೇಜ್ ಆಗುತ್ತೆ .ಮೊದಲು ಓದಿ ಬರೆಯೋದು ಕಲಿತುಕೋ".
ಜುಮಿಯ ಸಲಹೆಗೆ ಕಮಲಿ ನಾಚಿದ್ದಳು.

"ಜುಮ್ಮಿ, ಅವಳು ಇನ್ನೂ ಮಗು ಅಲ್ವೆ, ಅವಳಿಗೆ ಈಗಾಗಲೇ ಹತ್ತೊಂಬತ್ತು ವರ್ಷ ಆಗಿದೆ. ಪೀಚು ಮೈಕಟ್ಟು ಅಷ್ಟೇ. ಆರೈಕೆನೂ ಕಡಿಮೆ".

"ನೋಡು ಕಮಲಿ, ದ್ರಾಕ್ಷಿ, ಗೋಡಂಬಿ, ಬಾದಾಮಿ, ಪಿಸ್ತಾ ಅಂತ ನಮ್ಮಮ್ಮ ಅದೇನೇನೋ ಸೇರಿಸಿ ಉಂಡೆ ಮಾಡಿ ನನಗೆ ದಿನಾ ತಿನ್ನೋಕೆ ಕೊಡ್ತಾರಲ್ಲ, ಅದರ ಜೊತೆಗೆ ಹಣ್ಣುಗಳು ತರಕಾರಿ ಇದನ್ನೆಲ್ಲ ಚೆನ್ನಾಗಿ ತಿನ್ತಾ ಇದ್ದರೆ ಕರೋನವೈರಸ್ ಎದುರಿಸೋ ಅಷ್ಟು ಶಕ್ತಿ ಬರುತ್ತೆ. ಅದನ್ನೇ ಇಮ್ಯೂನಿಟಿ ಅಂತಾರೆ". ಜುಮಿಯ ವಿವರಣೆಯನ್ನು ಕಣ್ಣು ಬಾಯಿ ಬಿಟ್ಟುಕೊಂಡು ಕೇಳುತ್ತಿದ್ದಳು ಕಮಲಿ.

"ಅಯ್ಯೋ ಅಮ್ಮೋರೆ, ಅದನ್ನೆಲ್ಲ ನಮ್ಮಂಥವರು ತಿನ್ನಕ್ ಆಯ್ತದಾ ಹೇಳಿ? ರಾಗಿ ಮುದ್ದೆ, ಸೊಪ್ಪಿನ ಸಾರು ದಿನಾ ತಿನ್ತಾ ಇದ್ದರೆ ಯಾವ ಕರೋನಾನೂ ಬರಾಕಿಲ್ಲ ಅಂತಾನೆ ನಮ್ಮಪ್ಪ".

ಕಮಲಿಯ ಮಾತುಗಳನ್ನು ಕೇಳುತ್ತಾ ನನಗೆ ನನ್ನ ಬಾಲ್ಯದ ನೆನಪಾಯಿತು. ಏಳು ಜನ ಮಕ್ಕಳಿದ್ದ ದೊಡ್ಡ ಮನೆಯಲ್ಲಿ ಹುಟ್ಟಿದ ನಮಗೆ ದಿನಾ ಬಾದಾಮಿ ಗೋಡಂಬಿ ದ್ರಾಕ್ಷಿಯನ್ನು ಅಮ್ಮ ಕೊಡುತ್ತಲೇ ಇರಲಿಲ್ಲ. ಹಾಲು, ತುಪ್ಪಕ್ಕೆ ಕೊರತೆ ಇಲ್ಲದಂತೆ ಬೆಳೆಯುತ್ತಿದ್ದ ನಮಗೆ ಗೋಡಂಬಿ ದ್ರಾಕ್ಷಿಗಳನ್ನು ಹಬ್ಬಗಳಲ್ಲಿ ಅಮ್ಮ ಮಾಡುತ್ತಿದ್ದ ಲಡ್ಡು, ರವೆಉಂಡೆ, ಬರ್ಫಿ ಕರ್ಜಿಕಾಯಿಗಳನ್ನು ತಿನ್ನುವುದು ಬಾಯಿಗೆ ಸಿಕ್ಕಿದಾಗ ಅದೆಷ್ಟು ಖುಷಿಯಾಗುತ್ತಿತ್ತು! ಈಗಿನ ಕಾಲಕ್ಕೆ ಮಕ್ಕಳಿಗೆ ಬಲವಂತವಾಗಿ ತಿನ್ನಿಸುವ, ತಿನ್ನಲು ಒತ್ತಾಯ ಮಾಡುವ ತಂದೆ-ತಾಯಿಗಳು ಸಾಕಷ್ಟು ಇದ್ದಾರೆ. ಹಾಲು ತುಪ್ಪ ಎಂದರೆ ಹಾರಿಬೀಳುವ, ದೂರ ಸರಿಯುವ ಡಯಟ್ ಸೌಂದರ್ಯಕ್ಕೆ ಜೋತುಬಿದ್ದ ಈಗಿನ ತರುಣಿಯರಿಗೆ ವಿದೇಶಗಳಿಂದ ಆಮದಾಗುವ ಹಣ್ಣುಗಳೆಂದರೆ ಮಾತ್ರ ಇಷ್ಟ. ಶಾಲೆಗೆ ಹೋಗುವ ದಾರಿಯಲ್ಲಿ ನಾವು ಸಿಬೇಕಾಯಿ ನೇರಳೆಹಣ್ಣು ಕಚ್ಚಿಕೊಂಡು ತಿಂತಾ ಆಗೊಮ್ಮೆ-ಈಗೊಮ್ಮೆ ಮನೆಯಲ್ಲಿ ಬಾಳೆ, ಪರಂಗಿ ಇಂತಹ ಹಣ್ಣುಗಳನ್ನು ಹಂಚಿಕೊಂಡು ತಿಂದ ನಮಗೆ ಇಮ್ಯುನಿಟಿ ಪಾಠವೇ ಗೊತ್ತಿರಲಿಲ್ಲ

ನಾನಂತೂ ಈ ಒಣಹಣ್ಣು ಬೀಜಗಳನ್ನು ನಟ್ಟು ಬೋಲ್ಟುಗಳೆಂದು ತಮಾಷೆಯಾಗಿ ಹೆಸರಿಸುತ್ತೇನೆ. ಅಡಿಗೆಮನೆಯ ದಿನನಿತ್ಯದ ಸಾಮಗ್ರಿಯ ಜೊತೆ ಇವುಗಳನ್ನು ಸೀಸೆಗಳಲ್ಲಿ ಸಾಕಷ್ಟು ಸಂಗ್ರಹಿಸಿಟ್ಟು ಮಕ್ಕಳಿಗೆ ತಿನ್ನುವಂತೆ ಒತ್ತಾಯ ಮಾಡುವುದನ್ನು ಕಂಡಾಗಲೆಲ್ಲ ಹಲಸಿನ ಬೀಜಗಳನ್ನು ನೀರೊಲೆಯ ಕೆಂಡದ ಮಧ್ಯ ಹಾಕಿ ಸುಟ್ಟು ತಿನ್ನುತ್ತಿದ್ದ ನೆನಪುಗಳು ಬಾರದೆ ಇರದು.

ರಾತ್ರಿ ಬಾದಾಮಿಗಳನ್ನು ನೀರಿನಲ್ಲಿ ನೆನೆಸಿ ಬೆಳಗೆದ್ದು ಅವನ್ನು ತಿನ್ನುವಾಗಲೆಲ್ಲ ಕಮಲಿ ಅಂತವರಿಗೆ ಯಮುನೆಟಿ ಬಗ್ಗೆ ಹೇಳಲು ನಾಚಿಕೆಯಾಗುತ್ತದೆ.

ಮೈ ಸೋಪು, ಬಟ್ಟೆ ಸೋಪು ಬಿಟ್ಟರೆ ಬೇರೆ ಸೋಪಿನ ಹೆಸರೇ ಗೊತ್ತಿಲ್ಲದ ಕಾಲದಲ್ಲಿ ಹುಟ್ಟಿದ ನಮಗೆ ಈಗ ಬೇಬಿ ಸೋಪು, ಕೈ ತೊಳೆಯೋ ಸೋಪು, ತಲೆಗೂದಲು ತೊಳೆಯೋ ಶಾಂಪು ಹೆಸರಿನ ಸೋಪುಗಳು ದಿಗಿಲು ಹುಟ್ಟಿಸುವಂತಿದೆ. ಕರೋನಾ ಕಾಲಿಟ್ಟ ಮೇಲಂತೂ ನಾನಾ ನಮೂನೆಯ ಕೈ ತೊಳೆಯುವ ಸೋಪುಗಳು ಮನೆಮನೆಗಳಲ್ಲೂ ಲೀಟರುಗಟ್ಟಲೆ ಬಳಕೆಯಾಗುತ್ತಿವೆ. ಹಿಂದೆಲ್ಲ ನಾವು ಲಂಗಕ್ಕೆ ಸೀಬೆಕಾಯಿ ನೇರಳೆಹಣ್ಣನ್ನು ವರೆಸಿಕೊಂಡು ತಿನ್ನುತ್ತಿದ್ದಾಗ ಇದ್ದ ಇಮ್ಯುನಿಟಿ ಈಗ ಇಷ್ಟೆಲ್ಲಾ ಜಾಗ್ರತೆವಹಿಸಿದರೂ ನೆಗಡಿ ಕೆಮ್ಮು ಬರುವುದು ನಿಂತೇ ಇಲ್ಲ. ಕರೋನಾದ ಅಲೆಗಳಲ್ಲಿ ತೇಲುತ್ತಾ ಮುಳುಗುತ್ತಾ ಜೀವ ಕೈಯಲ್ಲಿ ಹಿಡಿದಿರುವ ಜನರಿಗೇಕೆ, ಕರೋನವೈರಸ್ ಗಳಿಗೂ ಯಮುನಟಿನೋ ಇಮ್ಯುನಿಟಿನೋ ಇರುವುದು ಅರ್ಥವಾಗಿಲ್ಲ.

———

ಅಮ್ಮ ಶತಾಯುಷಿಯಾಗಲಿ

- ಎಲ್. ಗಿರಿಜಾ ರಾಜ್

ಈಗ ತಮ್ಮನ ಮನೆಯಲ್ಲಿರುವ ಅಮ್ಮ, ತಮ್ಮ ದೀರ್ಘಾನುಭವಗಳಿಂದ ತಾವೇ ರೂಪಿಸಿಕೊಂಡ, ಜಾಣತನದ ಜೀವನ ವಿಧಾನದಿಂದ ತೊಂಬತ್ತೆರಡರ ಗಡಿಮುಟ್ಟುತ್ತಿದ್ದಾರೆ. ಕಾಲರಾಯನಿಗೂ ಸವಾಲು ಹಾಕಲು ಹವಣಿಸುವ ಇಚ್ಛಾಶಕ್ತಿಯಿಂದ ಆಸರೆಗೋಲನೂ ಒಮ್ಮೊಮ್ಮೆ ಮೂಲೆಗೆ ತಳ್ಳಿ, ಹೇಗೋ ದಬಾಯಿಸಿಕೊಂಡು ನಡೆದೇ ಬಿಡುತ್ತದೆ ಆ ಹಿರಿಯತನ. ತುಳಸೀ ಕಟ್ಟೆಯವರೆಗೂ ತಪ್ಪು ಹೆಜ್ಜೆಗಳನಿಡುವ ಕಂದನಂತೆ ತಟ್ಟಾಡುತ್ತ ನಡೆದೇ ಬಿಡುತ್ತಾರೆ. ಅಲ್ಲಿ ಪ್ರಾರ್ಥನೆ ಸಲ್ಲಿಸಿ ಹಿಂತಿರುಗಿ ಈ ದೊಡ್ಡಮಗು ದೇವರಮನೆಗೆ ಬಂದು ಅಲ್ಲಿ ನಮಿಸಿ ತಮ್ಮ ಕೋಣೆಗೆ ಹಿಂತಿರುತ್ತಾರೆ. ಅಲ್ಲೇ ಎಲ್ಲೋ ಮೂಲೆಯಲ್ಲಿರುವ ಆಸರೆಗೋಲು, ಭಲಾ ಮುದುಕಿ! ಎಂದು ಅಚ್ಚರಿಯಿಂದ ನೋಡುತ್ತಿದ್ದಂತೆ ಅನಿಸುತ್ತದೆ. ಬಿದ್ದರೆ ತುಂಬ ಕಷ್ಟ, ಮೂಳೆಗಳು ಸವೆದಿರುತ್ತವೆ ಎಂದು ಸಾವಿರ ಸಲ ಮನೆಯವರೆಲ್ಲ ಹೇಳಿದರೂ ಯಾರ ಮಾತಿಗೂ ಕ್ಯಾರೆ ಎನ್ನುವುದಿಲ್ಲ. ಆದರೂ ಅಮ್ಮ ಮನುಷ್ಯರು! ಕಾಲನ ಶಕ್ತಿ ಅಪಾರ ಅಪರಂಪಾರ! ಅವರ ಮೆದುಳಿಗೆ ಕೈಯಿಟ್ಟು ನೆನಪಿನ ಶಕ್ತಿಯನ್ನೆಲ್ಲಾ ಹೀರಿಬಿಟ್ಟಿದ್ದಾನೆ, ಮರೆವಿನ ಸುಳಿಯಲ್ಲಿ ಸಿಕ್ಕು ಸಂಕಟಪಡುವ ತಾಯಿಯನ್ನು ನೋಡಿ ನಾನು ಸಂಕಟಪಟ್ಟಿದ್ದೇನೆ. ಒಮ್ಮೊಮ್ಮೆ ಇದೇ ಕಾರಣದಿಂದ ಮನೆಯವರನ್ನೆಲ್ಲಾ ಕಿರಿಕಿರಿಗೆ ನೂಕಿ, ಇದರಲ್ಲಿ ತಮ್ಮ ಪಾತ್ರವೇ ಇಲ್ಲವೆಂಬಂತೆ ಅಮಾಯಕ ನಗೆ ಚೆಲ್ಲುತ್ತಾರೆ.

ಮರೆವಿನಲಿ ಅರಿವಿಲ್ಲದೆ ನಡೆದು ಹೋದ ಘಟನೆಗಳು! ಅಚ್ಚರಿ ಎಂದರೆ ತಮ್ಮ ಜೀವನದ ಅತ್ಯಂತ ಹಳೆಯ ಘಟನೆಗಳನ್ನೆಲ್ಲ ಒಂದಿಷ್ಟೂ ಬಿಡದೆ ಸ್ವಾರಸ್ಯವಾಗಿ ಬಣ್ಣಿಸುವ ಅಮ್ಮನಿಗೆ ಈಗ ಹೇಳಿದ್ದು ಮುಂದಿನ ಕ್ಷಣದಲ್ಲಿ ನೆನಪಿರುವುದಿಲ್ಲ.

"ಎಲ್ಲಿ ಇಟ್ಟೆ?ಎಲ್ಲಿ ಹೋಯಿತು" ದಿನವಿಡೀ ಇದೇ ಮಂತ್ರ. ಬಿಪಿ ಮಾತ್ರೆ ತಗೊಂಡೆನೋ ಇಲ್ಲವೋ? ಶುಗರ್ ಮಾತ್ರೆ ತಗೊಂಡೆನೋ ಇಲ್ಲವೊ? ಎಂದು ಸದಾ ಅದಕ್ಕೆ, ಇದಕ್ಕೆ ಎಂತೆಂಥದಕ್ಕೊ ತಡಕಾಡುತ್ತ ಎಲ್ಲೋ ಇಟ್ಟು ಸದಾ ಮರೆತು ತಿರುತಿರುಗಿ ಅದನ್ನೇ ಹುಡುಕುತ್ತ ಸದಾ ಪ್ರಶ್ನಾರ್ಥಕ ಭಾವದಲ್ಲಿ ಮುಖವಿಟ್ಟುಕೊಂಡು ಮಗುವಿನಂತಾಡುವ ಮಾತೆಯ ಮುಖವನ್ನು ಬೊಗಸೆಯಲ್ಲಿ ಹಿಡಿದು ಹೀಗೆ ಹೇಗಾದಿರಿ ಅಮ್ಮ ಎಂದು ಮುದ್ದಿಸಬೇಕೆನಿಸುತ್ತದೆ. ಹಾಗೇ ಕಣ್ಣಗಳು ಹನಿಗೂಡುತ್ತವೆ

ಮರೆವು ಹೇಗಾದರಿರಲಿ, ಅವರ ಓದುವ ಶಕ್ತಿ ಈ ವಯಸ್ಸಿನಲ್ಲಿ ಅನ್ಯಾದೃಶವಾದುದು. ಕಣ್ಣುಗಳಲ್ಲಿ ಇನ್ನೂ ಆರದ ಜ್ಯೋತಿಯಿದೆ. ಓದುವ ಹಂಬಲವಿದೆ, ನನಗೆ ಕುತೂಹಲ! ದೈನಿಕ, ಪಾಕ್ಷಿಕ ಮಾಸಿಕ, ವಾರ್ಷಿಕ, ಯಾವುದಾದರೂ ಸರಿ. ಕಣ್ಣುಗಳಿಗೆ ಕನ್ನಡಕವಿಲ್ಲದೆ ನಿರಂತರ ವಾಚಕಿಯಾಗುವ ಅಮ್ಮನ ಪರಿ ಅಚ್ಚರಿ. ಓದುವುದೇ ಕಾಯಕ, ಅದೇ ಒಂಟಿತನ ನೀಗಿಸಿರುವ ಆತ್ಮ ಸಂಗಾತಿ, ಸದಾ ಅವರ ಮಂಚದ ಮೇಲೆ ತಮ್ಮ ಪಕ್ಕದಲ್ಲೇ ಒಪ್ಪ ಓರಣವಾಗಿ ಜೋಡಿಸಿರುವ ಪುಸ್ತಕಗಳು ಪತ್ರಿಕೆಗಳನ್ನು ಕಾಣಬಹುದು.

ಇನ್ನು ಅಮ್ಮನ ಹಲ್ಲುಗಳೋ, ಕೆಲವು ವರ್ಷಗಳ ಹಿಂದೆಯೇ ಅವರೊಂದಿಗೆ ಜಗಳವಾಡಿಕೊಂಡು, ಕೊಡಬಾರದ ನೋವು ಕೊಟ್ಟು ಕೆಲವು ಬಿದ್ದು ಹೋದರೆ, ಕೆಲವನ್ನು ಡಾಕ್ಟರೇ ತಮ್ಮ ಇಕ್ಕುಳದಿಂದ ನಿರ್ದಾಕ್ಷಿಣ್ಯವಾಗಿ ಕಿತ್ತೆಸೆದು ಹಲ್ಲಿನ ಸೆಟ್ಟು ಕರುಣಿಸಿದ್ದಾರೆ. ಅದು ಅವರ ಬಾಯನ್ನು ಅಲಂಕರಿಸಿದೆ.

ಅಮ್ಮ ಒಂದು ಕಾಲದಲ್ಲಿ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಈಗಲೂ ಉಬ್ಬಿಸಿ, 'ಅಮ್ಮಾ ನಿಮ್ಮಿಷ್ಟದ ಹಾಡು ಹಾಡಿ' ಎಂದರೆ ನಡುಗುವ ಸ್ವರದಲ್ಲಿ "ಕರೆಯೇ ಕೋಗಿಲೆ ಮಾಧವನಾ...." ಗಾನಧಾರೆ ಹೊನಲಾಗಿ ಹರಿಯುತ್ತದೆ. ಈಗಲೂ ಆ ದನಿಯ ಬನಿ ಅಚ್ಚರಿಗೊಳಿಸುತ್ತದೆ. ಅವರ ಜೀವನ ಶ್ರದ್ಧೆಗೆ ತಲೆಬಾಗಿ ನಮಿಸಬೇಕೆನಿಸುತ್ತದೆ.

ಯಾವುದೋ ಕಾಲದಲ್ಲಿ ಅವರು ಎರಡು ಕತೆ ಬರೆದು, ಅವು ಆಗಿನ ಪತ್ರಿಕೆಯಲ್ಲಿ ಪ್ರಕಟವಾಗಿದ್ದುವಂತೆ. ಅಮ್ಮನ ಆ ಕಲೆಯೇ ನನ್ನೊಳಗೆ ಜೀವಂತವಾಗಿದೆ. ಅಡುಗೆ ಮನೆಯಿಂದ ಬಿಡುಗಡೆ ಸಿಕ್ಕಿದ್ದರೆ ಅಮ್ಮಾ, ನೀವು ದೊಡ್ಡ ಲೇಖಕಿಯಾಗಿರುತ್ತಿದ್ದಿರಿ ಎಂದು ನಗುತ್ತ ಕೆಣಕುತ್ತೇನೆ.

ಅದ್ಯಾವ ಶುಭ ಮುಹೂರ್ತದಲ್ಲಿ ಅಡಿಗಲ್ಲು ಹಾಕಿದರೋ ಆ ಕೆಂಪೇಗೌಡರು! ಈ ಬೆಂಗಳೂರು ಬೃಹದಾಕಾರವಾಗಿ ಇನ್ನೂ ಬೆಳೆಯುತ್ತಲೇ ಇದೆ. ಈ ಜನ ಸಂದಣಿ, ಟ್ರಾಫಿಕ್ಕು ನೆನೆಸಿಕೊಂಡರೆ ಎಂಥದ್ದೂ ಬೇಡಪ್ಪ ಮನೆಯಲ್ಲಿರೋಣ ಅನ್ನಿಸುತ್ತದೆ. ನಾನಿರುವುದು ಒಂದು ತುದಿ, ಅಮ್ಮ ಇನ್ನೊಂದು ತುದಿ. ಆದರೆ ಅಮ್ಮನ ವಿಷಯದಲ್ಲಿ ಅಂಥ ನಿಧಾನಗಳಿಗೆ ಅವಕಾಶವೇ ಇಲ್ಲ. ಅದು ನಿರಂತರವಾಗಿರುವ ಕರುಳ ಸೆಳೆತ, ಬರುತ್ತೇನೆ ಎಂದು ಹೇಳಿಬಿಟ್ಟರೆ ಜಾತಕಪಕ್ಷಿಯ ಹಾಗೆ ಕಾಯುತ್ತಾರೆ. ಹೋಗುವಾಗ ಆಟೋ ಎಂಬ ಆಪದ್ಬಾಂಧವನನ್ನು ಹಿಡಿಯುತ್ತೇನೆ...

ಎರಡು ದಿನ ಇದ್ದು ಹೊರಟರೆ ಆ ಜೀವಕೆ ತೃಪ್ತಿ. ಒಂದ್ಹೊತ್ತಿನಲ್ಲಿ ಎಚ್ಚರವಾಗಿ ನಿದ್ದೆ ಬಾರದೆ ಹೊರಳಾಡುವ ಅವರು ನಾನು ಪಕ್ಕದಲ್ಲಿ ಮಲಗಿದ ರಾತ್ರಿ ಕಳೆದು ಬೆಳಗಾಗುತ್ತಿದ್ದಂತೆ 'ನಗುತ್ತ ಕಣ್ತುಂಬ ನಿದ್ದೆ ಮಾಡಿದೆ ರಾತ್ರಿ' ಎಂದು ಹೇಳುತ್ತಾರೆ. ಆಗ ನನ್ನ ಕಣ್ಣುಗಳು ನನಗರಿಯದಂತೆ ತೇವವಾಗುತ್ತವೆ...

ಈಗಲೂ ಪತ್ರಿಕೆಗಳಲ್ಲಿ ಸರಸ್ವತಿಯೋ, ಲಕ್ಷ್ಮಿಯೋ, ಪಾರ್ವತಿಯದೋ ವೇಷ ದರಿಸಿದ ಮಾಡೆಲ್ ಗಳ ಬಣ್ಣದ ಚಿತ್ರ ಕಾಣಿಸಿದರೆ ಅದನ್ನ ಕತ್ತರಿಸಿ ತಮ್ಮಗೋಡೆ ಬೀರುವಿನ ಮೇಲೆ ಗಮ್ ಹಾಕಿ ಅಂಟಿಸುವ ಗೀಳು ಬಿಟ್ಟಿಲ್ಲ. ಅವರ ಬೀರು ತುಂಬ ಗಣಪ, ಶಿವ ಪಾರ್ವತಿ, ಲಕ್ಷ್ಮಿನಾರಾಯಣ, ಕೃಷ್ಣ, ರಾಧೆ ಎಲ್ಲರ ಚಿತ್ರಗಳೂ ತುಂಬಿಹೋಗಿವೆ. ಮೊನ್ನೆ ನಾನೆರೆಡು ಕತ್ತರಿಸಿ ಕೊಟ್ಟೆ. "ನೋಡು, ಅದು ಯಾರೋ ಹೆಣ್ಣು ಮಗಳು ಎಷ್ಟು ಚೆಂದ ಇದ್ದಾಳೆ. ಅವಳು ವೇಷ ಹಾಕಿಕೊಂಡಿದ್ದಾಳೆ. ನಾವು ಕತ್ತರಿಸಿ ಅಂಟಿಸಿ ಕೈ ಮುಗಿಯುತ್ತಿದ್ದೇವೆ. ಅವಳ ಪುಣ್ಯ ನೋಡು.... ಅವಳ ಪುಣ್ಯ ನೋಡು... " ಎಂದು ಹತ್ತಾರು ಸಲ ಹೇಳಿ, ಆ ದಿನವೆಲ್ಲಾ ಅದೇ ಪದಗಳ ಪುನರಾವರ್ತನೆ ಮಾಡುತ್ತಲೇ ಇದ್ದರು. ಇಲ್ಲೆಲ್ಲಾ ಅವರ ಆತ್ಮದ ಸಿರಿಯನ್ನು ನಾನು ಕಾಣುತ್ತೇನೆ. ಅಮ್ಮನ ಹೊಳಪು ಮಾಸದ ಮುಖ ಈಗಲೂ ಲಕ್ಷಣವಾಗಿಯೇ ಇದೆ. ಕಣ್ಣುಗಳು ದೊಡ್ಡ ಸಂಸಾರ ನಿಭಾಯಿಸಿದ, ನೋವುಂಡ ನೂರೆಂಟು ಕತೆ ಹೇಳುತ್ತವೆ.

ಮನೆಗೆ ಎಂಥ ಹೊತ್ತಿನಲ್ಲೂ ಬರುತ್ತಿದ್ದ ನೆಂಟರಿಷ್ಟರು, ಅಪ್ಪನ ಸ್ನೇಹಿತರಿಗೆ ರುಚಿಕರ ಊಟ ತಯಾರಿಸಿ, ಬಡಿಸಿ, ತೃಪ್ತಿ ನೀಡಿದ ಕೈಗಳೆರಡೂ ಈಗ ಸೋತಿವೆ, ಹೆಗಲುಗಳು ನೋವಿನಿಂದ ಕುಸಿದಿವೆ. ಕಾಲುಗಳೆರಡೂ ಸದಾ ಜೀವಕ್ಕೆ ನೋವಿನ ಬಾನವನ್ನೇ ಉಣ್ಣಿಸುತ್ತಿವೆ.. ಆದರೂ ಯಾವುದೋ ಸನಾತನ ದೈವ ಶ್ರದ್ಧೆ, ಅತ್ಮ ಶಕ್ತಿ ಅವರ ಚೇತನವನ್ನು ನಡೆಸುತ್ತಿದೆ, ಅಮ್ಮ ಶತಾಯುಷಿಯಾಗಲಿ!

(ಅಮ್ಮ ಶತಾಯುಷಿಯಾಗಲಿಲ್ಲ. ಇದು ಹಿಂದೆ ಬರೆದ ಲೇಖನ.
ಅಮ್ಮ ಹೋದ ವರುಷ ಅಗಸ್ಟ್ ಹದಿನೈದರಂದು ಈ ಭುವಿಯ ಬಂಧನದಿಂದ ಸ್ವತಂತ್ರವಾಗಿ ಹೊರಟು ಹೋದರು)

ಸಾಹಿತ್ಯ ದಾಸೋಹ ೧೯೩ – ಅಧ್ಯಕ್ಷರ ಅನಿಸಿಕೆಗಳು

೨೮ನೇ ಆಗಸ್ಟ್ ೨೦೨೧ ರಂದು ನಡೆದ ೧೯೩ನೇ ಸಾಹಿತ್ಯ ದಾಸೋಹ ಮತ್ತು ೫೦ನೇ ನೋಡಿಯೋ ಸಾಹಿತ್ಯ ದಾಸೋಹದಲ್ಲಿ ಉತ್ತಮ ಲೇಖನಗಳನ್ನು ಪ್ರಸ್ತುತಪಡಿಸಿದ ಎಲ್ಲ ಲೇಖಕರಿಗೆ ಅಭಿನಂದನೆಗಳು.

ಅಂದಿನ ದಿನ ಅಧ್ಯಕ್ಷತೆ ವಹಿಸುವ ಸೌಭಾಗ್ಯ ನನ್ನದಾಗಿತ್ತು. ಈ ಅವಕಾಶ ಕಲ್ಪಿಸಿಕೊಟ್ಟ ಸಾಹಿತ್ಯ ದಾಸೋಹದ ಸಂಚಾಲಕರು ಮತ್ತು ಎಲ್ಲ ಸದಸ್ಯರಿಗೆ ಋಣಿಯಾಗಿದ್ದೇನೆ.

ಅಂದು ಪ್ರಸ್ತುತಪಡಿಸಿದ ಎಲ್ಲ ಬರಹಗಳ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ನೀಡುತ್ತಿದ್ದೇನೆ.

ಬಿ.ಆರ್. ರವೀಂದ್ರನಾಥ್

ಅಮ್ಮ ಶತಾಯುಷಿಯಾಗಲಿ – ಗಿರಿಜಾ ರಾಜ್

ತಮ್ಮ ದೈವ ಭಕ್ತೆ ತಾಯಿ, ಕಷ್ಟ ಕೋಟಲೆಗಳನ್ನು ಕಂಡವರು, ಈಗ ದೈಹಿಕವಾಗಿ ದುರ್ಬಲರಾಗಿದ್ದರೂ ಅವರ ಆತ್ಮದ ಸಿರಿಯನ್ನು ಗುರುತಿಸಿ ಅವರು ಶತಾಯುಷಿ ಆಗಲಿ ಎಂದು ಆಶಿಸಿದ ಲೇಖನ ಇದು. ಮನೋಜ್ಞನವಾಗಿ ಮೂಡಿ ಬಂದಿರುವ ಈ ಲೇಖನ ನಮ್ಮೆಲ್ಲರ ಭಾವನೆಗಳ ಧ್ವನಿಯಾಗಿರುತ್ತದೆ. ಗಿರಿಜಾ ರಾಜ್ ಅವರಿಗೆ ಅಭಿನಂದನೆಗಳು

ಚಿತ್ರ ವಿಚಿತ್ರ ಚಿತ್ರಗಳು - ಶೀಲಾ ಭಂಡಾರ್ಕರ್

ಚಿಕ್ಕಂದಿನಲ್ಲಿ ಸಿನಿಮಾ ನೋಡಿದ ಅನುಭವವನ್ನು ಲೇಖಕಿ ಚೆನ್ನಾಗಿ ವರ್ಣಿಸಿದ್ದಾರೆ. ಅವರೊಬ್ಬರೇ ಅಲ್ಲ, ಬಹುತೇಕ ನಾವೆಲ್ಲರೂ ಈ ಸುಖವನ್ನು ಅನುಭವಿಸಿದವರೇ. ಸಿನಿಮಾಗಳ ನಾಯಕ, ನಾಯಕಿ, ಖಳನಾಯಕರನ್ನು ಅನುಕರಣೆ ಮಾಡಿದಾಗ ಸಿಗುವ ಆನಂದವನ್ನು ಅನುಭವಿಸಿಯೇ ನೋಡಬೇಕು. ಸ್ವಲ್ಪ ವಯಸ್ಸಾದ ನಂತರ ನಮ್ಮ ಸಿನಿಕತನವನ್ನು ಬಿಟ್ಟು ವೀಕ್ಷಿಸಬೇಕು ಎಂಬುದಂತೂ ನಿಜವೇ. ಹಾಗೆ ನೋಡುತ್ತಾ, ಸಿನಿಮಾ ನೀಡುವ ಮನರಂಜನೆಯನ್ನು ಅನುಭವಿಸುವುದು ಲೇಖಕಿ ಹೇಳಿರುವ ಹಾಗೆ ಕಷ್ಟದ ವಿಷಯವೇ. ಜೇಮ್ಸ್ ಬಾಂಡ್ ಸಿನಿಮಾಗಳಲ್ಲಿ ಹಾರುತ್ತಿರುವ ವಿಮಾನಗಳ ಮೇಲೆ ನಿಂತು ಫೈಟಿಂಗ್ ನಡೆಸಿ, ಒಂದು ಹಾರುತ್ತಿರುವ ವಿಮಾನದಿಂದ ಇನ್ನೊಂದು ಹಾರುತ್ತಿರುವ ವಿಮಾನಕ್ಕೆ ಹಾರಿ ಫೈಟಿಂಗ್ ಮಾಡಿ ನಾಯಕಿಯನ್ನು ರಕ್ಷಿಸುವ ಪ್ರಸಂಗವನ್ನು ಬಹುತೇಕ ಎಲ್ಲ ಭಾರತೀಯ ಭಾಷೆಗಳಲ್ಲಿ ಕಾಪಿ ಮಾಡಿ ತೋರಿಸಿರುವುದನ್ನು ಕಂಡ ಮೇಲೆ ನೈಜತೆಯನ್ನು ಕಲ್ಪಿಸಿಕೊಳ್ಳುವುದು ಕಷ್ಟವೇ. ಶೀಲಾ ಭಂಡಾರ್ಕರ್ ಅವರಿಗೆ ಅಭಿನಂದನೆಗಳು

ಟಿಕ್ ಟಿಕ್ ಗೆಳೆಯನ ಆಳ ಅಂತರಿಕ್ಷ ಪಯಣ – ಜಿವಿ ನಿರ್ಮಲ

ಮಾನವರಿಗೆ ಅತ್ಯವಶ್ಯವಾದ ಸಾಧನಗಳಲ್ಲಿ ಒಂದು ಗಡಿಯಾರ. ಯಾವಾಗಲೂ ಸಮಯವಿಲ್ಲ ಎಂದು ಹೇಳುವ ನಮಗೆ ಸಮಯ ತೋರಿಸುವ ಗಡಿಯಾರ ನಮ್ಮ ಎಲ್ಲ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ. ಬೆಳಿಗ್ಗೆ ಏಳಲು ಗಡಿಯಾರದ ಅಲಾರಂ ಸದ್ದು ಬೇಕು. ನಂತರ ಪ್ರತಿ ಕೆಲಸ ಮಾಡುವಾಗಲೂ ಗಡಿಯಾರ ನೋಡಿಕೊಂಡೇ ಮಾಡುತ್ತೇವೆ. ದೈನಂದಿನ ಎಲ್ಲ ಚಟುವಟಿಕೆಗಳನ್ನು ಗಡಿಯಾರದ ಸೂಚನೆಯಂತೆ ಮಾಡುವ ಸ್ಥಿತಿ ತಲುಪಿದ್ದೇವೆ. ಆತ್ಮೀಯ ಬಂಧು ಮಿತ್ರರೊಂದಿಗೆ ಮಾತನಾಡುವಾಗಲೂ ಗಡಿಯಾರ ನೋಡಿಕೊಳ್ಳುವವರನ್ನು ನಾವು ನೋಡುತ್ತೇವೆ. ಅಕಸ್ಮಾತ್ ಗಡಿಯಾರ ಜೊತೆಗಿಲ್ಲದಿದ್ದರೆ ನಮ್ಮ ಕೆಲಸಗಳೆಲ್ಲ ಏರುಪೇರು.

ಸಮಯವನ್ನು ಅಂದಾಜಿಸುವ ಬಗ್ಗೆ ಭೂತ, ವರ್ತಮಾನ ಹಾಗೂ ಭವಿಷ್ಯದ ಅವಲೋಕನವನ್ನು ಬಹಳ ಸಮರ್ಥವಾಗಿ ಲೇಖಕಿ ಮಾಡಿಕೊಟ್ಟಿದ್ದಾರೆ. ಈ ಲೇಖನದಲ್ಲಿ ಅವರು ನೀಡಿರುವ ಅಮೂಲ್ಯ ಮಾಹಿತಿಗಳು ನಮ್ಮನ್ನು ಬೆರಗುಗೊಳಿಸುತ್ತವೆ. ನಮಗೆಲ್ಲ ವಿಶ್ವಪರ್ಯಟನೆ ಮಾಡಿಸಿ ಗಡಿಯಾರದ ಬಗ್ಗೆಯ ದೀರ್ಘ ಇತಿಹಾಸವನ್ನು ಇಷ್ಟು ಅಲ್ಪ ಕಾಲದಲ್ಲಿ ತಿಳಿಸಿ ನಮ್ಮ ಜ್ಞಾನವನ್ನು ಹೆಚ್ಚಿಸಿರುವ ಶ್ರೀಮತಿ ಜಿ.ವಿ ನಿರ್ಮಲಾ ಅವರಿಗೆ ಅಭಿನಂದನೆಗಳು.

ಕಾಡುವ ಕನಸುಗಳು – ಗೌರಿ ಭಟ್ಟ

ಶ್ರೀಮತಿ ಗೌರಿ ಭಟ್ಟ ಅವರು ತಮ್ಮ ಪ್ರಸ್ತುತಿಯಲ್ಲಿ ತಮ್ಮನ್ನು ಕಾಡುವ ಮೂರು ಕನಸುಗಳ ಬಗ್ಗೆ ತಮ್ಮ ಲೇಖನವನ್ನು ಮಂಡಿಸಿದ್ದಾರೆ. ಮೊದಲನೆಯ ಪ್ರಸ್ತುತಿಯಲ್ಲಿ ಕನಸಿನಲ್ಲಿಯೂ ಮಗಳು ದುಖಪಡುವುದನ್ನು ಸಹಿಸದ ಅಮ್ಮ ಒಂದು ಸಮಾಧಾನಪಡಿಸುತ್ತಾರೆ. ಎರಡನೆಯ ಪ್ರಸ್ತುತಿಯಲ್ಲಿ ನಿಸರ್ಗದ ಎರಡು ಚಿತ್ರಗಳನ್ನು ತೋರಿಸುತ್ತಾರೆ. ಒಂದು ಚಿತ್ರ ಭಯಪಡಿಸುವ ಗುಡ್ಡ ಕಿರುದಾರಿ, ಆಳವಾದ ಕಣಿವೆ. ಎರಡನೆ ಚಿತ್ರ ಆಕಾಶದಲ್ಲಿ ರಂಗುರಂಗಿನ ಮೋಡಗಳಲ್ಲಿ ದೇವರುಗಳ ಚಿತ್ರಗಳನ್ನು ಕಾಣುವುದು. ಅದೇ ಭಯಪಡಿಸುವ ಕಣಿವೆಯಲ್ಲಿ ಸುಂದರ ದೃಶ್ಯಗಳು ಗಿಡಗಳು ಹೂವುಗಳು ಕಾಣುತ್ತವೆ. ಸುಂದರ ದೃಶ್ಯಗಳನ್ನು ಕಾಣುತ್ತಿರುವಾಗಲೇ ಎಚ್ಚರಗೊಂಡಾಗ ಮನಸ್ಸಿನಲ್ಲಿ ಮೂಡಿರುವ ಮುದ ಮುಂದುವರೆಯುತ್ತದೆ. ಮೂರನೆಯ ಕನಸಿನಲ್ಲಿ ಪರೀಕ್ಷೆಗೆ ಹೋಗಲು ತೊಂದರೆ, ಹೋದ ನಂತರ ಉತ್ತರಗಳು ಗೊತ್ತಿಲ್ಲದಿರುವುದು ಈ ರೀತಿಯ ಹತಾಶೆಯಿಂದ ಎಚ್ಚರಗೊಳ್ಳುವುದು. ಈ ರೀತಿಯಲ್ಲಿ ಸಂತಸ ತರುವ ಕನಸುಗಳ ಜೊತೆ ಹತಾಶೆಯನ್ನು ಉಂಟು ಮಾಡುವ ಕಾಡುವ ಕನಸುಗಳನ್ನು ನೈಜವಾಗಿ ಚಿತ್ರಿಸಿದ್ದಾರೆ.

ಬುದ್ಧನ ಜಾತಕ ಕಥೆಗಳು – ವಿಠಲ ಇಜೇರಿ

ವಿಠಲ ಇಜೇರಿ ಅವರು ಪ್ರಾಚೀನ ಕಥಾ ಸಂಕಲನಗಳ ಅಧ್ಯಯನ ಮಾಡಿ ಅವುಗಳ ಬಗ್ಗೆಯ ವಿವರಗಳನ್ನು ನಮಗೆ ಸಂಕ್ಷಿಪ್ತವಾಗಿ ತಿಳಿಸುವ ಕೃಪೆ ಮಾಡುತ್ತಿದ್ದಾರೆ. ಈ ಬಾರಿ ಬುದ್ಧನ ಜಾತಕ ಕಥೆಗಳ ಸ್ವರೂಪ, ಉಗಮ ಮತ್ತು ಬೆಳವಣಿಗೆಗಳನ್ನು ಚೆನ್ನಾಗಿ ವಿವರಿಸಿದ್ದಾರೆ. ಸಮಾಜವು ತನ್ನ ಸಮತೋಲನವನ್ನು ಕಾಪಾಡಿಕೊಳ್ಳಲು ಸಾಮಾನ್ಯ ಜನರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಅವರ ಮನಸ್ಸುಗಳಿಗೆ ಸುಲಭವಾಗಿ ನಾಟುವಂತೆ ಮೌಲ್ಯಗಳನ್ನು, ಆದರ್ಶಗಳನ್ನು ತಿಳಿಸಿ ಹೇಳುತ್ತಲೇ ಇದ್ದರೆ ಮಾತ್ರ ಸಮಾಜದಲ್ಲಿ ಅರಾಜಕತೆ ತಲೆದೋರದಿರುವಂತೆ ನಿಯಂತ್ರಿಸಲು ಸಾಧ್ಯ. ಎಲ್ಲ ಕಾಲಗಳಲ್ಲಿಯೂ, ಎಲ್ಲ ದೇಶಗಳಲ್ಲಿಯೂ ಇಂತಹ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಲೇ ಇವೆ. ವಿದೇಶಗಳಲ್ಲಿ ಇಸೋಪನ ಕಥೆಗಳು, ಮುಲ್ಲಾ ನಸೀರುದ್ದೀನ್ ಕಥೆಗಳು, ಇದರ ನಿದರ್ಶನಗಳು. ಲೇಖಕರು ಒಂದು ಉತ್ತಮ ಕಥೆಯನ್ನು ಆಯ್ಕೆ ಮಾಡಿದ್ದಾರೆ.

ಭೋಗದ ಭಾಗ್ಯ - ಶೀಲಾ ಅರಕಲಗೂಡು

ಈ ಕವನ ಓದುತ್ತಾ ಹೋದ ಹಾಗೆ ನಮ್ಮ ಬಾಯಲ್ಲಿ ನೀರೂರುವುದು ಹೆಚ್ಚುತ್ತಾ ಹೋಗುತ್ತದೆ. ಎಷ್ಟೊಂದು ರುಚಿರುಚಿಯಾದ ತಿಂಡಿಗಳ ಹೆಸರುಗಳನ್ನು ಕೇಳಿದ್ದಕ್ಕೆ ಇಷ್ಟು ಆಸೆಯಾದರೆ ಅವುಗಳನ್ನು ನೋಡಿದಾಗ, ನಮಗೆ ಬಡಿಸಿದಾಗ ಎಷ್ಟರಮಟ್ಟಿಗೆ ನಾವು ಬಾಯಿ ಚಪ್ಪರಿಸಬಹುದು ಅಂತಹ ರುಚಿರುಚಿ ತಿನಿಸುಗಳನ್ನು ಕಡೆಗಣಿಸಿ ವಿದೇಶಿ ಮೂಲದ ಪಿಜ್ಜಾ, ಬರ್ಗರ್ ಗಳಿಗೆ ಮಾರುಹೋಗುತ್ತಿರುವ ನಮ್ಮ ಯುವ ಜನರಿಗೆ ಪರಿಣಾಮಕಾರಿಯಾಗಿ ಬುದ್ದಿವಾದವನ್ನು ಈ ಕವನ ಹೇಳುತ್ತದೆ. ಪ್ರಾಸಗಳನ್ನು

ಕೂಡಿಸಿ ಷಟ್ಪದಿಯಲ್ಲಿ ರಚಿಸಿರುವ ಈ ಕವನ ಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಶ್ರೀಮತಿ ಶೀಲಾ ಅರಕಲಗೂಡು ಅವರಿಗೆ ಅಭಿನಂದನೆಗಳು.

ಚಾಕು ಹೆಗಡೆ – ಜೀವಿ.ಹೆಗಡೆ

ಪ್ರತಿಯೊಂದು ಊರಿನಲ್ಲಿ ಪ್ರತಿಯೊಂದು ಅವಿಭಕ್ತ ಕುಟುಂಬದಲ್ಲಿ ಕಾಣುವ ಕಿಡಿಗೇಡಿಗಳ ಒಂದು ಉದಾಹರಣೆಯನ್ನು ಈ ಲೇಖನದಲ್ಲಿ ಚಿತ್ರಿಸಲಾಗಿದೆ. ಇಂತಹ ವ್ಯಕ್ತಿಗಳು ಕಷ್ಟಪಟ್ಟು ಎಲ್ಲರಿಗೂ ಸಹಾಯ ಹಸ್ತ ನೀಡಿ ಬೇಕಾದವರಾಗಿರುತ್ತಾರೆ. ಆದರೆ ತಮ್ಮ ಸೇವೆಗೆ ಬದಲಾಗಿ ಕುಟುಂಬಗಳಲ್ಲಿ ಒಡಕು ಮೂಡಿದರೆ ಅವರಿಗೆ ಪ್ರತಿಫಲ ದೊರೆತು ಸಂತಸವಾಗುತ್ತದೆ. ತಂದೆ ಮಕ್ಕಳ ನಡುವೆ, ಅಣ್ಣತಮ್ಮಂದಿರ ಮಧ್ಯೆ ವೈಮನಸ್ಯ ತಂದೊಡ್ಡಿದಾಗಲೇ ಅವರ ಜೀವನ ಸಾರ್ಥಕ. ಅಂತಹ ಮನೆಹಾಳ ಕಿಡಿಗೇಡಿ ಚಾಕುವನ್ನು ಎಚ್ಚರದಿಂದ ಚಿತ್ರಿಸಲಾಗಿದೆ. ಜಿ.ವಿ. ಹೆಗಡೆ ಅವರಿಗೆ ಅಭಿನಂದನೆಗಳು

ಸಿಂಧು ಸೇರಿದ ಬಿಂದು - ಪಾರ್ವತಿ ಹೆಗಡೆ

ಈ ಕವನದಲ್ಲಿ ಲೇಖಕಿ ಒಬ್ಬ ವ್ಯಕ್ತಿ ತನ್ನ ಸುರಕ್ಷಿತ ಪೊಟರೆಯಿಂದ ಹೊರಬಿದ್ದು ಮಹಾಸಾಗರದಂತಹ ಸಮಾಜದ ಹರಿವಿಗೆ ಆಕರ್ಷಿತಳಾಗಿ ಅದರಲ್ಲಿ ತಾನೇ ಹಾರಿ ಬಿದ್ದು ಅದರ ಭಾಗವಾಗಿ ಹರಿದು ಹೋಗುವುದನ್ನು ರಸವತ್ತಾಗಿ ವರ್ಣಿಸಿದ್ದಾರೆ. ಮತ್ತೆ ಮತ್ತೆ ಮೆಲಕು ಹಾಕುವಂತಿದೆ ಈ ಕವನ. ಪಾರ್ವತಿ ಹೆಗಡೆ ಅವರಿಗೆ ಅಭಿನಂದನೆಗಳು

ಪಂಪ ಅರಿಕೇಸರಿಗೆ ತೋರಿಸಿದ ಪಾನ ಭೂಮಿ -- ಶಾಂತಾ ನಾಗಮಂಗಲ

ಪಂಪ ಭಾರತದಲ್ಲಿ ಅಡಗಿರುವ ಹಲವಾರು ಹೊಸತನಗಳ ಪೈಕಿ ಮದಿರಾಪಾನವನ್ನು ಲೇಖಕಿ ಹೆಕ್ಕಿ ತೆಗೆದು ನಮಗೆ ಪಂಪ ಭಾರತವನ್ನು ಓದಬೇಕೆಂಬ ಹಂಬಲ ಉಂಟು ಮಾಡಿದ್ದಾರೆ. ಮುನ್ನೂರಾ ಅರವತ್ತು ಜಾತಿಯ ಕಳ್ಳುಗಳ ಆಯ್ಕೆ ಅವಕಾಶಗಳ ಬಗ್ಗೆ ತಿಳಿಸಿ ಬಾಯಿ ಚಪ್ಪರಿಸುವಂತೆ ಮಾಡಿದ್ದಾರೆ. ಮದಿರೆಗೆ ಅರ್ಚನೆ ಮಾಡಿ, ನೈವೇದ್ಯ ಮಾಡಿ, ಪ್ರೋಕ್ಷಿಸಿಕೊಂಡು ನಮಸ್ಕರಿಸಿ ಗುಂಡು ಪಾರ್ಟಿಯನ್ನು ಪ್ರಾರಂಭಿಸುವುದು ಮತ್ತು ಅದರಲ್ಲಿ ಬಿಟ್ಟಿ ಗಿರಾಕಿಗಳಿಗೂ ಮಣೆ ಹಾಕುವುದು ಎಲ್ಲವೂ ಕೌತುಕಮಯವಾಗಿವೆ. ನಮ್ಮಲ್ಲಿ ಪಾರ್ಟಿ ಮಾಡುವವರಿಗೆ ಹೊಸ ಉತ್ಸಾಹ ಮೂಡುತ್ತದೆ.

ಶಾಂತಾ ನಾಗಮಂಗಲ ಅವರ ಲೇಖನಗಳನ್ನು ಓದಿದಾಗ ಅವರ ಅಧ್ಯಯನಶೀಲತೆ ಪರಿಚಯವಾಗುತ್ತದೆ. ಜೊತೆಗೆ ಹಾಸ್ಯ ಲೇಪಿತ ರಸವತ್ತಾದ ವರ್ಣನೆ ಅದ್ಭುತವಾಗಿರುತ್ತದೆ. ಶಾಂತಾ ನಾಗಮಂಗಲ ಅವರಿಗೆ ಅಭಿನಂದನೆಗಳು

ನನ್ನ ಬೃಹತ್ ಬೆಂಗಳೂರು ಮಹಾನಗರ ಮನೆಯ ಕಾರ್ಮೀಕಳು – ರಾಧಿಕಾ ಗುಜ್ಜರ್

ಇದು ಮನೆಮನೆಯ ಕಥೆ. ಭಾರತದಲ್ಲಿ ಮನೆಗೆಲಸದವಳು ಯಾವುದೇ ಕುಟುಂಬದ ಅವಿಭಾಜ್ಯ ಅಂಗ. ಕುಟುಂಬದ ಕಷ್ಟ ನಷ್ಟಗಳಲ್ಲಿ ಅವಳು ಒಬ್ಬ ಭಾಗಿದಾರಿ ಎಂದರೆ ತಪ್ಪಲ್ಲ. ಮನೆಗೆಲಸದವಳು ಮನೆಗೆ ಭೂಷಣ ಎಂದೇ ಹೇಳಬಹುದು. ಅಂತಹ ಮನೆಗೆಲಸದವಳ ವ್ಯಕ್ತಿ ಚಿತ್ರಣವನ್ನು ಲೇಖಕಿ ಚೆನ್ನಾಗಿ ಚಿತ್ರಿಸಿದ್ದಾರೆ. ಮನೆಗೆಲಸದವಳು ಮನೆಗೆ ಬರಬೇಕು, ಒಂದಷ್ಟು ಕೆಲಸ ಮಾಡಬೇಕು ಅಷ್ಟೆ. ಆ ಕೆಲಸದಲ್ಲಿರುವ ತಪ್ಪುಒಪ್ಪುಗಳನ್ನು ನಾವು ಒಪ್ಪಿಕೊಂಡು ತೆಪ್ಪಗಿರಬೇಕು. ಅಸಂಘಟಿತ ವಲಯದ ಕಾರ್ಮೀಕರಿಗೆ ಹೆಚ್ಚಿನ ಸವಲತ್ತುಗಳನ್ನು ನಾವು ನೀಡದಿರುವಾಗ ನಮ್ಮ ನಿರೀಕ್ಷೆಗಳಿಗೂ ಕಡಿವಾಣ ಹಾಕಿಕೊಳ್ಳಲೇಬೇಕು ಎಂಬ ಸಂದೇಶ ಈ ಕವನದಲ್ಲಿ ಪರಿಣಾಮಕಾರಿಯಾಗಿ ಮೂಡಿಬಂದಿದೆ. ರಾಧಿಕಾ ಗುಜ್ಜರ್ ಅವರಿಗೆ ಅಭಿನಂದನೆಗಳು.

ಶಿವತತ್ವ: ಮೂರು ನುಡಿಗಳಲಿ -- ರಾಜೇಂದ್ರ ಪ್ರಸಾದ್

ಲೇಖಕರು ತಮ್ಮ ಕವನದಲ್ಲಿ ಶಿವನ ವಿಗ್ರಹ ಅಥವಾ ಬಾಹ್ಯ ರೂಪವನ್ನು ಪೌರಾಣಿಕ ಹಾಗೂ ವೇದ ಶಾಸ್ತ್ರ ಗಳನ್ನು ಆಧಾರವಾಗಿಟ್ಟುಕೊಂಡು ಅಂತರಾರ್ಥವನ್ನು ತಿಳಿಸಲು ಪ್ರಯತ್ನಿಸಿದ್ದಾರೆ. ಒಂದು ರೀತಿಯಲ್ಲಿ ಎಲ್ಲ ದೈವಸ್ವರೂಪಗಳು ಇಂತಹ ತತ್ವಾಧಾರಿತ ಮಾನವ ಸೃಷ್ಟಿಯೆ ಎಂದರೆ ತಪ್ಪಾಗಲಾರದು. ದೈವದ ಮೇಲಿನ ನಂಬಿಕೆಗಳ ಜೊತೆ ಜೊತೆಗೆ ಮೂಲ ತತ್ವಗಳೂ ತಿಳಿದರೆ ಬಹುಷಃ ಕಂದಾಚಾರಗಳ ಸಂಕೋಲೆಗಳಿಂದಾಚೆಯ ನೈಜ ಶ್ರದ್ಧೆ ಭಕ್ತಿ ಜನರಲ್ಲಿ ಮೂಡಬಹುದೇನೋ. ಇಂದಿನ ಸಮಾಜಕ್ಕೆ ಸಂದೇಶ ನೀಡಲು ಮಾಡಿರುವ ಉತ್ತಮ ಪ್ರಯತ್ನ. ರಾಜೇಂದ್ರ ಪ್ರಸಾದ್ ಅವರಿಗೆ ಅಭಿನಂದನೆಗಳು.

ಕೈ ನೋವು ಬಂದಿದ್ಯಾಕೆ – ಶ್ರವಣಕುಮಾರಿ

ಈ ಲೇಖನದಲ್ಲಿ ಬ್ಯಾಂಕ್ ಅಧಿಕಾರಿಗಳ ಬವಣೆಯನ್ನು ಚೆನ್ನಾಗಿ ಚಿತ್ರಿಸಲಾಗಿದೆ. ಬ್ಯಾಂಕ್ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಮಾಡುವಲ್ಲಿ ಎಷ್ಟು ರೀತಿಯ ಸವಾಲುಗಳನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಮನ ಮುಟ್ಟುವಂತೆ ಹೇಳಿದ್ದಾರೆ. ಇನ್ನು ಈಗಿನ ಕಾಲದಲ್ಲಿ ವೈದ್ಯರ ವಿಶೇಷ ಟ್ರೀಟ್ ಮೆಂಟ್ ಗಳಿಂದ ಚೇತರಿಸಿಕೊಳ್ಳುವುದು ಎಷ್ಟು ಕಷ್ಟ ಎಂಬುವ ವಾಸ್ತವ ಸತ್ಯವನ್ನೂ ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ಈ ಹಾಸ್ಯ ಲೇಪಿತ ಲೇಖನದಡಿಯಲ್ಲಿ ಹಲವು ವಿಷಯಗಳನ್ನು ಅಡಗಿಸಲಾಗಿದೆ. ಶ್ರವಣಕುಮಾರಿ ಅವರಿಗೆ ಅಭಿನಂದನೆಗಳು

ಒಲಿಂಪಿಕ್ಸ್ – ಚಂದ್ರಶೇಖರ್ ಆರ್ ಕೆ

ಇತ್ತೀಚಿನ ಒಲಿಂಪಿಕ್ಸ್ ನಲ್ಲಿ ಚಿನ್ನದ ಪದಕ ಗಳಿಸಿದ ಭಾರತದ ಹೆಮ್ಮೆಯ ನೀರಜ್ ಚೋಪ್ರಾನನ್ನು ತಮ್ಮ ಎರಡು ಕವನಗಳಲ್ಲಿ ಆತ್ಮೀಯವಾಗಿ ಪರಿಚಯಿಸಿ ನಮಗೆಲ್ಲರಿಗೂ ಮತ್ತೊಮ್ಮೆ ನೀರಜ್ ಚೋಪ್ರಾನನ್ನು ಲೇಖಕರು ನೆನಪಿಸಿದ್ದಾರೆ. ಚಂದ್ರಶೇಖರ್ ಅವರಿಗೆ ಅಭಿನಂದನೆಗಳು.

ನಗುವೊಂದು ರಸಪಾಕ – ಎಂ.ಎಸ್.ನರಸಿಂಹಮೂರ್ತಿ

Laughter is the best medicine. ಎಂಬ ನಾಣ್ಣುಡಿ ಎಲ್ಲರಿಗೂ ಪರಿಚಿತವೇ. ನಗೆ ಬರಹಗಳನ್ನು ಬರೆಯುವಲ್ಲಿ ಎತ್ತಿದ ಕೈ ಎಂದು ಹೆಸರಾಗಿರುವ ಲೇಖಕರು ನಗೆಯ ಬಗ್ಗೆ ಆಳವಾದ ಅಧ್ಯಯನ ಮಾಡಿದ್ದಾರೆ. ಹುಟ್ಟಿನಿಂದಲೂ ನಗು ನಮ್ಮ ಜೊತೆಯಲ್ಲಿಯೇ ಬೆಳೆಯಬೇಕು ಎಂದು ಆಶಿಸಿದರೂ ಯಾವುದೋ ಒಂದು ಹಂತದಲ್ಲಿ ನಗೆ ಮರೆಯಾಗುತ್ತದೆ ಮತ್ತು ಬೆಳೆದು ನಿಂತ ನಾವು ಕುಬ್ಜರಾಗಿಬಿಡುತ್ತೇವೆ. ನಮ್ಮ ಸರ್ವತೋಮುಖ ಬೆಳವಣಿಗೆಯಲ್ಲಿ ನಗು ಮುಖ್ಯ ಪಾತ್ರವಹಿಸುತ್ತದೆ ಎಂಬ ಸಂದೇಶವನ್ನು ಲೇಖಕರು ನೀಡಿದ್ದಾರೆ. ಅವರು ನೆನಪಿಸಿಕೊಂಡಿರುವ ಪ್ರಸಂಗಗಳು ನಮ್ಮ ಮನಸ್ಸಿನಲ್ಲಿಯೂ ಉಳಿಯುತ್ತದೆ. ಎಂ.ಎಸ್.ನರಸಿಂಹಮೂರ್ತಿ ಅವರಿಗೆ ಅಭಿನಂದನೆಗಳು.

ಕಾಫಿ – ಕೆ ಆರ್ ಎಸ್ ಮೂರ್ತಿ

ಬಿಸಿ ಬಿಸಿ ಕಾಫಿ ಕುಡಿಯದೇ ನಮಗೆ ಬೆಳಿಗ್ಗೆ ಆಗುವುದೇ ಇಲ್ಲ. ಕಾಫಿ ನಮ್ಮನ್ನು ಅಷ್ಟರ ಮಟ್ಟಿಗೆ ಆವರಿಸಿಕೊಂಡುಬಿಟ್ಟಿದೆ. ಬೆಂಗಳೂರಿಗರಿಗಂತೂ ಏನಾದರೂ ಮಾಡುವ ಮುನ್ನ ಬೈಟೂ ಕಾಫಿ ಬೇಕು, ಏನೂ ಮಾಡದಿದ್ದರೂ ಬೈಟೂ ಕಾಫಿ ಬೇಕು. ಅಂತಹ ಕಾಫಿಯ ಸಾವಿರ ವರ್ಷದ ಇತಿಹಾಸವನ್ನು ನಮಗೆ ಸುಲಭವಾಗಿ ನೆನಪಿನಲ್ಲಿ ಉಳಿಯುವಂತೆ ಲಾವಣಿ ರೂಪದಲ್ಲಿ ರಚಿಸಿ ಹಾಡಿದ್ದಾರೆ ಲೇಖಕರು. ಕೆ ಆರ್ ಎಸ್ ಮೂರ್ತಿ ಅವರಿಗೆ ಅಭಿನಂದನೆಗಳು.

‘ತ್ರಿಮುಖಿ’ –ಪುಸ್ತಕ ಪರಿಚಯ - ಜಿ.ವಿ.ಅರುಣ

ವಿಜ್ಞಾನಿ ಜಿ.ವಿ ಅರುಣ ಅವರು ‘ತ್ರಿಮುಖಿ’ ಪುಸ್ತಕದ ಪರಿಚಯವನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟಿದ್ದಾರೆ. ವಿಕ್ರಂ ಸಾರಾಭಾಯ್, ಡಾಕ್ಟರ್ ಅಬ್ದುಲ್ ಕಲಾಂ, ಪ್ರೊ. ಎಸ್. ಆರ್. ರಾವ್ ಮುಂತಾದ ಶ್ರೇಷ್ಠ ವಿಜ್ಞಾನಿಗಳ ಜೊತೆ ಕೆಲಸ ಮಾಡಿದ ಮೇಧಾವಿ ಮತ್ತು ಕನ್ನಡಿಗರ ಪ್ರಾತಃಸ್ಮರಣೀಯರಾದ ಪ್ರೊ ಎ. ಆರ್. ಕೃಷ್ಣಶಾಸ್ತ್ರಿಗಳ ಮೊಮ್ಮಗ ಡಾ. ಸತ್ಯ ಅವರ ಸಾಧನೆಗಳ ಪರಿಚಯವನ್ನು ನಮಗೆ ಆಸಕ್ತಿ ಮೂಡಿಸುವಂತೆ ತಿಳಿಸಿಕೊಟ್ಟಿದ್ದಾರೆ. ಕನ್ನಡಿಗ ಡಾ.ಸತ್ಯ ಅವರ ಸಲಹೆ ಮೇರೆಗೆ ಬೆಂಗಳೂರಿನಲ್ಲಿ ಟಾಟಾ ಅಡ್ವಾನ್ಸ್ಡ್ ಮೆಟೀರಿಯಲ್ ಸಂಸ್ಥೆ ಪ್ರಾರಂಭವಾಗಿದ್ದು ನಮಗೆ ಹೆಮ್ಮೆ ತರುತ್ತದೆ. ನಮಗೆ ಗೊತ್ತಿಲ್ಲದ ಹಲವು ಮಹತ್ವದ ಸಂಗತಿಗಳನ್ನು ತಿಳಿಸಿ ನಮಗೆ ಹೆಚ್ಚಿನ ಅರಿವು ಮೂಡಿಸಿದ್ದಾರೆ. ನಾವೆಲ್ಲರೂ ಈ ಪುಸ್ತಕವನ್ನು ಕೂಡಲೇ ಖರೀದಿಸಿ ಓದುವಷ್ಟು ಕುತೂಹಲ ಮೂಡುತ್ತದೆ. ಜಿ.ವಿ. ಅರುಣ ಅವರಿಗೆ ಅಭಿನಂದನೆಗಳು.

ನಿತ್ಯನಿಜ -- ಶಾಂತಿವಾಸು

ಈ ಕವನದಲ್ಲಿ ನಿಸರ್ಗ ನಿಯಮವನ್ನು ಬಹಳ ಪರಿಣಾಮಕಾರಿಯಾಗಿ ಲೇಖಕಿ ಸೂಚಿಸಿದ್ದಾರೆ. ಅವರು ನೀಡಿರುವ ಉದಾಹರಣೆಗಳಂತೂ ನಮಗೆ ಚಿರಪರಿಚತವಾದದ್ದು. ಆದರೆ ಕವಯಿತ್ರಿಯು ವಿಶೇಷ ದೃಷ್ಟಿಕೋನದಿಂದ ದಿನನಿತ್ಯದ ಆಗುಹೋಗುಗಳನ್ನು ನೋಡಿ ನಮಗೆ ಅರಿವು ಮೂಡಿಸಿದ್ದಾರೆ. ಶಾಂತಿ ವಾಸು ಅವರಿಗೆ ಅಭಿನಂದನೆಗಳು.

ಸನಾತನ ಧರ್ಮ - ಸ್ಮೃತಿಗಳಲ್ಲಿ ಸ್ತ್ರೀ ಯರಿಗಿದ್ದ ಸ್ವಾತಂತ್ರ್ಯ - ಸನ್ಮಾನ--- ಡಾ.ಜಯಂತಿ ಮನೋಹರ್

ಈ ಲೇಖನದಲ್ಲಿ ಡಾ. ಜಯಂತಿ ಮನೋಹರ್ ಅವರು ಭಾರತದ ಮಹಿಳೆಯರಿಗೆ ವೇದ ಕಾಲದಿಂದಲೂ ಎಷ್ಟರಮಟ್ಟಿಗಿನ ಸ್ವಾತಂತ್ರ್ಯ ಮತ್ತು ಸನ್ಮಾನಗಳು ಲಭ್ಯವಿದ್ದವು ಎಂಬುದರ ಬಗ್ಗೆ ವೇದ ಮತ್ತು ಉಪನಿಷತ್ತುಗಳನ್ನು ಆಳವಾಗಿ ಅಧ್ಯಯನ ಮಾಡಿ ನಮಗೆ ತಿಳಿಸಿದ್ದಾರೆ. ಅಂದಿನ ಮಹಿಳೆಯರಿಗೆ ಪುರುಷರಿಗೆ ಲಭ್ಯವಿದ್ದ ಎಲ್ಲ ಅವಕಾಶಗಳು ದೊರಕುತ್ತಿದ್ದವು ಮತ್ತು ಮಹಿಳೆಯರ ಮೇಲೆ ನಿರ್ಬಂಧಗಳನ್ನು ಹೇರುವ ಪದ್ಧತಿಗಳು ವಿದೇಶಿಯರ ಪ್ರಭಾವದಿಂದ ಆಗಿರುವ ಪುರಾವೆಗಳನ್ನು ಲೇಖಕಿ ಉಲ್ಲೇಖಿಸಿದ್ದಾರೆ. ಎಂಟು ವರ್ಷದ ಬಾಲೆಯರನ್ನು “ಅಷ್ಟವರ್ಷಾ ಭವೇತ್ ಕನ್ಯಾ – ವಧು ಎಂಟು ವರ್ಷದವಳಾಗಿರಬೇಕು” ಎನ್ನುವ ನಿಯಮವನ್ನು ಹೇರಿದ್ದರಿಂದ ಬಾಲ್ಯವಿವಾಹ ಪದ್ಧತಿಯ ಪ್ರಾರಂಭವಾಯಿತು ಎಂದು ಲೇಖಕಿ ಉಲ್ಲೇಖಿಸಿದ್ದಾರೆ. ಇದೇ ರೀತಿಯಲ್ಲಿ ಪತಿಯು ಮರಣ ಹೊಂದಿದಾಗ ಅವನ ವಿಧವೆಯು ಅಂತಿಮ ಯಾತ್ರೆಯಲ್ಲಿ ಮೊದಲಿಗಳಾಗಿರಬೇಕು (“ಅಗ್ರೆ”) ಎಂಬುದನ್ನು ತಿರುಚಿ, ಸಹಗಮನ ಮಾಡಬೇಕು (ಅಗ್ನೆ) ಎಂಬ ಅರ್ಥ ಬರುವಂತೆ ಮಾಡಲಾಯಿತು ಎಂದು ಓದಿದ ನೆನಪು. ವೇದಕಾಲಾನಂತರದ ಗ್ರಂಥಗಳಲ್ಲಿ ಅನೇಕ ಕಡೆ ಕಾಣುವ ವೇದವಿರೋಧೀ ಹೇಳಿಕೆ ಹಾಗೂ ಆಚರಣೆಗಳ ಕಾರಣದಿಂದ ನಮ್ಮ ಮಹಿಳೆಯರ ಶೋಷಣೆ ಆಗುತ್ತಿರುವುದು ನಿಜಕ್ಕೂ ಶೋಚನೀಯ. ಈ ಲೇಖನವನ್ನು ಪ್ರಸ್ತುತಪಡಿಸಿದ ಡಾ. ಜಯಂತಿ ಮನೋಹರ್ ಅವರಿಗೆ ಅಭಿನಂದನೆಗಳು.

ಯಮನಟ್ಟೆ ಅಂದರೆ ಏನು ಅಮ್ಮಾವ್ರೆ – ನಾಗರತ್ನ ಚಂದ್ರಶೇಖರ್

ಹರಟೆ ಎಂಬ ಹೆಸರಿನಲ್ಲಿ ಲೇಖಕಿ ನಮಗೆ ಹೆಚ್ಚು ಪರಿಚಿತವಲ್ಲದ ಅನಕ್ಷರಸ್ಥರ ಜೀವನದ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಜೊತೆಗೆ ನಮ್ಮ ಪೀಳಿಗೆಯವರು ಬಾಲ್ಯದಲ್ಲಿ ಅನುಸರಿಸುತ್ತಿದ್ದ ಆಹಾರ ಪದ್ಧತಿಗಳನ್ನು ನೆನಪಿಸಿದ್ದಾರೆ. ಹೆಚ್ಚು ದುಬಾರಿಯಲ್ಲದ ಸರಳವಾದ ಆಹಾರಗಳಿಂದಲೇ ಆರೋಗ್ಯವನ್ನು ಕಾಪಾಡಿಕೊಂಡು ಜೀವನ ಸಾಗಿಸಬಹುದಾಗಿದ್ದರೂ ಇಂದಿನ ಪೀಳಿಗೆಯವರಿಗೆ ಹೆಚ್ಚಿನ ವಿದ್ಯೆ ಮತ್ತು ಜ್ಞಾನವಿದ್ದರೂ ಬಾದಾಮಿ, ಪಿಸ್ತಾ ಇತ್ಯಾದಿಗಳೇ ಬೇಕಾಗುವುದು ಒಂದು ವಿಪರ್ಯಾಸ. ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರಿಗೆ ಅಭಿನಂದನೆಗಳು.

ಸಾಹಿತ್ಯ ದಾಸೋಹ ೧೯೨ – ಅಧ್ಯಕ್ಷರ ಅನಿಸಿಕೆಗಳು

೧೦ನೇ ಜುಲೈ ೨೦೨೧ ರಂದು ನಡೆದ ೧೯೨ನೇ ಸಾಹಿತ್ಯ ದಾಸೋಹದ ಅಧ್ಯಕ್ಷತೆಯನ್ನು ಶ್ರೀ ಕೆ.ಆರ್.ಎಸ್. ಮೂರ್ತಿಯವರು ವಹಿಸಿದ್ದರು. ಆದಿನ ದಾಸೋಹದಲ್ಲಿ ಪ್ರಸ್ತುತಪಡಿಸಿದ ಪ್ರತಿಯೊಂದು ಬರಹಗಳ ಬಗ್ಗೆಯೂ ತಮ್ಮ ಅಧ್ಯಕ್ಷ ಭಾಷಣದಲ್ಲಿ ವಿಶ್ಲೇಷಿಸಿದ ಶ್ರೀ ಮೂರ್ತಿಯವರು ಅದರ ಬರಹ ರೂಪವನ್ನೂ ನೀಡಿದ್ದರು.

ಆದರೆ ಕಳೆದ ಬಾರಿಯ "ಸಾಹಿತ್ಯ ದಾಸೋಹ ೧೯೨' ರ ಪಿಡಿಎಫ್ ಸಂಕಲನದಲ್ಲಿ ಶ್ರೀ ಮೂರ್ತಿಯವರ ಅನಿಸಿಕೆಗಳನ್ನೊಳಗೊಂಡ ಲೇಖನವನ್ನು ಪ್ರಕಟಿಸುವುದು ಅದು ಹೇಗೋ ಬಿಟ್ಟುಹೋಗಿತ್ತು. ಅದನ್ನು ಇಲ್ಲಿ ಪ್ರಕಟಿಸಲಾಗಿದೆ.

ಎಲ್ಲರಿಗೂ ನಮಸ್ಕಾರ. ಇಂದು ನಮ್ಮ ವೇದಿಕೆಯ ೧೯೨ನೇ ಸಾಹಿತ್ಯ ದಾಸೋಹ – ನೋಡಿಯೋ ರೂಪದಲ್ಲಿ ನಡೆದಿದೆ. ಕಾರ್ಯಕ್ರಮ ನಿರ್ವಾಹಕರು ಇಂದಿನ ಅಧ್ಯಕ್ಷ ಪೀಠವನ್ನು ನನಗೆ ನೀಡಿದ್ದಾರೆ. ಇವತ್ತಿನ ಪ್ರಸ್ತುತಿಗಳ ಬಗ್ಗೆ ಅಭಿಪ್ರಾಯ ತಿಳಿಸುವುದಕ್ಕೆ ಮುಂಚೆ ಒಂದೆರಡು ಮಾತು.

ಒಂದು ಕವನವಾಗಲೀ, ಪ್ರಬಂಧವಾಗಲೀ, ವಿಡಂಬನೆಯಾಗಲೀ, ವೈಚಾರಿಕ ಲೇಖನವಾಗಲೀ ಅಂದರೆ ವಿಷಯ, ವಿಚಾರ, ಚಿಂತನೆಗಳ ನಿರೂಪಣಾ ಮಾಧ್ಯಮ ಯಾವುದೇ ಇದ್ದರೂ, ಅದನ್ನು ಅರ್ಥಪೂರ್ಣವಾಗಿಸೋದಕ್ಕೆ ಆಕರ್ಷಕವಾಗಿಸೋದಕ್ಕೆ ಕುಶಲತೆ, ಪ್ರತಿಭೆ, ಆಸಕ್ತಿ, ಅಧ್ಯಯನ, ಭಾಷೆಯ ಗಂಧ, ಭಾಷೆಯ ಮೇಲಿನ ಹಿಡಿತ ಚೆನ್ನಾಗಿ ಇರಬೇಕು, ಇದ್ದಷ್ಟೂ ಅನುಕೂಲ. ಇಲ್ಲದಿದ್ದರೆ ಕಷ್ಟ.

ಕವಿಗಳು ಮತ್ತು ಬರಹಗಾರರು ಅವರ ಕಲ್ಪನೆ ಮತ್ತು ಭಾವನೆಗಳನ್ನು ಅಭಿವ್ಯಕ್ತಿಸುವ ರೀತಿಯಲ್ಲಿ ಭಿನ್ನತೆಯ ಜೊತೆಗೆ ವಿಶಿಷ್ಟತೆ ಅನ್ನೋದು ಇದ್ದೇ ಇರುತ್ತೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ್ದು ಏನಪ್ಪಾ ಅಂದ್ರೆ ಒಬ್ಬೊಬ್ಬರ ದೃಷ್ಟಿ, ಚಿಂತನೆ ಅಥವಾ ದೃಷ್ಟಿಕೋನ ಒಂದೊಂದು ರೀತಿ ಇರುತ್ತೆ. ಅದನ್ನ ಅವರು ತೆರೆದಿಡುವ ರೀತಿ ಬೇರೆ ಬೇರೆಯಾಗಿಯೇ ಇರುತ್ತೆ. ಅವರವರ ಅರಿವು ಮತ್ತು ಅನುಭವಕ್ಕೆ ತಕ್ಕಂತೆ ಇರುತ್ತೆ. ನಾನು ಹಿಂದೆ ಅಂಕಣವೊಂದರಲ್ಲಿ ಒಂದು ಬರಹ ಓದಿದ್ದೆ. ಅದನ್ನ ಯಾರು ಬರೆದದ್ದು ಅಂತ ನೆನಪಿಲ್ಲ. ಆ ಬರಹದ ಪ್ರಕಾರ. ಒಂದು ಪದಕ್ಕೆ, ಅದು ಪದ ಮಾತ್ರವೇ ಆದರೂ, ಅದರ ಅರ್ಥವಿಸ್ತಾರ ಅಗಾಧವಾಗಿರುತ್ತದೆ.

ಉದಾಹರಣೆಗೆ: ಕವಿತೆ ಅನ್ನೋ ಪದ ತೆಗೆದುಕೊಂಡರೆ, 'ಕವಿತೆ' ಅಂದರೆ ಏನು? ಅದನ್ನು ನಿನ್ನ ಅಭಿಪ್ರಾಯದಲ್ಲಿ ಹೇಗೆ ವ್ಯಕ್ತಪಡಿಸುತ್ತೀಯ? ಅಂತ ಮಾಮರವನ್ನ ಕೇಳಿದರೆ ಮಾಮರ ಹೇಳ್ತಂತೆ, 'ಕವಿತೆ ಎಂದರೆ ಮಣ್ಣ ಸಾರವ ಹೀರಿ ಸಿಹಿ ಹಣ್ಣ ನೀಡುವುದೇ ಕವಿತೆ' ಅಂತ. ಹುಲ್ಲುಗಾವಲಿನಲ್ಲಿ ಮೇಯ್ತಾ ಇರೋ ಹಸುವನ್ನ ಕೇಳಿದರೆ 'ಕರುವಿಗೆ ಹಾಲುಣಿಸುವಾಗಿನ ವರ್ಣಿಸಲಸದಳವಾದಂತಹ ಕ್ಷಣದ ಪುಳಕವೇ ಕವಿತೆ' ಅಂತ ಹೇಳ್ತಂತೆ. ಒಬ್ಬ ತಾಯಿಯನ್ನ ಕೇಳಿದ್ದಕ್ಕೆ 'ಮನವನರಳಿಸುವ ಮಗುವ ನಗುವೇ ಕವಿತೆ' ಅಂತ ಹೇಳಿದರೆ, ಮಳೆ 'ಎನ್ನ ಸ್ಪರ್ಶದಿಂ ಭುವಿಯ ಪಸರಿಸಿದ ಘಮಲು ಕವಿತೆ' ಅಂತಂತೆ. ಹೀಗೇ ಕೇಳ್ತಾ ಕೇಳ್ತಾ ಒಬ್ಬ ಮುದುಕಿಯನ್ನ 'ಕವಿತೆ ಅಂದ್ರೆ ಏನಜ್ಜಿ?' ಅಂತ ಕೇಳಿದ್ದಕ್ಕೆ, ತಾನು ಸವೆಸಿದ ಬದುಕನ್ನ ತೆರೆದಿಟ್ಟು, 'ಇದೇ

ನೋಡು ಒಂದು ಅದ್ಭುತ ಕವಿತೆ' ಅಂತ ಹೇಳ್ತಾ ಬೊಚ್ಚು ಬಾಯಿಯಲ್ಲಿ ನಕ್ಕಳಂತೆ ಆ ಅಜ್ಜಿ. ನೋಡಿದ್ರಾ ಕವಿತೆ ಪದದ ಪ್ರಭಾವ!

ಹಾಗೆಯೇ 'ಬದುಕು' ಅನ್ನೋ ಪದ ಮತ್ತೆ 'ಅನುಭವ' ಅನ್ನೋ ಪದಗಳಿಗೂ ವಿಶಾಲ ಅರ್ಥವ್ಯಾಪ್ತಿ ಇದೆ. ಒಂದು ವಿಷಯ, ವಿಚಾರ, ಚಿಂತನೆ ಅಂತ ಅನ್ನೋದು ಏನೇ ಇರಲಿ, ಅದು ಸಾಮಾಜಿಕವಾಗಬಹುದು, ವ್ಯಾವಹಾರಿಕ ವಾಗಬಹುದು, ರಾಜಕೀಯವಾಗಬಹುದು, ನೀತಿನಿಯಮ, ವ್ಯವಸ್ಥೆ, ಅವ್ಯವಸ್ಥೆ ಆಗಿರಬಹುದು, ಬರೆದಾಗ ಮನಸ್ಸನ್ನು ಸೆರೆಹಿಡಿಯುವಂತೆ ಬರೀಬೇಕು, ಬರೆದದ್ದು ಒಪ್ಪವಾಗಿರಬೇಕು, ಸಪ್ಪೆಯಾಗಬಾರದು ಅಷ್ಟೇ. ಆಗ ತೃಪ್ತಿ ಮತ್ತು ಸಾರ್ಥಕತೆ ಸಿಗುತ್ತೆ, ಮತ್ತದರ ಸ್ವೀಕೃತಿ ಚೆನ್ನಾಗಿರುತ್ತೆ.

ಹಾಗೇನೆ "ಭಾವ"ದ ದೃಷ್ಟಿಯಿಂದ ನೋಡಿದರೆ ನಾವು ನಿರೂಪಿಸುವುದು ಏನೇ ಇರಲಿ, ಅಂದರೆ ಆಕ್ರೋಶವೋ–ಆನಂದವೋ, ಕಾಂತಿಯೋ–ಕ್ರಾಂತಿಯೋ, ನೋವೋ–ನಲಿವೋ, ಸರಸವೋ–ವಿರಸವೋ, ಹಾಸ್ಯವೋ–ಲಾಸ್ಯವೋ, ಬೇಗೆಯೋ–ಬೇಸರವೋ, ಕೋಪವೋ–ತಾಪವೋ, ಭವ್ಯತೆಯೋ–ಭೀಕರತೆಯೋ ಅದು ಒಂದು ಕಿಡಿಯನ್ನ –ಒಂದು ಸ್ಪಾರ್ಕ್– ಓದುಗರ ಮನಸ್ಸಿನಲ್ಲಿ ಹೊತ್ತಿಸಬೇಕು.

ಒಟ್ಟಿನಲ್ಲಿ ಸಾಹಿತ್ಯ, ಸಂಸ್ಕೃತಿ, ಪುರಾಣ, ಇತಿಹಾಸ ಇವುಗಳಲ್ಲಿನ ವ್ಯಕ್ತಿ–ಶಕ್ತಿ ಮತ್ತು ನಡೆ–ನುಡಿಗಳು, ಭಾವನೆ–ಕಲ್ಪನೆ–ನಿರೂಪಣೆಗಳ ಮೂಲಕ ವಿನಿಮಯವಾಗುತ್ತಿರಬೇಕು, ಕಾಲಕ್ಕೆ ತಕ್ಕಂತೆ ವಿಕಾಸವಾಗುತ್ತಿರಬೇಕು. ಅದರಿಂದ ಸಮಾಜಕ್ಕೆ ಉಪಯೋಗವಾಗುತ್ತಿರಬೇಕು ಅನ್ನೋದು ಮುಖ್ಯ. ಈ ರೀತಿಯ ಹಂದರ, ತಳಹದಿ, ಚೌಕಟ್ಟು, ಏನು ಬೇಕಾದರೂ ಅನ್ನಿ, ಅದು ನಮ್ಮ ವೇದಿಕೆಯ ಚಟುವಟಿಕೆಗಳಲ್ಲಿ ಬಹಳ ಆರೋಗ್ಯ ಕರವಾಗಿ, ಪಾಂಡಿತ್ಯಪೂರ್ಣವಾಗಿ, ಸ್ವಾರಸ್ಯಕರವಾಗಿ, ಯಥೇಚ್ಛವಾಗಿ ಲಭ್ಯವಾಗ್ತಾ ಇದ್ದು ಎಲ್ಲರ ಜ್ಞಾನ ದಾಹವನ್ನು ನೀಗಿಸುತ್ತಾ ಬಹಳ ಮಧುರ–ಮನೋಹರ ಅನುಭವಗಳನ್ನು ಕೊಡ್ತಾ ಇದೆ. ಅದೇ ಸಂತೋಷದ ಸಂಗತಿ.

ಪ್ರಸ್ತುತಿಗಳ ಬಗೆಗಿನ ಅಭಿಪ್ರಾಯ

ಇವತ್ತಿನ ಪ್ರಸ್ತುತಿಗಳ ಬಗ್ಗೆ ನನ್ನ ಯೋಗ್ಯತಾನುಸಾರ ಅರ್ಥೈಸಿಕೊಂಡ ಒಂದು ಸಂಕ್ಷಿಪ್ತ, ಮುಕ್ತ ಅನಿಸಿಕೆಗಳನ್ನ ಹೇಳುತ್ತಾ, ಪ್ರಸ್ತುತಿಗಳ ಹೈಲೈಟ್ ತಿಳಿಸುವ ಪ್ರಯತ್ನ ಮಾಡುತ್ತೇನೆ. ಹೈಲೈಟ್ ಅಂದರೆ ಪ್ರಸ್ತುತಿಯ ನಲ್ಬೆಳಗು ಅಂದುಕೊಳ್ಳೋಣ. ನನ್ನ ಪ್ರಯತ್ನದಲ್ಲಿ ಸಣ್ಣಪುಟ್ಟ ದೋಷಗಳು ಕಂಡುಬಂದಲ್ಲಿ ಅದಕ್ಕೆ ಕ್ಷಮೆ ಇರಲಿ. ಕೆಲ ಪ್ರಸ್ತುತಿಗಳ ಬಗ್ಗೆ ಒಂದೆರಡು ಮಾತು ಹೆಚ್ಚಾಗಬಹುದು. ಇನ್ನು ಕೆಲವುಗಳ ಬಗ್ಗೆ ಸ್ವಲ್ಪ ಕಡಿಮೆ ಆಗಬಹುದು. ಹಾಗಾದಾಗ ಅದು ಲೇಖಕರ ಕೊರತೆಯಲ್ಲ, ನನ್ನ ಕೊರತೆ ಎಂದು ತಿಳಿದುಕೊಳ್ಳಿ. ಸಾಧ್ಯವಾದಷ್ಟು ತೂಗಿ ಹೇಳುವ ಪ್ರಯತ್ನ ಮಾಡುತ್ತೇನೆ.

'ಹುಲಿ ಶಿಕಾರಿ' – ಶ್ರೀ ಗಣಪತಿ ಹೆಗಡೆ

ವೇದಿಕೆಯಲ್ಲಿ ಪೌರಾಣಿಕ ಪ್ರಸಂಗಗಳು ಮತ್ತು ವ್ಯಕ್ತಿಚಿತ್ರಗಳನ್ನು ವಿಶಿಷ್ಟ ಪರಿಯಲ್ಲಿ ಬಹಳ ಚೆನ್ನಾಗಿ ಕಟ್ಟಿಕೊಡುತ್ತಾ ನಮಗೆಲ್ಲ ಚಿರಪರಿಚಿತರಾಗಿರುವ ಶ್ರೀ ಗಣಪತಿ ಹೆಗಡೆ ಅವರು 'ಹುಲಿ ಶಿಕಾರಿ' ಎಂಬ ಒಂದು ಒಳ್ಳೆಯ ಪ್ರಸ್ತುತಿಯನ್ನು ಕೊಟ್ಟಿದ್ದಾರೆ. ಪ್ರಸಂಗದ ಮುಖ್ಯ ಪಾತ್ರಧಾರಿ ಮೂರೂರಿನ 'ಸೀತಾರಾಮ ಹರಿ ಹೆಗಡೆ.' ಅವನು ಊರಿನಲ್ಲಿ ಉಪಟಳಕ್ಕೆ ಕಾರಣವಾದ ಒಂದು ಹುಲಿಯನ್ನು ಹೇಗೆ ಕೊಂದ ಎನ್ನುವ ವಿವರಣೆ ಅದ್ಭುತವಾಗಿ ಮೂಡಿಬಂತು. ಹುಲಿಯನ್ನು ಕೊಂದಿದ್ದಕ್ಕಾಗಿ ಅವನಿಗೆ ತಹಸೀಲ್ದಾರರಿಂದ ಇನಾಮು ಅಭಿನಂದನೆ ಎಲ್ಲಾ. ಈ ಕಥಾ ಪ್ರಾರಂಭವೇ ಚೆನ್ನ! ಜೊತೆಗೆ ಕತೆಯಲ್ಲಿ ಪದಗಳು ಮಣ್ಣಿನ ವಾಸನೆ ಹೊತ್ತುಕೊಂಡು ಘಮ್ಮಂತ ಇವೆ. ಗುರಿಕಾರ ಸೀತಾರಾಮ ಹೆಗಡೆ ಮತ್ತು ಅವನ ಹುಂಬ ಮಿತ್ರನ ಹುಲಿ

ಹೊಡೆಯಲು ತಯಾರಿ ಮತ್ತು ಹೊಡೆಯುವ ಕ್ರಮ, ಗರ್ಭಿಣಿ ಹೆಂಡತಿ ಇದ್ದಾಗ ಕೊಲ್ಲುವುದು ಸರಿಯೇ? ಎಂಬ ಪ್ರಶ್ನೆ. ನಂಬಿಕೆಗಳು ಮತ್ತು ಪರಿಹಾರ ಈ ತರಹದ ಸೂಕ್ಷ್ಮ ವಿಚಾರಗಳು ಎಲ್ಲವೂ ಚೆನ್ನಾಗಿವೆ.

"ಅವರೆಕಾಯಿ ಸಾರು" – ಶ್ರೀಮತಿ ವಿಜಯಕುಮಾರಿ

ಶ್ರೀಮತಿ ವಿಜಯಕುಮಾರಿ ಅವರು ಅವರೆಕಾಯಿ ಸಾರಿನ ಬಗ್ಗೆ ಒಂದು ಬರಹವನ್ನು ಓದಿದರು. ಅವರೆಕಾಯಿಯ ಬೆಳಗಿನ ತಿಂಡಿ ಮತ್ತು ಮಧ್ಯಾಹ್ನದ ಕುರುಕಲು ತಿಂಡಿ ಬಹಳ ಫೇಮಸ್ ಅಂತ ಹೇಳ್ತಾ, ಸಂತೆಯಿಂದ ತಂದು ಬಿಚ್ಚಿದ ಸೊಗಡವರೆ ವಾಸನೆ ಜೊತೆಗೆ ಕಾಳಿನ ಸಾರು ತಿಂದರೆ ಸಿಗುವ ಆನಂದಾನುಭೂತಿಯ ಬಗ್ಗೆ ತಿಳಿಸಿ ಸಾಸಿವೆ ಇಂಗು ಒಗ್ಗರಣೆ ಹಾಕಿದ ಅವರೆ ಕಾಳಿನ ರಸಪಾಕ ವಿಧಾನವನ್ನು ತಿಳಿಸಿದರು. ಎಂದಿದ್ದರೂ ಅವರೆಕಾಳು ಸಾರಿಗೆ ಫಸ್ಟ್ ಪ್ರೈಸ್ ಎಂದರು. ಆ ಅಭಿಪ್ರಾಯಕ್ಕೆ ಎರಡನೇ ಅಭಿಪ್ರಾಯವೇ ಇಲ್ಲ ಎಂದು ನನ್ನ ಅಭಿಪ್ರಾಯವನ್ನೂ ಸೇರಿಸಿಬಿಡ್ತೀನಿ. ಲೇಖನದಲ್ಲಿ ರಸ ಸ್ವಾರಸ್ಯ ಚೆನ್ನಾಗಿತ್ತು

"ಪ್ರಶಸ್ತಿಗೆ ಪರದಾಟ" – ಶ್ರೀ ಎಂ.ಎಸ್. ನರಸಿಂಹಮೂರ್ತಿ

ಎಂ.ಎಸ್.ನರಸಿಂಹಮೂರ್ತಿ ಅಥವಾ MSN ಎಂಬ ಹೆಸರು ಕನ್ನಡಿಗರಿಗೆ ಬಹಳ ಚಿರಪರಿಚಿತವಾದದ್ದು. ಇವತ್ತು ಅವರು ಓದಿದ ಹಾಸ್ಯ ಬರಹ 'ಪ್ರಶಸ್ತಿಗೆ ಪರದಾಟ'ದಲ್ಲಿ ಅವರ ಚೇತೋಹಾರಿ ಪಾತ್ರಧಾರಿ ವಿಶ್ವ, ಪ್ರಶಸ್ತಿ ಸಿಗುತ್ತೆ ಅನ್ನೋ ಆಸೆಗೆ ಕವನವೊಂದನ್ನು, ಅದೂ ಕೋರೋನ ಬಗ್ಗೆ ಬರೆದು, ದೆಹಲಿಯ ಯಾವುದೋ ಗಲ್ಲಿಗೆ ಕಳುಹಿಸಿ ಮಿತ್ರನೊಡನೆ ಹಂಚಿಕೊಂಡಾಗ ಮಿತ್ರ 'ಅದೆಲ್ಲಾ ಧೋಖಾ, ಮೋಸ ಸುಮ್ಮನೆ ಇರು' ಅಂತ ಬುದ್ಧಿ ಹೇಳ ಬೇಕಾಯಿತು. ಯಾಕೆಂದರೆ ಮಿತ್ರನೂ ಅನುಭವಸ್ಥನೇ. ಬಹಳ ಹಾಸ್ಯಮಯವಾಗಿ ಬರೆದಿದ್ದಾರೆ. ಓದುವಾಗ ನಗು ದಬ್ಕೊಂಡು ಬರುತ್ತೆ.. ಉದಾಹರಣೆಗೆ ಈ ಸಾಲುಗಳನ್ನು ನೋಡಿ: 'ಕೊಂದ ಹುಲಿಯ ಜೊತೆ ತಾತ ಫೋಟೋ ತೆಗೆದುಕೊಂಡಿದ್ದ. ಅದು ಶತಮಾನದಷ್ಟು ಹಳೆಯ ಫೋಟೋ. ಹುಲಿ ಯಾವುದು, ತಾತ ಯಾರು ಸ್ಪಷ್ಟವಾಗಿ ತಿಳಿಯುತ್ತಿರಲಿಲ್ಲ. 'ಕೆಳಗಿರುವುದು ಹುಲಿ, ಮೇಲೆ ಇರೋದು ತಾತ' ಎಂದು ಬಂದವರಿಗೆಲ್ಲಾ ವಿಷಯ ಹೇಳುತ್ತಿದ್ದ' ಅನ್ನೋದು ಎಷ್ಟು ನಗು ತರಿಸುತ್ತೆ ಅಲ್ವೇ? ಜೊತೆಗೆ ಅದೆಷ್ಟು ಒಳನೋಟಗಳನ್ನು ಬಿಚ್ಚಿಡುತ್ತದೆ ನೋಡಿ! ಉತ್ತಮ ಹಾಸ್ಯ ಲೇಖನ.

'ನಾನು ನನ್ನವರು ಮತ್ತು ಆಟ" – ಶ್ರೀಮತಿ ಎಲ್.ಗಿರಿಜಾ ರಾಜ್

ಶ್ರೀಮತಿ ಎಲ್.ಗಿರಿಜಾ ರಾಜ್ ಅವರ ವಿಡಂಬನಾತ್ಮಕ ಬರಹ 'ನಾನು ನನ್ನವರು ಮತ್ತು ಆಟ'. ಒಂದು ತಿಳಿಹಾಸ್ಯದ ಗಂಡ–ಹೆಂಡತಿ ನಡುವಣ ಸರಸ ಬರಹ. ಗಂಡನಿಗೆ ಬ್ಯಾಡ್ಮಿಂಟನ್ ಆಟದ ಚಪಲ, ವ್ಯಾಯಾಮ ಆಗುತ್ತೇಂತ. ಹೆಂಡತಿಗೆ ಅದು ಬೋರು. ಗಂಡ ಅವಳನ್ನ ಪುಸಲಾಯಿಸಿ ಒಪ್ಪಿಸಿ ಮನೆ ಮುಂದೆ ಆಟ ಆಡೋವಾಗ ಅವರಿವರಿಗೆ ಚೆಂಡು ತಗುಲಿಸಿ ಆಟ ಸಫಲವಾಗದೆ, ಆಟ ನಿಂತದ್ದು ಹೆಂಡತಿಗೆ ನಿರಾಳ. ಗಂಡ ಬೆಳಿಗ್ಗೆ ಬೇಗ ಸ್ನೇಹಿತನ ಮನೆಗೇ ಹೋಗ್ತೀನಿ ಅಂತ ಅಂದ್ರೂ ನಿದ್ದೆ ಬಿಡಕ್ಕಾಗದು. ಕೊನೆಗೆ ಆಟಕ್ಕೆ ಸ್ನೇಹಿತನ ಮನೆಗೂ ಹೋಗದೆ ಮತ್ತೊಂದು ಪ್ರಾಜೆಕ್ಟ್ ಫೇಲ್! ಹೆಂಡತಿಯ ಕೀಟಲೆ! ಕಥನ ಉತ್ತಮವಾಗಿತ್ತು.. ಮುಗುಳ್ನಗೆ ಮಾತ್ರವಲ್ಲದೆ ಒಂದಷ್ಟು ಜೋರಾಗಿ ನಗು ತರಿಸುವಂತಹ ಸಾಲುಗಳಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು

"ಮರೆಯಲಿ ಹ್ಯಾಂಗ, ನಮ್ಮೂರ ಚಕೋತ" – ಶ್ರೀಮತಿ ನಾಗರತ್ನ ಚಂದ್ರಶೇಖರ್

ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರು 'ಮರೆಯಲಿ ಹ್ಯಾಂಗ ನಮ್ಮೂರ ಚಕೋತ' ಎನ್ನುವ ಲಲಿತ ಪ್ರಬಂಧವನ್ನು ಮಂಡಿಸಿದರು. ಇವತ್ತಿನ ಬರಹದಲ್ಲಿ ಚಕೋತ ಹಣ್ಣನ್ನು ಮೋಸಂಬಿಯ ಅಪ್ಪ ಅಂತ ತಮಾಷೆಯಾಗಿ ಕರೆದಿದ್ದಾರೆ. ತವರು ಮನೆಯ ಹಿತ್ತಲಿನಲ್ಲಿ ಬೆಳೆಯುತ್ತಿದ್ದ ಚಕೋತದ ಪುರಾಣವನ್ನು

ಸಾರಸ್ಯಕರವಾಗಿ ಚಿತ್ರಿಸಿದ್ದಾರೆ. ಬೆಂಗಳೂರಿನಲ್ಲಿ ನೆಲೆಸಿದ ಮೇಲೆ ಚಕೋತಾ ಸ್ವಲ್ಪ ನಮ್ಮಿಂದ ಕಣ್ಮರೆಯಾಯಿತು. ಊರಿನಲ್ಲಿಯೂ ಅದು ಒಣಗಿಹೋಯಿತು ಅಂತ ಬೇಸರಪಡುತ್ತಾ ಬರಹದ ಕೊನೆಯಲ್ಲಿ, ಬೆಂಗಳೂರಿನಲ್ಲಿ ಮತ್ತೆ ಚಕೋತ ಗಿಡ ಬೆಳೆಸಿ ಮುಂದೊಂದು ದಿನ ದಾಸೋಹದ ಮಿತ್ರರೆಲ್ಲರಿಗೂ ಉಣಿಸುವ ಆಶಯ ಇಟ್ಟುಕೊಂಡಿದ್ದಾರೆ. ಅದಾದರೂ ಸಫಲವಾಗಲಿ ಅನ್ನೋದೇ ನನ್ನ ಹಾರೈಕೆ!

"ಕಚೇರಿ ಪ್ರಹಸನ" – ಶ್ರೀಮತಿ ಟಿ.ಎಸ್. ಶ್ರವಣಕುಮಾರಿ

ನಮ್ಮ ವೇದಿಕೆಯ ಅತ್ಯುತ್ತಮ ಕಥೆಗಾರ್ತಿ ಎಂದೇ ಹೆಸರು ಮಾಡಿರುವ ಶ್ರೀಮತಿ ಶ್ರವಣಕುಮಾರಿ ಅವರ ಕಥೆಗಳನ್ನಾಗಲೀ ಲೇಖನಗಳನ್ನಾಗಲೀ, ಇತರ ಪ್ರಕಾರದ ಬರಹಗಳನ್ನೇ ಆಗಲಿ ಓದುವುದು ಒಂದು ರೀತಿಯ ಖುಷಿ ಕೊಡುತ್ತದೆ. ಆ ಬರಹಗಳಲ್ಲಿನ ಸ್ವಾರಸ್ಯವೇ ಹಾಗೆ. ನವಿರಾದ ಅತಿ ಸಹಜವಾದ ಪದಗಳಿಂದ ಸೂಕ್ಷ್ಮವಾದ ವಿಷಯಗಳನ್ನು ಎಳೆಎಳೆಯಾಗಿ ಬಿಡಿಸುತ್ತಾ, ತಿಳಿತಿಳಿಯಾಗಿ ತಿಳಿಸುತ್ತಾ ಹೋಗುತ್ತಾರೆ. ಬದುಕಿನ ವಿವಿಧ ಸ್ತರಗಳ, ವಿವಿಧ ನೋಟ, ಒಳನೋಟಗಳ, ವಿವಿಧ ಸ್ವಭಾವಗಳ ಚಿತ್ರಣವನ್ನು ಬಹಳ ಚೆನ್ನಾಗಿ ಅಭಿವ್ಯಕ್ತಿಸುತ್ತಾರೆ. ಇದು ಸಹಜತೆಗೆ, ನೈಜತೆಗೆ ಬಹಳ ಹತ್ತಿರ ಅಂತ ಅನಿಸುತ್ತೆ. ಇವತ್ತಿನ 'ಕಚೇರಿ ಪ್ರಹಸನ' ಎಂಬ ಪ್ರಸ್ತುತಿಯ ಬಗ್ಗೆಯೂ ಇದು ಅನ್ವಯವೇ. ಬ್ಯಾಂಕಿಗೆ ಒಮ್ಮೆ ಏಕಕಾಲದಲ್ಲಿ ಶಾಖಾ ವ್ಯವಸ್ಥಾಪಕರು ಹಾಗೂ ಲೆಕ್ಕಾಧಿಕಾರಿ ಇಬ್ಬರೂ ವರ್ಗಾವಣೆಯಾಗಿ ಬರುವರೆಂದು ತಿಳಿದಾಗ, ಅವರ ಬಗ್ಗೆ ತಿಳಿದುಕೊಂಡ ಮಾಹಿತಿಗಳ ಅನುಸಾರ ಅವರನ್ನು ತೊಘಲಕ್ ಮತ್ತೆ ಲಂಕಿಣಿ ಮಾಡಿ ಅವರ ಬ್ಯಾಂಕ್ ರಾಜ್ಯಭಾರ ವೈಖರಿ, ಹುಚ್ಚು ಶಿಸ್ತು, ಅದರಿಂದಾಗುವ ಗಲಿಬಿಲಿ, ಕಿರಿಕಿರಿ ಜೊತೆಗೆ ಅವರ ಹೆಂಡತಿಯ ಕ್ಯಾನ್ಸರ್ ನಾಟಕ, Year End ಊಟ ಹಾಕೋವಾಗ ಮುಗ್ಗಿದ ಪೇಡ ತರಿಸಿದ್ದು, ಹೀಗೆ ಅನೇಕ ನಿತ್ಯಜೀವನದ ಸ್ವಾರಸ್ಯಕರ ಸಂಗತಿಗಳ ಬಗ್ಗೆ ಬರೆದ ಒಂದು ಒಳ್ಳೆಯ ಪ್ರಹಸನ ಲೇಖನ ಅಂತ ಹೇಳಬಹುದು.

"ಮುಗ್ಧ ಬಾಲೆ ಮತ್ತು ಅಂತರ್ಜಾಲದ ಪಾಠ" – ಶ್ರೀಮತಿ ರೇಣುಕಾ ದೇಸಾಯಿ

ಶ್ರೀಮತಿ ರೇಣುಕಾ ದೇಸಾಯಿಯವರು 'ಮುಗ್ಧ ಬಾಲೆ ಮತ್ತು ಅಂತರ್ಜಾಲದ ಪಾಠ' ಎನ್ನುವ ಕಥಾಪ್ರಸಂಗವೊಂದನ್ನು ಮಂಡಿಸಿದರು. ಕೊರೋನ ಸಮಯದಲ್ಲಿ ಮಕ್ಕಳು ಶಾಲೆಗೆ ಹೋಗಲು ಸಾಧ್ಯವಾಗದೆ ಮನೆಯಲ್ಲೇ ಪಾಠ ಕಲಿಯುತ್ತಿರುವಂತಹ ಸಂದರ್ಭ. ಆ ಮಾದರಿಯ ಬಲಾಬಲ, ಉಪಯೋಗ, ಪೋಷಕರ ಗೊಣಗು ಇವುಗಳ ಬಗೆಗಿನ ವಿಷಯ ಬಹಳ ಒಳ್ಳೆಯದೇ. ಅಂತರ್ಜಾಲ ಪಾಠದ ಕ್ರಮಕ್ಕೆ ಪೋಷಕರ ಸಪೋರ್ಟ್ ಅಷ್ಟಾಗಿ ಇಲ್ಲದೇ ಇದ್ದರೂ, ಮುಗ್ಧ ಬಾಲೆಯ ಬಾಯಲ್ಲಿ ಧನಾತ್ಮಕ ಚಿಂತನೆಯ, ಗುರುಗಳನ್ನೂ, ಅಂತರ್ಜಾಲ ಪಾಠದ ಪರಿಯನ್ನೂ ಸಮರ್ಥಿಸುವ ಮಾತು! ಬಾಲೆ ಖಂಡಿತ ಮುಗ್ಧಳಲ್ಲ. ಪ್ರಸಕ್ತ ಪರಿಸ್ಥಿತಿಯ ಸಮಸ್ಯೆಗೆ ಮುಗ್ಧ ಬಾಲೆಯ ದೃಷ್ಟಿಕೊಟ್ಟಿದ್ದು ಬರಹದ ವಿಶೇಷತೆ.

"ಚೆನ್ನಬೈರಾದೇವಿ (ಕರಿಮೆಣಸಿನ ರಾಣಿಯ ಅಕಳಂಕ ಚರಿತೆ)"–ಶ್ರೀ ಹೇಮಚಂದ್ರ ರಾಯಚೂರು

ಶ್ರೀ ಹೇಮಚಂದ್ರ ರಾಯಚೂರು ಅವರು ಡಾ. ಗಜಾನನ ಶರ್ಮ ಅವರು ಬರೆದಿರುವ 'ಚೆನ್ನಬೈರಾದೇವಿ (ಕರಿಮೆಣಸಿನ ರಾಣಿಯ ಅಕಳಂಕ ಚರಿತೆ)' ಅನ್ನೋ ಕನ್ನಡ ಕಾದಂಬರಿಯ ಪರಿಚಯ ಮಾಡಿಕೊಟ್ಟರು. ರಾಣಿ ಚೆನ್ನಬೈರಾದೇವಿ ಜೈನ ಧರ್ಮದವಳು. ಆಕೆಯ ಬಗ್ಗೆ ಹೆಚ್ಚಿನ ವಿವರಣೆಗಳನ್ನು ಅವರ ಬರಹದಲ್ಲಿ ತಿಳಿಸಿದ್ದಾರೆ. ಕಾದಂಬರಿಕಾರರು ರಾಣಿಯ ಸಾಹಸ ಬದುಕನ್ನು ಸಮರ್ಥವಾಗಿ ನಿರೂಪಿಸಿದ್ದಾರೆ. ಯುದ್ಧದ ವಿವರಗಳು ಬಹಳ ಚೆನ್ನಾಗಿವೆ. ಕಥೆ ಓದಿದ ನಂತರ ಚೆನ್ನಬೈರಾದೇವಿ ವ್ಯಕ್ತಿತ್ವ ಮನಸ್ಸಿನಲ್ಲಿ ಉಳಿಯುತ್ತದೆ ಅನ್ನೋ ಅಭಿಪ್ರಾಯ ವ್ಯಕ್ತಪಡಿಸಿದರು. ಒಳ್ಳೆಯ ಪುಸ್ತಕ ಪರಿಚಯ. ಪುಸ್ತಕವನ್ನು ಎಲ್ಲರೂ ಓದುವಂತಾಗಲಿ.

"ಕಥಾ ಸರಿತ್ಸಾಗರ – ಶ್ರೀ ವಿಠಲ್ ಇಜೇರಿ

ಮಹತ್ವದ ಪ್ರಾಚೀನ ಕಥಾಸಂಗ್ರಹ ಸೋಮದೇವನ 'ಕಥಾ ಸರಿತ್ಸಾಗರ'ದ ಬಗ್ಗೆ ಶ್ರೀ ವಿಠಲ್ ಇಜೇರಿಯವರು ವಿವರಣಾತ್ಮಕ ಲೇಖನ ಓದಿದರು. ಕಥಾ ಸರಿತ್ಸಾಗರವು ಸಂಸ್ಕೃತದ ಒಂದು ದೊಡ್ಡ ಪದ ್ಯಕಾವ್ಯ. ಆಂಗ್ಲ ಭಾಷೆಗೆ, Ocean of Stories ಎಂಬ ಹೆಸರಿನಲ್ಲಿ ಭಾಷಾತರವೂ ಆಗಿದೆ ಅಂತಾ ಹೇಳಿದ್ರು. ಸ್ವಾರಸ್ಯವೇ ಕಥೆಯ ಜೀವ, ಕಥಾಯಾಮ್ ಸರಸಂ ವಸ್ತು ಅನ್ನೋ ಸಾಲು ಬಹಳವೆ ಸಹಜ ಮತ್ತು ಸತ್ಯ. ಹಳೆಯ ಕಾಲದ ಕಥೆಗಳು ಬಾಯಿಂದ ಬಾಯಿಗೆ, ಕಾಲದಿಂದ ಕಾಲಕ್ಕೆ ಹರಡಿದಾಗ ಅದರ ಆಕಾರ, ಪ್ರಮಾಣಗಳು ಬದಲಾಗುತ್ತ ಹೋಗುತ್ತವೆ. ಬರಹ ರೂಪದಲ್ಲಿ ದಾಖಲೆಯಾದಾಗ ಅದ್ಕಕೊಂದು ಚೌಕಟ್ಟು ಸಿಗುತ್ತೆ ಅನ್ನೋ ಮಾತು ನಿಜ. ಕಥಾ ಸರಿತ್ಸಾಗರ ಧರ್ಮ ಗ್ರಂಥವಲ್ಲ, ಇತಿಹಾಸವಲ್ಲ, ಪುರಾಣವೂ ಅಲ್ಲ ಎನ್ನುವ ಅಭಿಪ್ರಾಯ ಕೂಡ ವ್ಯಕ್ತವಾಯಿತು. ಉದಾಹರಣೆಯಂತೆ ಶಿವ ಪಾರ್ವತಿಗೆ ಹೇಳುತ್ತಿದ್ದ ಕತೆಯನ್ನ ಅದೃಶ್ಯ ರೂಪದಲ್ಲಿ ಕೇಳಿದ ಪುಷ್ಪದಂತನನೆಂಬ ಗಣನಿಗೆ ಪಾರ್ವತಿ ಶಾಪ ಕೊಟ್ಟ ಪ್ರಸಂಗ ವಿವರಿಸಿದರು. ಇಂತಹ ಕಥೆಗಳಲ್ಲಿ ಜೀವನತತ್ವ ಎದ್ದು ಕಾಣಿಸುತ್ತದೆ ಅನ್ನೋದು ಮುಖ್ಯ.

"ಅಮ್ಮ ತಂದ ಮಡಿಯ ಅವಾಂತರ" – ಶ್ರೀ ಕೆ.ಆರ್. ವೆಂಕಟೇಶ್

ಶ್ರೀ ಕೆ.ಆರ್.ವೆಂಕಟೇಶ್ ಅವರ ಹಾಸ್ಯಲೇಖನ 'ಅಮ್ಮ ತಂದ ಮಡಿಯ ಅವಾಂತರ'. ಪಾಂಡವಪುರದಿಂದ ಮಡಿ ಮೈಲಿಗೆ ಆಚರಿಸುವ ಅಮ್ಮ ಬೆಂಗಳೂರಿನ ಮಗನ ಮನೆಗೆ ಬಂದಾಗ ಸೊಸೆ ಮುಟ್ಟಾಗುತ್ತಾಳೆ. ಅವಳಿಗೆ ಮಾಮೂಲಿನಂತೆ ಇರಲು ಸಾಧ್ಯವಿಲ್ಲ. ಗೊತ್ತಾಗಿಬಿಟ್ಟರೆ ಮಹಾಭಾರತ ಪ್ರಾರಂಭ. ಆಗ ಮಗ ಪಡುವ ಪಾಡಿನ ಬಗ್ಗೆ ಬರೆದಿದ್ದರು. ಅವನ ಹೆಂಡತಿಯೋ ಎಂದೂ ಮಡಿ ಹುಡಿಯ ಆಚರಣೆ ಮಾಡಿದವಳಲ್ಲ. ಆದರೆ ಗಂಡನ ಸಮಾಧಾನಕ್ಕೋಸ್ಕರ ಅಡ್ಜಸ್ಟ್ ಮಾಡಿಕೊಂಡು ಹೇಗೋ ನಿಭಾಯಿಸುವುದು ವಿಷಯವಾಗಿತ್ತು. ತಾಯಿಗೆ ಹೊಸ ರೀತಿಯ ಅಡುಗೆಮನೆ ಅಡ್ಜಸ್ಟ್ ಆಗಿಲ್ಲ, ಮಗ ಅಡುಗೆ ಮಾಡಲಿ ಎಂದು. ಆದರೆ ಆ ಮಗ ಅಡುಗೆ ಕಲಿತಿಲ್ಲ. ಹಾಸ್ಯ ಲೇಖನ ಚೆನ್ನಾಗಿದ್ದರೂ ಹಾಸ್ಯದ ಮಟ್ಟ ನಗು ತರಿಸುವಷ್ಟು ಮುಟ್ಟಲಿಲ್ಲವಲ್ಲಾ ಎನಿಸಿತು. ಈ ವಿಷಯದಲ್ಲಿ ಬರಹಗಳು ಕಡಿಮೆಯೇ. ಒಳ್ಳೆಯ ಪ್ರಯತ್ನ.

"ನಸ್ಯ ಚಿಕಿತ್ಸೆ" – ಶ್ರೀ ದಾ.ಭೀ.ಪ್ರಾಣೇಶ ರಾವ್

ಶ್ರೀ ದಾ.ಭೀ.ಪ್ರಾಣೇಶ ರಾವ್ ಅವರು ಪ್ರಸ್ತುತಪಡಿಸಿದ 'ನಸ್ಯ ಚಿಕಿತ್ಸೆ' ಎಂಬ ಬರಹದಲ್ಲಿ ತಿಳಿ ಹಾಸ್ಯ ಇತ್ತು, ಸ್ವಾರಸ್ಯಕರ ವರ್ಣನೆ ಇತ್ತು, ಒಂದಿಷ್ಟು ಮಾಹಿತಿಯೂ ಇದ್ದು ಉತ್ತಮವಾಗಿತ್ತು. ಇದು ಒಂದು ರೀತಿ ಅಭ್ಯಂಜನ ಚಿಕಿತ್ಸೆಯೇ ಸರಿ. ಶರೀರದ ನವದ್ವಾರಗಳ ಶುಚಿಗೆ ಮಾಡುವಂತಹ ಕ್ರಿಯೆ.

"ಆಷಾಢದ ಗಾಳಿ" – ಶ್ರೀ ಎನ್.ಶಂಕರ ರಾವ್

ಶ್ರೀ ಎನ್.ಶಂಕರ ರಾವ್ ಅವರು ನಮ್ಮ ವೇದಿಕೆಯ ಹಿರಿಯ ಸದಸ್ಯರು. ಅವರು ಇಂದು ಓದಿದ 'ಆಷಾಢದ ಗಾಳಿ' ಎಂಬ ಸಣ್ಣ ಕಥೆಯಲ್ಲಿ ಅತ್ತೆ–ಸೊಸೆಯ ಪ್ರೀತಿಯ ಭಾಂದವ್ಯ. ಆಷಾಢ ಮಾಸದಲ್ಲಿ ಅಮ್ಮನ ಮನೆಗೆ ಏಕೆ ಹೋಗಬಾರದು ಅನ್ನೋ ಸೊಸೆಯ ಪ್ರಶ್ನೆಗೆ ಅತ್ತೆಯ ಉತ್ತರ, ಅತ್ತೆಯ ಆರೋಗ್ಯಕ್ಕೆ ಒಳ್ಳೆಯದಲ್ಲ ಅಂತ ನಂಬಿಕೆ. ಅದು ಸಾಂಪ್ರದಾಯಿಕವಷ್ಟೇ ಆಗದೆ ತಾನು ಡಾಕ್ಟರುಗಳಿಂದ ಅರಿತುಕೊಂಡಿದ್ದ ವೈಜ್ಞಾನಿಕ, ವೈಚಾರಿಕ ನೆಲೆಯ ಉತ್ತರ. 'ಪರವಾಗಿಲ್ಲಮ್ಮ, ನೀನು ಇಲ್ಲೇ ಇರಬಹುದು ನಿನ್ನ ಪ್ರೀತಿ ನನ್ನ ಆರೋಗ್ಯ ಕಾಪಾಡುತ್ತದೆ' ಅನ್ನೋ ಸಮಾಧಾನಕರ ಬದಲಾವಣೆ. ಕತೆಯಲ್ಲಿ ಆಪ್ತವಾದ ಸಾಲುಗಳಿತ್ತು. ಸರಳತೆಯಲ್ಲೊಂದು ಉತ್ತಮ ಕಿರುಗತೆ.

"ಕೋರಿಕೆ" – ಶ್ರೀಮತಿ ಪಾರ್ವತಿ ವಿ. ಹೆಗಡೆ

ಶ್ರೀಮತಿ ಪಾರ್ವತಿ ವಿ. ಹೆಗಡೆ ಅವರು 'ಕೋರಿಕೆ' ಎಂಬ ಪ್ರಾರ್ಥನಾ ಕವನದಲ್ಲಿ ಹೇ ಭಗವಂತ, ನನ್ನನ್ನು ಬಿಸಿಲ ನಡುವೆ ಬೀಸುವಂತಹ ತಂಗಾಳಿಯಂತೆ, ಮಳೆಗೆ ರಕ್ಷಣೆ ಕೊಡುವ ಗೊರಬಾಗುವಂತೆ, ಕಡು ಚಳಿಗೆ ಶಾಲಿನಂತೆ ಮಾಡಿ ಶರದೃತುವಿನಂಬರದ ವಿಶಾಲ ಮನಸ್ಸನ್ನು ನೀಡು, ತಾಪ ಶಮನಕ್ಕೆ ನೆರಳು, ಜೊತೆಗೆ ಕುಸುಮಫಲ ಕೊಡುವ ಮರವನ್ನಾಗಿಸು, ಕೆಸರಿನಲ್ಲಿ ಕಮಲವಾಗಿಸು ಎಂದು ಬರೆದು ಒಂದು ತತ್ವಭರಿತ ಕೋರಿಕೆಯನ್ನಾಗಿಸಿ ಒಳ್ಳೆಯ ಕವನ ಕಟ್ಟಿ ಕೊಟ್ಟಿದ್ದಾರೆ. ಪದ ಪ್ರಯೋಗ, ಕಲ್ಪನೆ, ಭಾವ ಎಲ್ಲಾ ಚೆನ್ನಾಗಿವೆ. ಉತ್ತಮ ರಚನೆ.

"ಗಾರ್ದಭ ಪುರಾಣ" – ಶ್ರೀ ಜಿ.ಬಿ.ಕೋಟೆ ಅನಂತ

ಶ್ರೀ ಜಿ.ಬಿ.ಕೋಟೆ ಅನಂತ ಅವರು ಓದಿದ 'ಗಾರ್ಧಭ ಪುರಾಣ' ಎನ್ನುವ ಹಾಸ್ಯ ಬರಹದಲ್ಲಿ ಕತ್ತೆಗಳ ಸಮಾವೇಶ ಜರುಗಿದೆ. ಅಲ್ಲಿ ಕತ್ತೆಗಳು ತಾವು ಯಾವುದರಲ್ಲಿ ಕಡಿಮೆ? ಸುಮ್ಮನೆ ನಮ್ಮನ್ನು ಕೀಳಾಗಿ ನೋಡುತ್ತಾರಲ್ಲ! ನಮಗೆ ಇತರ ಪ್ರಾಣಿಗಳಂತೆಯೇ ಸಮಾನತೆ ಬೇಕು. ಅದನ್ನು ನಾವು ಡಿಮ್ಯಾಂಡ್ ಮಾಡಿ ಪಡೆಯಬೇಕು ಅನ್ನೋ ಭಾವವನ್ನ ಮುಂದಿಟ್ಟ ಬರಹ. ಅಲ್ಲಿ 'ಏಯ್ ಕತ್ತೆ', 'ಕತ್ತೆ ನನ್ನ ಮಗನೆ', 'ಬರ್ತಾ ಬರ್ತಾ ರಾಯರ ಕುದುರೆ ಕತ್ತೆ ಆಯಿತು' ಹೇಳಿಕೆಗಳ ವಿಶ್ಲೇಷಣೆ ಆಗುತ್ತೆ. 'ಕಾರ್ಯವಾಸಿ ಕತ್ತೆ ಕಾಲು ಕಟ್ಟು' ಅಂತಾರೆ. ಯಾರಾದ್ರೂ ನಿಜವಾಗಿ ನಮ್ಮ ಕಾಲು ಹಿಡ್ಕೊಂಡಿದ್ದಾರಾ? ಇಲ್ಲ ಎನ್ನುವ ಚರ್ಚೆ. ಸರಕಾರದ ಮುಂದೆ ಅವುಗಳ ಬೇಡಿಕೆಗಳ ಲಿಸ್ಟು ದೊಡ್ಡದಾಗೇ ಇದೆ. 'ಹಸುಗಳ ಹಾಲಿಗೆ ದೊಡ್ಡ ಡೈರಿಗಳಿವೆ, ನಮಗೆ ಯಾಕಿಲ್ಲ?' ಎಂಬ ಪ್ರಶ್ನೆ ಸಹಜವೇ! ಒಳ್ಳೆಯ ನಗು ತರಿಸಿದ, ಕತ್ತೆಯ ದೃಷ್ಟಿಯನ್ನೇ ಎರವಲು ಪಡೆದುಕೊಂಡು ನೋಡುವಂತಹ ಗಂಭೀರ ಬರಹ.

"ವರಳ್ಕಲ್ಲು" – ಶ್ರೀ ಚಂದ್ರಶೇಖರ್ ಆರ್.ಕೆ.

ಶ್ರೀ ಚಂದ್ರಶೇಖರ್ ಅರ್..ಕೆ. ಅವರು 'ವರಳ್ಕಲ್ಲು' ಶೀರ್ಷಿಕೆಯ ಲಲಿತ ಪ್ರಬಂಧ ಮಂಡಿಸಿದರು. 'ಮೂಳಿ ಹೊಡೆಸೋದು', 'ಮುಳ್ಳು ಎಬ್ಬಿಸೋದು' ಎನ್ನುವುದು ವರಳುಕಲ್ಲು ಸವೆದಾಗ ಸರಿಪಡಿಸಿಕೊಳ್ಳುವ ವಿಧಾನ. ವರಳುಕಲ್ಲು ಒಂದು ಆವಿಷ್ಕಾರ ಅಂತ ಹೇಳ್ತಾ, ಎಷ್ಟೋ ಮನೆಗಳಲ್ಲಿ ವರಳುಕಲ್ಲಿಗೆ ಸ್ಪೆಷಲ್ ಸ್ಟೇಟಸ್. ಯಾಕೇಂದ್ರೆ ಮಿಕ್ಸಿ ಮಡೀಗೆ ಬರಲ್ಲ ಅಂತ ಅಂದ್ರು. ಲೇಖಕರು ಮದುವೆ ಆದ ಮೇಲೆ ಪೋರ್ಟಬಲ್ ವರಳುಕಲ್ಲು ಇಟ್ಟುಕೊಂಡಿದ್ದರಂತೆ. ಕಾಲಕ್ರಮೇಣ ಅದು ಟೆರೇಸಿಗೆ ರವಾನೆಯಾಗಬೇಕಾಯಿತು. ಆದರೂ ವ್ಯಾಮೋಹ ಮಾತ್ರ ಬಿಡಕ್ಕಾಗಲಿಲ್ಲ ಅನ್ನೋ ರೀತಿ ಇತ್ತು. ಅದನ್ನು ನೋಡಿದಾಗಲೆಲ್ಲ ಅಮ್ಮ ಜ್ಞಾಪಕ ಬರ್ತಾರೆ ಅಂತ ಅಂದ್ರು.. ಅಪರೂಪದ ವಿಷಯ. ಅವಿನಾಭಾವ ಸಂಬಂಧದ, ವಿಭಿನ್ನತೆ ಇರೋ ಬರಹ.

"ನಮ್ಮ ಶಾಲೆಯ ಗುರುಗಳು" – ಶ್ರೀ ಪೋಲೇನಹಳ್ಳಿ ರಮೇಶ್

ಶ್ರೀ ಪೋಲೆನಹಳ್ಳಿ ರಮೇಶ್ ಅವರು ಸರ್ಕಾರಿ ಶಾಲೆಯ ಗುರುಗಳ ಬಗೆಗಿನ ತಮ್ಮ ಕವನದಲ್ಲಿ ಹಣದ ವಿಚಾರದಲ್ಲಿ ಶ್ರೀಮಂತರಲ್ಲದಿದ್ದರೂ ಮಕ್ಕಳ ಬುದ್ಧಿ ಬೆಳೆಸುವ ವಿಚಾರದಲ್ಲಿ ಸಿರಿವಂತರು. ಶಿಲ್ಪಿಗಳಂತೆ ಉಳಿಪೆಟ್ಟು ಕೊಡುತ್ತಾ ಉತ್ತಮ ಪ್ರತಿಮೆಗಳನ್ನು ಅಂದರೆ ವಿದ್ಯಾರ್ಥಿಗಳನ್ನು ನೀಡಿದವರು. ಶಾಲೆ ಅಂತನ್ನೋ ನೆಲ, ಉಪಕ್ರಮ ಅನ್ನೋ ಹೊಲದಲ್ಲಿ, ವಿದ್ಯಾರ್ಥಿಗಳು ಅನ್ನೋ ಬೆಳೆ ತೆಗೆಯುವ ಕೃಷಿಕರು ಎನ್ನುವಂತಹ ಕಲ್ಪನೆ ಬಹಳ ಚಂದ. **Knowledge is nobody's property** ಅದಕ್ಕೆ ಬೇಲಿ ಕಾವಲು ಬೇಕಿಲ್ಲ ಅಂತ ಹೇಳ್ತಾ, ಗುರುಗಳು ಜಂಗಮರು ಎಂತಲೂ ಹೇಳ್ತಾ, ಅವರು ಸಾಲು ಮರಗಳಂತೆ ಅಲ್ಲೇ ಉಳಿದರೂ ಪ್ರತಿ ವಸಂತಕ್ಕೆ ಹೊಸಹೊಸ ಪ್ರತಿಭೆಗಳನ್ನು ನಮ್ಮ ಸಮಾಜಕ್ಕೆ ಕೊಡ್ತಾ ಬಂದರು ಅನ್ನುವ ಉತ್ತಮ ಭಾವನೆಯನ್ನು ವ್ಯಕ್ತಪಡಿಸಿ,

ಅಂತಹ ಗುರುಗಳ ಹೊಳಹನ್ನು ಹರಡುವ ಸುಂದರ ಕವನ ರಚಿಸಿದ್ದಾರೆ. ಇದು ಎಲ್ಲರಿಗೂ ಬಹಳ ಇಷ್ಟವಾಗುವ ಕವನ.

"ನಿಮಗೆ ನೆನಪಿದೆಯೇ?" – ಶ್ರೀ ಜಿ.ವಿ.ಅರುಣ

ಶ್ರೀ ಜಿ.ವಿ.ಅರುಣ ಅವರ ಲಲಿತ ಪ್ರಬಂಧ "ನಿಮಗೆ ನೆನಪಿದೆಯೇ?" ಬಹಳ ಚೆನ್ನಾಗಿತ್ತು. ಅದು ಹಾಸ್ಯ ಲೇಖನ ದಂತೆಯೂ ಇತ್ತು. ನಮಗೆ ಹಿಂದಿನ ಸಮಾಚಾರಗಳು, ವಿಷಯಗಳು, ನಾವು ಕಲಿತದ್ದು, ಎಷ್ಟು ನೆನಪಿರುತ್ತವೆ? ಪಾಠ ನೆನಪಿರಲ್ಲ, ಪ್ರಸಂಗಗಳು ನೆನಪಿರಲ್ಲ, ಎಷ್ಟೋ ಸರ್ತಿ ನೆನಪಿರಲೇ ಬೇಕು ಅಂತ ಅನ್ಕೊಂಡಿದ್ದೂ ನೆನಪಿರಲ್ಲ. ಆಗ ಏನಾದರೂ ತಂತ್ರಗಳು ಇರಲೇಬೇಕು. ಅದನ್ನೇ ಬಹಳ ಚೆನ್ನಾಗಿ ಅರುಣ ಅವರು ತಮ್ಮ ಪ್ರಬಂಧದಲ್ಲಿ ತಿಳಿಸಿದರು. ಹಾಗೆಯೇ ನಿಮ್ಮ ಗುಟ್ಟುಗಳೇನಾದರೂ ಇದ್ದರೆ ತಿಳಿಸಿ, ಆ ಗುಟ್ಟುಗಳನ್ನು ನಾನೇನು ಯಾರಿಗೂ ಬಿಟ್ಟುಕೊಡಲ್ಲ ಅಂತಾನೂ ಬರೆದಿದ್ದರು. ಅವರು ಗೋವಿಂದರಾವ್ ಅವರ ಲೇಖನಗಳನ್ನು ಉಲ್ಲೇಖಿಸಿದ್ದು ಬಹಳ ಚೆನ್ನಾಗಿತ್ತು. ಕನ್ನಡ ಪರೀಕ್ಷೆಯಲ್ಲಿ ಎಲ್ಲ ಮರೆತು ಏನೂ ಬರೆಯಲು ಸಿಗದೇ ಕೊನೆಯಲ್ಲಿ ಒಂದು ಪ್ರಶ್ನೆ ಕಂಡು 'ಎಂದೊಡಿಂತೆಂದಮ್' ಅನ್ನೋದನ್ನ ಪದವಿಭಾಗ ಮಾಡಿ ಎಂದಾಗ ಒಬ್ಬ ಹುಡುಗ 'ಎಂದು ವಡೆ ತಿಂದಂ', 'ಎಂದು ಒಂದು ವಡೆ ತಿಂದಂ', 'ಎಂದು ಒಂದೊಂದೇ ವಡೆ ತಿಂದಂ' ಅಂತ ಬರೆದ ಅನ್ನುವುದು ನಗು ತರಿಸದೆ ಇರುತ್ತಾ? ಒಟ್ಟಿನಲ್ಲಿ ಅವರ ಪ್ರಬಂಧವು ವಿಶೇಷವಾಗಿ ಹೊಸ ರೀತಿ ಇತ್ತು, ಬಹಳ ಹಿತವಾಗಿತ್ತು.

"ದೇವ ಮಾನವರು" – ಶ್ರೀ ಹು. ವಾ. ಶ್ರೀಪ್ರಕಾಶ್

ಶ್ರೀ ಹು.ವಾ.ಶ್ರೀಪ್ರಕಾಶ್ ಅವರು 'ದೇವಮಾನವರು' ಎಂಬ ಕವನವನ್ನು ವಾಚನ ಮಾಡಿದರು. ಇದೊಂದು ಉತ್ತಮ ಕವನ. ನಮ್ಮ ಸಮಾಜದಲ್ಲಿ ಮುಗ್ಧತೆ ಬಹಳ ಹೆಚ್ಚು. ಆ ಮುಗ್ಧತೆಯನ್ನ ದುರುಪಯೋಗ ಪಡಿಸಿಕೊಳ್ಳುವವರು ಬಹಳ. ದೈವಿಕ ಯೋಗ್ಯತೆ ಇದೆಯೋ ಇಲ್ಲವೋ, ಇದ್ದಕ್ಕಿದ್ದಂತೆ ಕೆಲ ದೇವಮಾನವರು ಅಲ್ಲಲ್ಲಿ ಹುಟ್ಟಿಕೊಳ್ಳುತ್ತಾರೆ. ಅದು ಹೇಗೋ ಜನರ ಮನಸ್ಸನ್ನ ಆಕ್ರಮಿಸಿಕೊಂಡುಬಿಡುತ್ತಾರೆ. ಗಲ್ಲಿ ಮನೆಯಲ್ಲಿ ದೇವಿಯ ಅವತಾರ ಆಗೋದು, ಒಬ್ಬ ಯುವಕ ಆಧ್ಯಾತ್ಮ ಮಾತಾಡುತ್ತ ಅವಧೂತ ಆಗೋದು, ಭವಿಷ್ಯ ಹೇಳೋ ಡೋಂಗಿ ಜ್ಯೋತಿಷಿಗಳು ಹುಟ್ಟಿಕೊಳ್ಳೋದು ಹೀಗೆ ಅನೇಕ ರೀತಿಯ ಆಷಾಢಭೂತಿಗಳು ಇರ್ತಾರೆ. ಇವರಿಂದ ಲಾಭವೋ ನಷ್ಟವೋ ಪ್ರಶ್ನೆ ಎದ್ದೇ ಏಳುತ್ತೆ. ಉತ್ತರವನ್ನು ವಿವೇಕ ಹೇಳಬೇಕು. ಇಂಥ ಪರಿಸ್ಥಿತಿಗೆ ಮಾಧ್ಯಮಗಳ ಸಪೋರ್ಟೂ ಕೆಲವು ಬಾರಿ ಸಿಕ್ಕಿಬಿಡುತ್ತದೆ. ಎಲ್ಲರೂ ಡೋಂಗಿ ಎಂದು ಹೇಳಲು ಆಗದೆ ಹೋದರೂ, ಹಿತಕೊಡದ ಬೆಕ್ಕುಗಳಿಗೆ ಗಂಟೆ ಕಟ್ಟುವವರು ಯಾರು? ಪ್ರಶ್ನೆಗೆ ಸುಲಭ ಉತ್ತರವಿಲ್ಲ.

"ಪೊಟ್ಟಿ" – ಶ್ರೀಮತಿ ಶೀಲಾ ಭಂಡಾರ್ಕರ್

ಶ್ರೀಮತಿ ಶೀಲಾ ಭಂಡಾರ್ಕರ್ ಅವರ 'ಪೊಟ್ಟಿ' ಎಂಬ ಕತೆ ಒಬ್ಬ ಅಮಾಯಕ ಹೆಂಗಸಿನ ಹೃದಯ ವಿದ್ರಾವಕ ಕತೆ ಚಿಕ್ಕದಾದರೂ ವಿಶಿಷ್ಟವಾಗಿತ್ತು. ಪೊಟ್ಟಿ ಒಬ್ಬ ಅತಿ ಬಡವಿ ಹೆಂಗಸು. ಅವಳು ಮೂಗಿ. ಗಂಡನಿಲ್ಲದೆ ಇತರ ಗಂಡಸರಿಗೆ ಮೈ ಕೊಟ್ಟು ಮೇಲಿಂದ ಮೇಲೆ ಬಸುರಿಯಾಗಿ ಮಕ್ಕಳನ್ನು ಹೆರುತ್ತಿದ್ದವಳು. ಊಟಕ್ಕೆ ಭಿಕ್ಷೆಯೇ ಗತಿ. ಕತೆಯ ಪಾತ್ರಧಾರಿ ಅಜ್ಜಿಗೂ ಪೊಟ್ಟಿಗೂ ಒಂದು ರೀತಿಯ ಅವಿನಾಭಾವ ಸಂಬಂಧ. ಅವಳ ಒಂದು ಮಗು ಬಾವಿಗೆ ಬಿದ್ದು ಸತ್ತಾಗ ಅಜ್ಜಿ ಅವಳನ್ನು ಸಂತೈಸುವ ಸನ್ನಿವೇಶ. ಸಾಲುಗಳಲ್ಲಿ ಮಾರ್ಮಿಕತೆ ಮಾತ್ರವಲ್ಲದೆ ಒಳದನಿಗಳೂ ಇತ್ತು. .ಮಾನವೀಯತೆಯನ್ನು ಎತ್ತಿ ಹಿಡಿದ ಒಂದು ಉತ್ತಮ ಕತೆ.

"ಆಸರೆ" – ಶ್ರೀಮತಿ ಪ್ರಮೋದಾ ಮೂರ್ತಿ

ಶ್ರೀಮತಿ ಪ್ರಮೋದಾ ಮೂರ್ತಿ ಅವರು 'ಆಸರೆ' ಎನ್ನೋ ಶೀರ್ಷಿಕೆಯ ಕತೆ ಓದಿದರು. ಕತೆಯು ಲಂಬವಾಗಿದ್ದುದರಿಂದ ಕತೆಯ ಸಂಕ್ಷಿಪ್ತ ಆವೃತ್ತಿಯನ್ನು ಮಾತ್ರ ಓದಿದರು. ಲೈಂಗಿಕ ಕಿರುಕುಳಗಳಿಗೆ ಸಿಲುಕಿದಾಗ ಹೆಣ್ಣಾಗಲೀ ಗಂಡಾಗಲೀ ತಮ್ಮ ಧ್ವನಿ ಎತ್ತಿ ಅದನ್ನು ವಿರೋಧಿಸಬೇಕು. ಸುಮ್ಮನಿದ್ದಷ್ಟೂ ಅವುಗಳದೇ ಮೇಲುಗೈ ಆಗುವಂತೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ನಿನ್ನದಲ್ಲದ ತಪ್ಪಿಗೆ ನೀನೇಕೆ ಶಿಕ್ಷೆ ಅನುಭವಿಸಬೇಕು? ಮನಸ್ಸಿನ ಖಿನ್ನತೆಗೆ ಒಳಗಾಗದೆ ಎದ್ದು ನಿಂತು ಧೈರ್ಯವಾಗಿ ಎದುರಿಸು, ಆತ್ಮ ಸ್ಥೈರ್ಯ, ಆತ್ಮ ವಿಶ್ವಾಸ ಬೆಳೆಸಿಕೊ ಎಂಬ ಸಂದೇಶ ನೀಡಿದ ಕಥೆ. ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಾ, ಔದಾರ್ಯ ಗುಣಗಳಿರುವ ಡಿಸೋಜ ದಂಪತಿಗಳಂತಹ ವ್ಯಕ್ತಿಗಳ ಸಮಯೋಚಿತ ಸ್ಪಂದನೆಯಿಂದ ಇಂದೂ ಸಮಾಜ ಶ್ರೀಮಂತವಾಗಿದೆಯೆಂದು ನಿರೂಪಿಸುವ ಹೃದಯಸ್ಪರ್ಶಿ ಕಥೆ.

"ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ" – ಶ್ರೀಮತಿ ಸ್ನೇಹಲತಾ ಮೋಡಕ್

ಶ್ರೀಮತಿ ಸ್ನೇಹಲತಾ ಮೋಡಕ್ ಅವರು ಮಂಡಿಸಿದ 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂಬ ಕತೆಯ ಹಂದರದಲ್ಲಿ ಸಾಂಪ್ರದಾಯಿಕ ಆಚರಣೆಗಳ ಜೀವನ ಶೈಲಿ ಇಟ್ಟುಕೊಂಡಂಥ ಕುಟುಂಬ ಅಂದರೆ ಅಪ್ಪ ಅಮ್ಮ ಅಣ್ಣ ಅತ್ತಿಗೆ ಹಳ್ಳಿಯಲ್ಲಿ. ಮತ್ತೊಬ್ಬ ಮಗ ತನ್ನ ಹೆಂಡತಿ ಮಕ್ಕಳೊಡನೆ ನಗರದಲ್ಲಿ. ಅವರಿಗೆ ಸಾಂಪ್ರದಾಯಿಕ ಬದ್ಧತೆ, ನಂಬಿಕೆ ಇಲ್ಲದ ತಾತ್ಸಾರ ಮನೋಭಾವ. ಆದರೆ ವಿದೇಶಕ್ಕೆ ಹೋದಾಗ ಕೊರೋನ ಅಪ್ಪಳಿಸಿ ಎಲ್ಲಾ ತಿರುವು ಮುರುವು. ಕೆಲವೊಂದು ದೇಶಿಯ ಆಚರಣೆಗಳ ಬಗ್ಗೆ ಅವರಿಗೆ ಆಗ ಕಣ್ಣು ತೆರೆಯುತ್ತದೆ. ಮತ್ತೆ ಅವರು ಊರಿಗೆ ಬಂದು ಹಳ್ಳಿಯಲ್ಲಿ ನೆಲೆಸಿ ಬದುಕಿನ ಅರ್ಥ ಮತ್ತು ಸಾರ್ಥಕತೆ ಕಂಡುಕೊಂಡರು. ವಿಷಯದಲ್ಲಿ ಸತ್ವವಿದೆ, ಸಹಜವಾಗಿ ಹೆಣೆದು ಕತೆಯ ಆಂತರ್ಯಕ್ಕೆ ಬಲಕೊಡಲು ಮತ್ತಷ್ಟು ಅವಕಾಶ ಇದೆ. ಲೇಖಕಿ ಮತ್ತೊಮ್ಮೆ ಕತೆಯನ್ನು ಪರಿಶೀಲಿಸಿ ಪರಿಷ್ಕರಿಸಲೆಂಬುದು ನನ್ನ ಸಲಹೆ.

"ಹೋದ ಪುಟ್ಟ ಬಂದ ಪುಟ್ಟ" – ಶ್ರೀಮತಿ ಶಾಂತಾ ನಾಗಮಂಗಲ

ನಮ್ಮ ವೇದಿಕೆಯಲ್ಲಿ ಬಹಳ ಪಾಂಡಿತ್ಯ ಪೂರ್ಣವಾದ ಬರಹಗಳು, ಕಾವ್ಯ ವಿಮರ್ಶೆಗಳು ಮತ್ತು ಚಂದೋಬದ್ಧ ಕವನಗಳನ್ನು ಪ್ರಸ್ತುತಪಡಿಸುವ ಶ್ರೀಮತಿ ಶಾಂತಾ ನಾಗಮಂಗಲ ಅವರು ಒಂದು ಸತ್ಯ ಘಟನೆಗೆ ಸ್ವಲ್ಪಮಟ್ಟಿನ ಕಲ್ಪನೆಯ ಕವಚ ಹೊದಿಸಿ ಬರೆದ ಪ್ರಸಂಗ 'ಹೋದ ಪುಟ್ಟ ಬಂದ ಪುಟ್ಟ' ಓದಿದರು. ಸಹಜವಾಗಿ ಮೂಡಿದ ಬರಹ. 'ಹೋದ ಪುಟ್ಟ ಬಂದ ಪುಟ್ಟ' ಅನ್ನೋದು ವ್ಯವಹಾರದಲ್ಲಿ ಸಾಮಾನ್ಯವಾಗಿ ಅಂದುಕೊಂಡ ಕೆಲಸ ಆಗ್ಲಿಲ್ಲ ಅನ್ನೋದಕ್ಕೆ ಬಳಸುವ ಆಡುಮಾತು. ಇಲ್ಲಿ ಮಗಳು, ಮೊಮ್ಮಗಳು, ಅಳಿಯಂದಿರ ಮನೆಗೆ ಆಸ್ಟ್ರೇಲಿಯಾಗೆ ಹೋಗಬೇಕಾದವರು, ವೀಸಾ ಸರಿಯಾಗಿ ಗಮನಿಸದೆ ಟಿಕೆಟಿಂಗ್ ಆಗಿ, ಏರ್ಪೋರ್ಟಿಗೂ ಹೋಗಿ, ಚೆಕ್ಇನ್ ಸಮಯದಲ್ಲಿ ಎಡವಟ್ಟು ತಿಳಿದು ನಡುರಾತ್ರಿ ಮನೆಗೆ ವಾಪಸು ಬರಬೇಕಾದಂತಹ ಆಭಾಸವಾಗಿ ಮೊದಲು ಗಾಬರಿ ನಂತರ ಸಮಾಧಾನ. ಅದನ್ನು ನಿರೀಕ್ಷೆ ಮಾಡದೇ ಇದ್ದುದರಿಂದ ಪಕ್ಕದ ಮನೆಯವರು 'ಕಳ್ಳರು ಬಂದಿದ್ದು ಇನ್ನೂ ಇದಾರೆ' ಅಂತ ಗಾಬರಿಪಡಿಸಿದ ಘಟನೆ. ಇದೆಲ್ಲ ಒಮ್ಮೊಮ್ಮೆ ಎಲ್ಲರಿಗೂ ಆಗುವಂತಹ ಸಂಗತಿಯೇ. ಒಟ್ಟಿನಲ್ಲಿ ಹೋದ ಪುಟ್ಟ ಬಂದ ಪುಟ್ಟ ಅಂತ ಅಜ್ಜಿ ತಾತಂಗೆ ಆಸ್ಟ್ರೇಲಿಯಾಗೆ one day virtual visit ಆಯ್ತು. ಬರಹದಲ್ಲಿ ಸಹಜತೆಯ ಜೊತೆಗೆ ತಿಳಿಹಾಸ್ಯದ ಲೇಪನ ಸಹ ಇತ್ತು. ಹಾಸ್ಯಕ್ಕಾಗಿ ಇನ್ನಷ್ಟು ಸ್ವಾರಸ್ಯಕರ ಬಣ್ಣ ಹಾಕಿದ್ರೆ ಮತ್ತೂ ಚೆನ್ನಾಗಿ ಮೂಡಬಹುದು. ಅವರು ಅದನ್ನು ಸಲೀಸಾಗಿ ಮಾಡಬಲ್ಲರು.

"ಬಸಿರಿನುಸಿರು" – ಶ್ರೀಮತಿ ಶಾಂತಿವಾಸು

ಶ್ರೀಮತಿ ಶಾಂತಿವಾಸು ಅವರು 'ಬಸಿರಿನುಸಿರು' ಎನ್ನುವ ಒಂದು ಗಂಭೀರ ಆದರೆ ಅಷ್ಟೇ ಸಾಂದ್ರ ಅರ್ಥ ನೀಡುವ ಕವನ ವಾಚಿಸಿದರು. ಭೂಮಿಯ ವಿವಿಧ ನಾಮವಿಶೇಷಣಗಳನ್ನು ಬಳಸಿ ನಮಗೆ ಉಸಿರನ್ನಿತ್ತ ಆ ಭೂತಾಯಿಗೆ ಮೊರೆಹೋಗುವ ಮತ್ತು ಅದಕ್ಕೆ ಸಿಗುವ ಉತ್ತರದ ಕಲ್ಪನೆಯಲ್ಲಿ ಬರೆದಿದ್ದಾರೆ. ಫಲವತ್ತಾದ ಮಣ್ಣು, ನೀರು, ಮಳೆ, ಬೆಳೆ, ಕಾನನ, ಕೂಜನಗಳು ಇಲ್ಲವಾಗುತ್ತಿದೆ. ಮುಂದಿನ ಪರಂಪರೆಗೆ ಏನು ಉತ್ತರ ಹೇಳಲಿ ಎಂದಾಗ ಹೇ, ಮನುಕುಲವೇ ಅದರ ಸೃಷ್ಟಿ ಕ್ರಿಯೆಯಲ್ಲಿ ನಿನ್ನ ಸಹಕಾರ, ಜವಾಬ್ದಾರಿಗಳೂ ಇದೆ. ಸ್ವಯಂಕೃತ ಅಪರಾಧಗಳಿಂದ ಆ ಕ್ರಿಯೆಗಳಲ್ಲಿ ಲೋಪ ಬಾರದಂತೆ ನೋಡು... ಮೊದಲು ನಿನ್ನ ಉಸಿರನ್ನು ಪ್ರಕೃತಿಯಲ್ಲಿ ಅಡಗಿಸುವ ಅಥವಾ ಮಿಳಿತಗೊಳ್ಳುವ ಅಂದರೆ ಉಸಿರ ಬಸಿರಾಗಿಸುವ ಚಿಂತನೆ ಮಾಡು ಎನ್ನುವ ವಿಶೇಷಾರ್ಥ ನಿರೂಪಿಸಿದ ಕವನ.

"ಹೀಗೆ ಎರಡು ಮದುವೆಗಳು, ಒಂದು ಜಿಜ್ಞಾಸೆ" – ಶ್ರೀಮತಿ ಲಕ್ಷ್ಮೀ ವಿಠಲ್

ಶ್ರೀಮತಿ ಲಕ್ಷ್ಮೀ ವಿಠಲ್ ಅವರು ತಮ್ಮ 'ಹೀಗೆ ಎರಡು ಮದುವೆಗಳು ಒಂದು ಜಿಜ್ಞಾಸೆ' ಪ್ರಸ್ತುತಿಯಲ್ಲಿ ಕೆಲವು ಪ್ರಶ್ನೆಗಳಿಗೆ ಉತ್ತರ ಅರಸಿದ್ದಾರೆ. ಒಂದು ಘಟನೆ ವಿದ್ಯೆ ಅರಸಿದ ಮಗಳು ವಿದೇಶಕ್ಕೆ ಹೋಗಿ ನೆಲೆಸಿ ತನಗಿಷ್ಟ ಬಂದ ಹುಡುಗನನ್ನು ಮದುವೆಯಾಗಿ ತನ್ನ ಸುಖ ತಾನು ಕಂಡುಕೊಂಡರೆ ಮತ್ತೊಂದು ಸಂಬಂಧದಲ್ಲೇ ಮದುವೆಯಾಗಿದ್ದರೂ ವೈಮನಸ್ಯಗಳಿಂದ ದೂರ ಸರಿದು ಗಂಡನನ್ನು ಮತ್ತು ಪುಟ್ಟ ಮಗಳನ್ನು ಬಿಟ್ಟು ದೂರ ಹೋಗಬೇಕಾದದ್ದು. ಅವರ ಪ್ರಶ್ನೆ ಮದುವೆಗೆ ಸಂಬಂಧಿಸಿದ ಈ ಗಂಡು, ಈ ಹೆಣ್ಣು ನಿರ್ಧಾರಗಳಿಗೆ ಮಾನದಂಡಗಳೇನು? ಇದಕ್ಕೆ ಸುಲಭ ಉತ್ತರ ಇಲ್ಲ ಒಂದು ತಪ್ಪು ಇನ್ನೊಂದು ಸರಿ ಎಂದು ಹೇಳಲಾಗುವುದಿಲ್ಲ. ಅತಿ ಮುಖ್ಯವಾದದ್ದು ಮನುಷ್ಯನ ಸ್ವಭಾವ ಹೇಗೆ ರೂಪುಗೊಳ್ಳುತ್ತದೆ ಯಾರೊಬ್ಬರೂ ಇನ್ನೊಬ್ಬರ ಮನಸ್ಸು ನೋಯಿಸಬಾರದು, ಇದು ನಡತೆಯ ವೇದವಾಕ್ಯ ಆಗಬೇಕು ಅನ್ನೋದೇ ನನ್ನ ಅಭಿಪ್ರಾಯ. ಪ್ರಸ್ತುತಿ ಗಂಭೀರವಾದ ವಿಚಾರ ಒಳಗೊಂಡಿದ್ದು ಚೆನ್ನಾಗಿದೆ. ಒಂದುಸಲಹೆ: ಕಲ್ಪನೆಯಡಿಯಲ್ಲಿ ಒಂದು ಪಾತ್ರ ಸೃಷ್ಟಿಸಿ ಅವರು ಕಂಡುಕೊಂಡ ಉತ್ತರಗಳನ್ನು ಕೊಡುತ್ತ ಹೋಗಬಹುದು. ಪ್ರಶ್ನೆ ಈಗ ಹೊರಗಿದೆ. ಪ್ರಶ್ನೋತ್ತರಗಳನ್ನು ಕಥೆಯ ಒಳಗೂ ಆಗಿಸಬಹುದು.

"ಅದೇನಾಯ್ತೋ " – ಶ್ರೀಮತಿ ನಾಗರತ್ನ ಎಂ.ಜಿ.

ಶ್ರೀಮತಿ ನಾಗರತ್ನ ಎಂ.ಜಿ. ಅವರ "ಅದೇನಾಯ್ತೋ " ಎಂಬ ಕವಿತೆ ಬಹಳ ಸರಳವಾಗಿ ಆದರೆ ಅರ್ಥ ಹೊತ್ತುಕೊಂಡು, ಕೊರೋನ ನಮ್ಮ ಗಜಿಬಿಜಿ ಯಾಂತ್ರಿಕ ಜೀವನದಲ್ಲಿ ಹೇಗೆ ಒಳ್ಳೆಯ ಬದಲಾವಣೆಗಳನ್ನು ತಂದಿತು ಅಂತ ತಿಳಿಸಿದೆ. ಮತ್ತೆ ಕೊರೋನ ಸುಧಾರಣೆಯ ವೇಷ ಹೊತ್ತ ಹೆಮ್ಮಾರಿ ಅನ್ನೋ ಚಿಂತನೆಯನ್ನ ಮಂಡಿಸಿ ಗೆದ್ದಿದೆ. ಅದರ ಒಂದು ಸಾಲು 'ಕಣ್ಣು ಮೂಗು ಮುಚ್ಚೋ ಹಾಗಿಲ್ಲ, ಬಾಯಂತೂ ತೆಗ್ಯೋ ಹಾಗೇ ಇಲ್ಲ' ಅನ್ನುತ್ತಾ ಹಾಸ್ಯದ ಸೋಗಿನಲ್ಲಿ ಪಾಠ ಹೇಳಿದೆ. ಆದ್ರೆ ಇವರ ಕವಿತೆ ಕೊನೆಯಲ್ಲಿ ಹೇಳ್ಕೊಂಡಿದ್ದಾತ್ರ 'ಎಲ್ಲಾ ಅರ್ಥ ಆದ್ರೂ ಒಂದೂ ಅರ್ಥ ಆಗ್ತಿಲ್ಲ' ಅಂತ. ಕವಿ ವರಸೆ ಅಂದ್ರೆ ಅದೇ ಇರಬೇಕು.

"ತಾಯಿಗೆ ಬಾಯಲ್ಲಿ ಜಗವನು ತೋರಿದ" – ಶ್ರೀಮತಿ ರಾಧಿಕಾ ಗುಜ್ಜರ್

ಈಗ ಶ್ರೀಮತಿ ರಾಧಿಕಾ ಗುಜ್ಜರ್ ಅವರ ಕವಿತೆಗಳಲ್ಲಿ ಮನ ಸೆಳೆಯುವಂತಹ ಟಚ್ ಸಾಲುಗಳು ಇರುತ್ತೆ. ಪ್ರಸ್ತುತ ಇವತ್ತು ಓದಿದ ಕವಿತೆಯೂ ಸಹ ಅದೇ ಅಭಿಪ್ರಾಯ ತರುವಂತಹುದು. 'ತಾಯಿಗೆ ಬಾಯಲ್ಲಿ ಜಗವನು ತೋರಿದ' ಶೀರ್ಷಿಕೆಯ ಕವಿತೆ. ಇಲ್ಲಿ ಕಂಕುಳ ಮಗು, ಕೃಷ್ಣ ತನ್ನ ತೊದಲು ನುಡಿಯಲ್ಲೇ ಭೂತ, ವರ್ತಮಾನ ಹಾಗೂ ಭವಿಷ್ಯವನ್ನು ನುಡಿಯುತ್ತಿದ್ದಾನೆ ಎಂಬ ಕಲ್ಪನೆಯ ಎಳೆಯಲ್ಲಿ, ಭಾವ ವೈಶಿಷ್ಟ್ಯ ಕೊಟ್ಟು

ಬರೆದಿದ್ದಾರೆ. ಕಂಕುಳ ಕಂದನ ತೂಗಾಟದಲ್ಲಿ ಲಯವಿದೆ, ತುಟಿಗಳಲ್ಲಿ ತಿಲ್ಲಾನದ ಹಾತೆ ಇದೆ, ಆಲೌಕಿಕ ಪದಗಳ ಒರತೆ ಇದೆ. ತನ್ನ ಹುಟ್ಟಿನ ಹಿನ್ನೆಲೆ ಇದೆ. ಅದು ಒಡಲ ಕತ್ತಲಿನಿಂದ ಬಯಲಿಗಿಳಿದ ಬೆಳಕು. ಧರ್ಮ ಸಂರಕ್ಷಣೆಗಾಗಿ ಧರೆಗಿಳಿವ ಧೀರರ ಒಂದವತಾರ ರೂಪ ಅನ್ನೋದಿದೆ. ಒಟ್ಟಿನಲ್ಲಿ ಭೂತ, ವರ್ತಮಾನ, ಭವಿಷ್ಯತ್ತಿನ ಚಿತ್ರಣ ಕೊಡುತ್ತಿದೆ. ತಾಂಡವ ಕಿಡಿಗೆ ಮದ್ದು ನಾನು ಅನ್ನೋ ಸಾಲು ಚೆನ್ನಾಗಿದೆ ಅನ್ನಿಸಿತು. ಹಾಗೇನೇ ಇಂದು ಕಂಕುಳ ಬಾಲಕೃಷ್ಣ, ನಾಳೆ ಭಗವದ್ಗೀತೆ ನಾನು...ಅನ್ನೋ ಸಾಲು ಕೂಡ. ಉತ್ತಮ ಅಭಿವ್ಯಕ್ತಿಯಿಂದ ಮನಸನ್ನು ಸೆಳೆಯುತ್ತದೆ.

"ಬದುಕೊಂದು ಭಾಗ್ಯ" – ಶ್ರೀಮತಿ ಶೀಲಾ ಅರಕಲಗೂಡು

ಶ್ರೀಮತಿ ಶೀಲಾ ಅರಕಲಗೂಡು ಅವರು ಛಂದೋಬದ್ಧವಾಗಿ ಬರೆದ ರಚನೆಗಳನ್ನು ವೇದಿಕೆಯಲ್ಲಿ ಹಾಕುತ್ತಿರುತ್ತಾರೆ. ಇಂದು ಶರಷಟ್ಪದಿಯಲ್ಲಿ ಬರೆದ 'ಬದುಕೊಂದು ಭಾಗ್ಯ' ಎಂಬ ಕಥಾಕವನ ವಾಚಿಸಿದರು. ೪–೪, ೪–೪, ೪–೪–೬ ಮಾತ್ರಾಗಣ ಇರುವಂತಹ, ಎರಡನೇ ಅಕ್ಷರ ಪ್ರಾಸ ಇರುವಂತಹ ಸರಳ ಸುಂದರವಾದ ರಚನೆ. ಇದು ಒಂದು ಊರಿನ ಮಕ್ಕಳ ಕಥೆ. ಊರಿನಲ್ಲೊಂದು ರಭಸದಿಂದ ಹರಿಯುವ ನದಿ. ಅಲ್ಲೇ ಆಡೋ ಹಿರಿಯರು, ಮಕ್ಕಳು ಮತ್ತೆ ಚೇಷ್ಟೆ ಮಾಡೋ ಮಕ್ಕಳು. ಇದು ಚಿತ್ರ. ಅಲ್ಲಿ ಕೇಶವ, ಮಾಧವ, ರೀಶ ಎಂಬ ಪೋಷಕರಿಲ್ಲದ ಸ್ವಲ್ಪ ದೊಡ್ಡ ವಯಸ್ಸಿನ ಬಡ ಹುಡುಗರು. ಆದರೆ ಧೈರ್ಯವಂತರು. ಸಣ್ಣಪುಟ್ಟ ಕೆಲಸ ಮಾಡಿಕೊಟ್ಟು ಸಹಾಯಕ್ಕೆ ಧುಮುಕು ವಂತಹವರು. ಒಮ್ಮೆ ನದಿ ಹತ್ತಿರ ಮೋಜುಬಾಜಿಗಾಗಿ ಈಜು ಹೊಡೆಯುವಾಗ ಈಜು ಚೆನ್ನಾಗಿ ಬಾರದ ಕೆಲವರು ಮುಳುಗಿ ಹೋಗುವಂತಹ ಸಂಕಷ್ಟಕ್ಕೆ ಸಿಲುಕಿದಾಗ ಈ ಹುಡುಗರು ಅವರನ್ನ ಬದುಕಿಸಿ ಹೊಗಳಿಕೆಗೆ ಪಾತ್ರ ರಾದವರು. ಮುಂದೊಂದು ದಿನ ಅವರು ಸೇನೆಗೆ ಸೇರುತ್ತಾರೆ, ದೇಶದ ವೈರಿಗಳನ್ನು ನಾಶ ಮಾಡುತ್ತಾ ದೇಶದ ರಕ್ಷಣೆ ಮಾಡ್ತಾರೆ. ಊರಿಗೊಂದು ಒಳ್ಳೆಯ ಹೆಸರನ್ನು ತರ್ತಾರೆ. ಒಳ್ಳೆಯ ಭಾವ ಅರ್ಥ ಧನಾತ್ಮಕ ಚಿಂತನೆ ಇರುವಂತಹ ರಚನೆಯಾಗಿತ್ತು. ಮಕ್ಕಳು ಬೆಳೆಯುವ ಬೆಳೆಸುವ ಚಂದದಲ್ಲಿ ಮತ್ತು ಒಳಿತಿನ ಯೋಚನೆ ತಿಳಿವಿನ ಸುಗುಣಗಳಲ್ಲಿ ಬದುಕಿನ ಧ್ಯೇಯೋದ್ದೇಶಗಳು ಸಫಲ ಆಗುತ್ತವೆ ಎನ್ನುವ ಸಂದೇಶವುಳ್ಳ ರಚನೆ.

"ಸ್ವಿಚ್ ಆಫ್–ಮೊಬೈಲ್ ಆಚೆಗೂ ಒಂದು ಜಗತ್ತಿದೆ" – ಶ್ರೀ ಶ್ರೀಧರ ಬಾಣಾವರ

ಶ್ರೀ ಶ್ರೀಧರ ಬಾಣಾವರ ಅವರು ಒಂದು ಕನ್ನಡದ ಕಿರುಹೊತ್ತಿಗೆಯ ಪರಿಚಯ ಮಾಡಿದ್ದಾರೆ. ವಿಜ್ಞಾನ, ತಂತ್ರಜ್ಞಾನದ ಹೊಸ ಹೊಸ ಸಂಕೀರ್ಣ ವಿಷಯಗಳನ್ನು ಸರಳ ಕನ್ನಡದಲ್ಲಿ ತಿಳಿಸಿಕೊಡುವ ಯುವ ಲೇಖಕ ಶ್ರೀ. ಓ.ಜಿ.ಶ್ರೀನಿಧಿ ಅವರ 'ಸ್ವಿಚ್ ಆಫ್–ಮೊಬೈಲ್ ಆಚೆಗೂ ಒಂದು ಜಗತ್ತಿದೆ' ಎಂಬ ಪುಸ್ತಕದ್ದು. ಇದು ಬಹಳ ಮುಖ್ಯವಾಗಿ ಮೊಬೈಲ್ ಫೋನಿನ ಉಪಯೋಗದ ಜೊತೆಜೊತೆಗೆ ಅದರ ಅಡ್ಡಪರಿಣಾಮಗಳು ಎಷ್ಟು? ನಿಜವಾಗಿಯೂ ಗಮನಿಸಿದರೆ ಅದು ಎಷ್ಟು ಸರಿ ಎಷ್ಟು ತಪ್ಪು ಬಳಕೆಯಲ್ಲಿ ಎಷ್ಟು ವಿವೇಚನೆ ಇರಬೇಕು ಎನ್ನುವ ಪುಸ್ತಕದೊಳಗೆ ಅಡಕವಾಗಿರುವಂತಹ ವಿಚಾರ ವಿಮರ್ಶಿಸಿದರು. ಅತಿ ಹೆಚ್ಚಿನ ಫೋನ್ ಬಳಕೆಯನ್ನು ಒಂದು ಹೈಟೆಕ್ ಚಟ ಎಂದು ಉಲ್ಲೇಖಿಸುತ್ತಾರೆ. ಎಲೆ, ಅಡಿಕೆ, ತಂಬಾಕು ಮದ್ಯಪಾನಗಳಂತಹ ಚಟಗಳ ಜೊತೆಗೆ ಮೊಬೈಲ್ ಫೋನನ್ನೂ ಸೇರಿಸುತ್ತಾರೆ. ಇದು ಖಂಡಿತಾ ನಿಜ ಅದಕ್ಕೆ ನಾವೂ ಹೊರತಾಗಿಲ್ಲ. ಕಿರು ಹೊತ್ತಿಗೆಯ ಏಳು ಅಧ್ಯಾಯಗಳ ಶೀರ್ಷಿಕೆಗಳು ಸಹ ಆಕರ್ಷಕ ಎಂದು ಹೇಳುತ್ತಾ, ಹಾಗೆಯೇ ಅವುಗಳೊಳಗಿನ ವಿವರಣೆಯೂ ಅಷ್ಟೇ ಆಕರ್ಷಕ ಎಂಬ ಅಭಿಪ್ರಾಯಪಟ್ಟಿದ್ದಾರೆ.

"ಕಾಲಕೋಶದ ಸುತ್ತ ಒಂದು ನೋಟ" – ಶ್ರೀಮತಿ ಜಯಂತಿ ಮನೋಹರ್

ನಮ್ಮ ವೇದಿಕೆಯಲ್ಲಿ ವಿದ್ವಾಂಸರುಗಳಿಗೆ ಪಂಡಿತರಿಗೆ ಕೊರತೆಯಿಲ್ಲ ಅಂತಹವರಲ್ಲಿ ಸಂಸ್ಕೃತದಲ್ಲಿ ಪಾಂಡಿತ್ಯ ಇರುವಂತಹ ಜಯಂತಿ ಮನೋಹರ್ ಅವರು ಕನ್ನಡ ಸಾಹಿತ್ಯ ವಿಮರ್ಶೆ ಮಾಡುವುದರಲ್ಲಿ ಪರಿಣಿತರು.

ಹೆಸರಾಂತ ಕಾದಂಬರಿಗಳ ವಿಮರ್ಶೆ ಅವರಿಂದ ಬರುತ್ತಲೇ ಇರುತ್ತದೆ. ಇಂದು ಅವರು ವೇದಿಕೆಯ ಮತ್ತೊಬ್ಬ ಸದಸ್ಯರಾದ ಶ್ರೀ ಶಶಿಧರ ಹಾಲಾಡಿಯವರ 'ಕಾಲಕೋಶ' ಕಾದಂಬರಿಯ ವಿಸ್ತೃತವಾದ ವಿಮರ್ಶೆಯನ್ನು ತಮ್ಮ ದೃಷ್ಟಿಕೋನಗಳಿಂದ ಅಂದರೆ ಒಂದು ಕಡೆ ಸಾಮಾಜಿಕ–ರಾಜಕೀಯ ಪ್ರಾಂತೀಯ ನೆಲೆಗಳ ದೃಷ್ಟಿ, ಮತ್ತೊಂದು ಮಾನಸಿಕ, ಜಾಗೃತಿಕ ಸ್ಥಿತಿಗತಿಗಳ ದೃಷ್ಟಿ ಹೀಗೆ ಒಂದು ಅರ್ಥಪೂರ್ಣ ವಿಮರ್ಶೆ ಮಂಡಿಸಿದರು.

"ಋಗ್ವೇದದಲ್ಲಿ ಸರಸ್ವತಿ ನದಿ ಒಂದು ವಿಶ್ಲೇಷಣೆ" – ಶ್ರೀ ಗುರುಪ್ರಸಾದ್ ಹಾಲ್ಕುರಿಕೆ

ಶ್ರೀ ಗುರುಪ್ರಸಾದ್ ಹಾಲ್ಕುರಿಕೆಯವರು ಸರಸ್ವತಿ ನದಿಯ ಬಗ್ಗೆ ಒಂದು ಉತ್ತಮ ಲೇಖನ ಮಂಡಿಸಿದರು. ವೇದಸಾಹಿತ್ಯದ ಅನೇಕ ಕಡೆ ಸರಸ್ವತಿ ನದಿಯ ಉಲ್ಲೇಖ ಇದೆ. ಭಾರತ ಸಂಸ್ಕೃತಿಯ ತೊಟ್ಟಿಲು ಅಂತ ಪರಿಗಣಿಸಿರೋದು ನಿಜ. ಈಗ ಇದು ಕಣ್ಮರೆಯಾಗಿದೆ. ಇದರ ಉಗಮ ಮತ್ತು ಹರಿವಿನ ಪಾತ್ರದ ಶೋಧನೆಯೂ ನಡೆದಿದೆ. ಸರಸ್ವತಿ ನದಿಯ ಬಗ್ಗೆ ಬಹಳ ವಿಸ್ತೃತವಾದ ವಿವರಣೆಗಳನ್ನು ಒಳಗೊಂಡಿದ್ದು ವಿಶೇಷ. ಕೇವಲ ಪುರಾಣೋಕ್ತ ವಿಷಯಗಳನ್ನು ಮಾತ್ರವಲ್ಲದೆ ಚಾರಿತ್ರಿಕ ಮತ್ತು ಭೌಗೋಳಿಕ ಅಂಶಗಳನ್ನೂ ಒಳಗೊಂಡಿದ್ದ ಮಾಹಿತಿಯುಕ್ತ ಲೇಖನ. ಶ್ಲೋಕಗಳ ಮೆರಗೂ ಇತ್ತು.

"ವಿಸ್ಮಯದಾಗರ 'ವ್ಯೋಮ ವಿಸ್ಮಯ ಮಂಡಲ'" – ಶ್ರೀ ಬೆಂ.ಶ್ರೀ. ರವೀಂದ್ರ

ಬೆಂ.ಶ್ರೀ.ರವೀಂದ್ರ ಅವರು ನಮ್ಮ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಸಂಚಾಲಕರು. ಅವರ ಮಾತು, ಶಿಸ್ತು, ಬರಹಗಳು ಎಲ್ಲಾ ಪ್ರಖರ ಮತ್ತು ನಿಖರ. ಅವರು ಇಂದು ನನ್ನನ್ನು ಕಥೆಗಾರನಂತೆ ಪರಿಗಣಿಸಿ ನನ್ನ 'ವ್ಯೋಮ ವಿಸ್ಮಯ ಮಂಡಲ' ಕಾದಂಬರಿಯ ಬಗ್ಗೆ ಮಾತನಾಡಿದರು. ಕಥಾ ಹಂದರ, ಪಾತ್ರಗಳು, ವಿಚಾರಗಳು ಇತ್ಯಾದಿಗಳ ಬಗ್ಗೆ ಮಾತನಾಡಿ, ಸೊಗಸಾದ ವಿವರಣೆಗಳೊಡನೆ ಓದುಗರ ಆಸಕ್ತಿ ಕೆರಳಿಸಿದ್ದಾರೆ. ಅದಕ್ಕಿಂತ ಹೆಚ್ಚಿಗೆ ಹೇಳಬೇಕಿಲ್ಲ.

ಮುಕ್ತಾಯ ನುಡಿಗಳು

"ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣಿತಮತಿಗಳ್ ಈ ಕನ್ನಡಿಗರ್" ಅಂದರೆ ಓದದಿದ್ದರೂ ಕಾವ್ಯ ಪ್ರಯೋಗ ಮಾಡುವಷ್ಟು ಪ್ರತಿಭಾವಂತರು ಈ ಕನ್ನಡಿಗರು ಎಂಬ ಮೆಚ್ಚುಗೆಯ ಮಾತನ್ನು ಹನ್ನೊಂದು ಶತಮಾನಗಳ ಹಿಂದೆಯೇ ಅಮೋಘವರ್ಷ ಕವಿರಾಜಮಾರ್ಗದಲ್ಲಿ ಹಾಡಿದ್ದಾನೆ. ಅದು ಖಂಡಿತ ಸತ್ಯ ಸಹಜವಾದ ಮಾತು. ಆ ಮಾತು ನಮ್ಮ ಸಾಹಿತ್ಯ ಬಳಗಕ್ಕೆ ಬಹಳ ಚೆನ್ನಾಗಿ ಅನ್ವಯಿಸುತ್ತದೆ. ಎಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಾ, ಯೋಗ್ಯತಾನುಸಾರ, ತಿಳುವಳಿಕೆಯನುಸಾರ ನಿಮ್ಮ ಮುಂದಿಟ್ಟ ನನ್ನ ಅಭಿಪ್ರಾಯ ಮಂಡನೆಯಲ್ಲಿ ಕುಂದುಕೊರತೆ ಅಥವಾ ದೋಷಗಳೇನಾದರೂ ಇದ್ದಲ್ಲಿ ಬೇಸರಪಡಬೇಡಿ ಎಂದು ಹೇಳ್ತಾ, ಕನ್ನಡವೇ ನಮ್ಮೆಲ್ಲರ ಉಸಿರಾಗಲಿ ಎಂತಲೂ ಹೇಳ್ತಾ, ನಮ್ಮ ವೇದಿಕೆಯ ಚಟುವಟಿಕೆಗಳು ಭೋರ್ಗರೆವ ನದಿಯಂತೆ ಸದಾ ಹರಿಯುತ್ತಿರಲಿ ಎಂದು ಆಶಿಸುತ್ತಾ, ಇವತ್ತಿನ ಕಾರ್ಯಕ್ರಮದಲ್ಲಿ ನನಗೆ ಅಧ್ಯಕ್ಷ ಸ್ಥಾನ ಕೊಟ್ಟ ನಿರ್ವಾಹಕರಿಗೂ, ತಾಂತ್ರಿಕ ವರ್ಗದವರಿಗೂ ಮತ್ತು ಸಹನೆಯಿಂದ ಮಾತು ಕೇಳಿಸಿಕೊಂಡ ನಿಮಗೂ ಧನ್ಯವಾದಗಳನ್ನ ಹೇಳ್ತಾ, ವಿರಾಮ ಕೋರುತ್ತೇನೆ. ನಮಸ್ಕಾರ.

– ಕೆ.ಆರ್.ಎಸ್. ಮೂರ್ತಿ

ಭೋಗ ಷಟ್ಪದಿಯಲ್ಲೊಂದು ಕಥನಕವನ

ಭೋಗದ ಭಾಗ್ಯ

ಎಂದಿನಂತೆ ನಾನು ಬಂದು
ತಂದೆನೊಂದು ಕಥೆಯನಿಂದು
ಬಂದು ಕೇಳಿ ಮಕ್ಕಳಿದನು ಭೋಗ ಷಟ್ಪದಿ
ಅಂದವದರ ನಡೆಯ ಸೊಬಗು
ಚೆಂದವದರ ಪದದ ಲಾಸ್ಯ
ಸಂದ ಭಾಗ್ಯವೆಂದು ನಲಿವ ಹಾಡಿನಂದದಿ ೧

ಒಂದು ದೂರದೂರಿನಲ್ಲಿ
ಚೆಂದದೊಂದು ನಿಲಯದಲ್ಲಿ
ಬಂದರೆಲ್ಲ ತಿಂಡಿ ತಿನಿಸು ಸಭೆಯ ಮಾಡಲು
ನೊಂದ ಭಾವದಿಂದಲವರು
ಬೆಂದ ಮನದಿ ನೋಯುತಿದ್ದು
ಕುಂದಿ ಕುಗ್ಗಿ ಕುಳಿತರೆಲ್ಲ ಶಾಂತಿ ಪಡೆಯಲು ೨

ನೀರುದೋಸೆ ಪಲ್ಯ ಚಟ್ನಿ
ಪೂರಿ ಸಾಗು ಜೊತೆ ಚಪಾತಿ
ಸೇರಿ ವಡೆಯಲೊಂದಿಗಿಡ್ಲಿ ಬೇಗ ಬಂದವು
ಖಾರ ಹುಗ್ಗಿ ಜೊತೆಗೆ ತುಪ್ಪ
ಖೀರು ಪಾಯ್ಸ ರೊಟ್ಟಿ ಮೊಸರು
ಖಾರ ಕಡುಬು ಬೇಳೆ ಖಿಚಡಿ ಬಂದು ಕಲೆತವು ೩

ಅಕ್ಕಿ ದೋಸೆ ಬೆಣ್ಣೆ ದೋಸೆ
ಪಕ್ಕಕಿಷ್ಟು ರುಚಿಯ ಕೂಟು
ಸುಕ್ಕಿನುಂಡೆ ಬಜ್ಜಿ ಬೋಂಡ ಮುದುಡಿ ಕುಳಿತವು
ಉಕ್ಕುತಿದ್ದ ದುಃಖದಿಂದ
ಬಿಕ್ಕುತಿದ್ದ ಬಾಳೆ ಕೂಡ
ಉಕ್ಕಿ ಬಂದ ಕಣ್ಣ ನೀರನೊರೆಸಿ ಕುಳಿತಿತು ೪

ಉಳಿದ ತಿಂಡಿ ತಿನಿಸು ಕೂಡ
ತಿಳಿದು ಸಭೆಯ ಸುದ್ದಿಯನ್ನು
ತಳೆದು ಹೊಸತು ಹುರುಪಿನಿಂದ ಸೇರಿಬಿಟ್ಟವು
ತಿಳಿಯ ನೀರು ಮುಂದೆ ನಿಂತು
ಪಿಳಿಕಿಸುತ್ತ ತನ್ನ ಕಣ್ಣು
ತಿಳಿಸಿ ನಿಮ್ಮ ದುಃಖವೇನು ಪ್ರಶ್ನೆ ಮಾಡಿತು ೫

ಈಗಲೀಗ ಮಕ್ಕಳೆಲ್ಲ
ಬೇಗ ಬೇಕು ಬ್ರೆಡ್ಡು ಪೀಜ
ಬರ್ಗರೆಂದು ನೂಡಲೆಂದು ಹಟವ ಮಾಡ್ವರು
ಭೋಗಭಾಗ್ಯದಂಥ ನಮ್ಮ
ನೀಗಲವರು ಮರೆತುಬಿಟ್ಟು
ವೇಗ ಭಕ್ಷ್ಯಗಳಿಗೆ ಮಾರುಹೋಗುತಿರುವರು

ವೇಗ ಭಕ್ಷ್ಯ (fast food) ದಿನವು ಸಲ್ಲ
ಹಾಗೆ ತಿನಲು ಮಕ್ಕಳೆಲ್ಲ
ರೋಗ ಬಾಧೆ ಪಡುವರೆಂದು ನಮ್ಮ ಕಳಕಳಿ
ಮೂಗರಾಗಿ ನೋಡದಂತೆ
ಬೇಗ ಸೂಕ್ತ ದಾರಿ ಹುಡುಕ
ಲೀಗ ನಾವು ಬಂದೆವಣ್ಣ ನಿನ್ನಯಾ ಬಳಿ

ಮಾತನಾಡಿ ದೋಸೆ ತಾನು
ಸುತ್ತಲೆಲ್ಲ ತಿರುಗಿನೋಡಿ
ಮತ್ತೆ ನೀರಿನತ್ತ ಮೊಗವ ಮಾಡಿ ನಿಂತಿತು
ಪ್ರೀತಿ ಮಮತೆ ಮಕ್ಕಳತ್ತ
ತುತ್ತನಿಡುವ ತಾಯರೀತಿ
ಮುತ್ತಿನಂಥ ನುಡಿಗೆ ನೀರು ಮೌನವಾಯಿತು ೮

ಇವರ ಮಾತು ಕೇಳುತಿದ್ದ
ಕುವರನೊಬ್ಬನಲ್ಲೆ ಕುಳಿತು
ತವಕದಿಂದಲೆಲ್ಲರನ್ನು ನೋಡುತಿದ್ದನು
ಅವರ ನೊಂದ ಮಾತಿನಲ್ಲಿ
ನವಿರು ಪ್ರೀತಿ ಮಕ್ಕಳಲ್ಲಿ
ಸವಿಯ ಭಾವ ಮನದೊಳಿಹುದನವನು ಕಂಡನು

ಇನ್ನು ಹೀಗೆ ಮಾಡಲಾರೆ
ನನ್ನ ಹಟವ ತೊರೆದುಬಿಡುವೆ
ತಿನ್ನಲಾರೆ ಸಿದ್ಧ ಭಕ್ಷ್ಯ ಹೀಗೆ ಪ್ರತಿದಿನ
ನನ್ನ ತಮ್ಮ ತಂಗಿಯೊಡನೆ
ನನ್ನ ಮನದ ಮಾತನಾಡಿ
ಖಿನ್ನರಿವರು ನಗುತ ತೆರಳುವಂತೆ ಮಾಡ್ವೆ ನಾ

ಒಳಗೆ ಹೋದ ಕುವರ ತಾನು
ಬಳಸಿ ತಮ್ಮ ತಂಗಿಯನ್ನು
ತಿಳಿಸಿ ಹೇಳ್ದ ಸಭೆಯ ಕಥೆಯನೆಲ್ಲ ಚೆಂದದಿ
ತಿಳಿದು ವಿಷಯ ಬುದ್ಧಿ ಬಂದು
ತಿಳಿಯ ಮನಸಿನಿಂದಲವರು
ಗಳಿಗೆಯಲ್ಲೆ ನಿಂತರೆಲ್ಲ ತಿನಿಸು ಮುಂಬದಿ ೧೧

ಸೆಳೆದು ಸಭೆಯ ಗಮನವನ್ನು
ಹೊಳೆವ ಮೊಗದ ಕುವರ ನುಡಿದ
ತಿಳಿವು ಬಂದಿತೀಗ ನಮಗೆ ನಿಜದ ಬಂಧುವೇ
ಅಳಿದು ಹೋಯ್ತು ನಮ್ಮ ಭ್ರಮೆಯು
ತಿಳಿಯಿತೀಗ ನಿಮ್ಮ ಬೆಲೆಯು
ಕಳೆಯಲಿಹೆವು ನಿಮ್ಮ ಚಿಂತೆ ನಂಬಿ ಬಳಗವೇ

ಇಂದಿನಿಂದ ಬಿಡೆವು ನಿಮ್ಮ
ನೆಂದು ಪಣವ ತೊಡುತಲಿಹೆವು
ಕುಂದದಿರಲಿ ನಿಮ್ಮ ಮೊಗವು ನಗುತ ತೆರಳಿರಿ
ಎಂದಿನಂತೆ ನೀವ್ಗಳೆಲ್ಲ
ಚೆಂದದಿಂದ ದಿನವು ಬಂದು
ಮಂದಿ ಜಗದಿ ಸುಖದಿ ಬಾಳಲೆಂದು ಹರಸಿರಿ

ಕುವರ ನುಡಿದ ಮಾತು ಕೇಳಿ
ವಿವಿಧ ಬಗೆಯ ತಿಂಡಿಗಳಿಗೆ
ಕವಿದ ಕಷ್ಟ ಕಳೆದು ಹೀಗೆ ಹರಸಿ ನುಡಿದವು
ಭುವಿಯಲಿರುವ ಜನತೆಯೆಲ್ಲ
ಸವಿಯುತಿರಲಿ ನಮ್ಮನೆಲ್ಲ
ಭುವನ ಭಾಗ್ಯವಿದುವೆ ನಮಗನಂತವೆಂದವು

ಕತೆಯು ಹರಡಿ ಲೋಕದಲ್ಲಿ
ಮತಿಯು ಬೆಳಗಿ ಮಕ್ಕಳಲ್ಲಿ
ಖತಿಯ ಮರೆತು ತಿನುವರೆಲ್ಲ ತಾಯಿ ಕೊಟ್ಟುದು
ಸತತ ಶಕ್ತಿ ಪುಷ್ಟಿ ಪಡೆದು
ಜತನದಿಂದ ದೇಹ ಪೊರೆದು
ಹಿತದಿ ಬೆಳೆವರೆಲ್ಲರದಕೆ ಖುಷಿಯು ನಮ್ಮದು

- **ಶೀಲಾ ಅರಕಲಗೂಡು**

ಶಿವತತ್ವ - ಮೂರು ನುಡಿಗಳಲಿ

ಶಿವ ಭಕ್ತರೇ ಬಲ್ಲಿರಾ ಶಿವ ತತ್ವದ ಅಂತರಾರ್ಥವನು
ಶಿವನೆಂದರಾನಂದ ನಮ್ಮ ಊಹೆಗೂ ಸಿಗದ ಬ್ರಹ್ಮಾನಂದ

ಶಿವನ ವಾಹನ ಬಸವನೆಂಬರು
ಶಿವನೇನು ಅದರ ಮೇಲೆ ಕುಳಿತು ಊರು ಸುತ್ತುವನೆ
ಬಸವನೆಂಬುದು ಕಾಮ ಜಗದ ಬಯಕೆಗಳ ಸಂಕೇತ
ಮನುಜ ಅದ ಮೆಟ್ಟಿ ನಿಲ್ಲದಲೆ ದಕ್ಕದು ಶಿವನೆಂಬ ಆನಂದ

ಹುಲಿಯೆಂಬುದು ನಮ್ಮ ಮನದೊಳಗಿನ ಕ್ರೋಧ
ಕೊಂದು ಅದರ ತೊಗಲಿನ ಮೇಲೆ ಕುಳಿತಿಹನು ಶಿವನು
ಬಿಡದೆ ಕ್ರೋಧವನು ಸಿಗದೆಮಗೆ ಶಿವನೆಂಬ ಆನಂದ

ಭಸ್ಮಧಾರಿ ಮಸಣವಾಸಿ ಎಂದೆಲ್ಲ ಕರೆವರು ಶಿವನ
ಸುಡದೆ ನಶ್ವರದ ಜಗದ ಮೋಹ ಲೋಭಗಳ
ಫಲಿಸದು ಶಿವನೆಂಬ ಆನಂದ

ಮನದೊಳಗೆ ತುಂಬಿಹ ಅಷ್ಟಮದಗಳೇ ಗಜಾಸುರನೆಂಬ ರಕ್ಕಸನು
ಮೊದಲು ಈ ಮದಗಳ ನಿಗ್ರಹಿಸಿ ಬಳಿಕ ಬಾ ಎಂದು
ಗಜ ಚರ್ಮ ಧರಿಸಿಹನು ಪರಶಿವನು

ಮತ್ಸರವೆಂಬ ವಿಷ ಕಂಠದಿಂದ ಒಳ ಹೊರಗೆ ಜಾರದಿರಲೆಂದು
ತೋರಲು ವಿಷಕಂಠನಾಗಿಹನು ಶಿವ
ತೊರೆಯದೀ ಮನದ ಮತ್ಸರವ ಒಲಿಯುವನೆ ಪರಶಿವನು

ಷಟ್ ಚಕ್ರಗಳೆಂಬ ಆರು ಶಕ್ತಿ ಕೇಂದ್ರಗಳಂತೆ ಬೆನ್ನಹುರಿಯೊಳಗೆ
ಮೂಲಾಧಾರದಲಿ ಸುಪ್ತವಾಗಿಹ ಪ್ರಾಣ ಶಕ್ತಿಯದು
ಜಾಗ್ರತಗೊಳಿಸೆ ಚಲಿಸಿ ನಾಗರೂಪದಲಿ
ಶಿರದ ಸಹಸ್ರಾರದಲಿ ಮುಕ್ತವೆನ್ನುವುದು ಯೋಗ ಶಾಸ್ತ್ರ

ಎದೆಯಗೂಡಿನ ಅನಾಹತ ಚಕ್ರದ ಅಧಿಪತಿಯು ಶಿವನೆಂಬುದನು
ಸಾರುತಿದೆ ಅವನ ಕೊರಳಿನ ನಾಗಾಭರಣ
ಡಮರುಗವೆ ಸೃಷ್ಟಿಯ ಅನಾಹತನಾದ ಓಂಕಾರ

ಶಿವನ ಕೈ ತ್ರಿಶೂಲವದು ಮೇರುದಂಡದಿ ಮಿಡಿವ
ಇಡಾ ಪಿಂಗಳಾ ಸುಷುಮ್ನವೆನುವ ಮೂರು ಮುಖ್ಯ ಪ್ರಾಣ ನಾಡಿಗಳು
ಶಿವ ಸನ್ನಿದಿಯ ಪರಮ ಶಾಂತಿಯ ಸೂಚಕವು
ರುದ್ರಾಕ್ಷಿ ಸರಮಾಲೆಗಳು.

ಶಿವ ಸಾಕ್ಷಾತ್ಕಾರವಾದಂದು ತೆರೆವುದಾ
ಶಿವನ ಹಣೆಯ ಮೇಲಿರುವ ಮೂರನೆ ಕಣ್ಣು
ಸಹಸ್ರಾರದಲಿ ನೆಲೆಗೊಂಡ ಮನಸೆ ಶಿವ ಶಿರದ ಚಂದ್ರಮನು
ಝುಟೆಯನೇರಿದ ಗಂಗೆ ಶಿವ ಸನ್ನಿಧಿಯಲಿ ಮನ ಸವಿಯುವ ಅಮೃತವು

ಶಿವ ತತ್ವವಿದು ಮೂರು ನುಡಿಗಳಲಿ
ಅರಿತಿದನು ಸಾಧಿಸು ಮನವ ಮಾಗಿಸು ಮನುಜ
ಶಿವನ ಕಾಣುವೆ ನೀ ಅತಿ ಶೀಘ್ರದಲ್ಲಿ

- ರಾಜೇಂದ್ರ ಪ್ರಸಾದ್